# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ಡಿಸೆಂಬರ್ 27, 2020

ಸಂಪುಟ : 47 ಸಂಚಿಕೆ : 237 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com




ಬೀ ಈಟರ್ ಬೇಟೆ : ನಗರದ ಕುಂದುವಾಡ ಕೆರೆಯಲ್ಲಿ ಬೀ ಈಟರ್ (ಜೇನು ಹಿಡುಕ) ಜಿಟ್ಟೆಯೊಂದನ್ನು ಕಬಳಿಸುವ ದೃಶ್ಯವಿದು. ಜೇನು ಹುಳಗಳಂತಹ ಸಣ್ಣ ಹುಳುಗಳನ್ನು ತಿನ್ನುವ ಕಾರಣ ಈ ಪಕ್ಷಿಗೆ ಜೇನು ಹಿಡುಕ ಎಂಬ ಹೆಸರಿದೆ.

## ನಾಡಿದ್ದು ಮಾತುಕತೆಗೆ ರೈತರ ಸಮ್ಮತಿ

### ಕೃಷಿ ಕಾಯ್ದೆಗಳ ವಾಪಸ್, ಕನಿಷ್ಠ ಬೆಂಬಲ ಬೆಲೆ ಅಜೆಂಡಾದಲ್ಲಿ ಸೇರಿಸಲು ಷರತ್ತು

ನವದೆಹಲಿ, ಡಿ. 26 - ಕೇಂದ್ರ ಸರ್ಕಾರದ ಜೊತೆ ಕೃಷಿ ಕಾಯ್ದೆಗಳ ಕುರಿತು ಮಾತುಕತೆ ನಡೆಸಲು ಪ್ರತಿಭಟನಾ ನಿರತ ರೈತರು ಸಮ್ಮತಿಸಿದ್ದಾರೆ. ಆದರೆ, ಮಂಗಳವಾರದ ಪ್ರಸ್ತಾಪಿತ ಮಾತುಕತೆಯ ಅಜೆಂಡಾದಲ್ಲಿ ಮೂರು ಕೃಷಿ ಕಾಯ್ದೆಗಳ ವಾಪಸ್ ಪಡೆಯುವ ಮತ್ತು ಕನಿಷ್ಠ ಬೆಂಬಲ ಬೆಲೆಯ ಗ್ಯಾರಂಟಿ ನೀಡುವ ಪ್ರಸ್ತಾಪ ಇರಲೇಬೇಕು ಎಂದು ತಿಳಿಸಿದ್ದಾರೆ.

ದೆಹಲಿಯಲ್ಲಿ ಪ್ರತಿಭಟನೆ ನಡೆಸುತ್ತಿರುವ ರೈತ ಸಂಘಟನೆಗಳ ಜೊತೆ ಮಾತುಕತೆ ನಡೆಸಲು ಕೇಂದ್ರ ಸರ್ಕಾರ ಪ್ರಸ್ತಾಪಿಸಿತ್ತು. ಕಳೆದ ಒಂದು ತಿಂಗಳಿನಿಂದ ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ. ಈ ಹಿಂದೆ ನಡೆಸಿದ ಐದು ಸುತ್ತಿನ ಮಾತುಕತೆಗಳು ವಿಫಲವಾಗಿವೆ.

ತನ್ನ ಕಟು ಟೀಕಾಕಾರರೂ ಸೇರಿದಂತೆ ಎಲ್ಲರ ಜೊತೆ ಮಾತುಕತೆ ನಡೆಸಲು ಸರ್ಕಾರ ಸಿದ್ಧವಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದರು.

ಕೃಷಿಕರ ವಿಷಯಗಳು ವಾಸ್ತವಾಂಶ ಹಾಗೂ ತಾರ್ಕಿಕವಾಗಿದ್ದರೆ ಮಾತುಕತೆ ನಡೆಸಲು ಸಿದ್ಧ ಎಂದು ಹೇಳಿದ್ದ ಪ್ರಧಾನಿ, ರಾಜಕೀಯ ವಿರೋಧಿಗಳ ಮಾತುಕತೆ ಕಗ್ಗಂಟಾಗಲು ಕಾರಣವಾಗಿದೆ ಎಂದು ಆರೋಪಿಸಿದ್ದರು.

ಕೇಂದ್ರ ಕೃಷಿ ಹಾಗೂ ರೈತರ ಕಲ್ಯಾಣ ಸಚಿವಾಲಯದ ಜಂಟಿ ಕಾರ್ಯದರ್ಶಿ ವಿವೇಕ್ ಅಗರ್‌ವಾಲ್ ಅವರಿಗೆ ಪತ್ರ ಬರೆದಿರುವ ಪ್ರತಿಭಟನಾ ನಿರತ ಸಂಘಟನೆಗಳ ಒಕ್ಕೂಟವಾಗಿರುವ ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ), ಡಿ.29ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಮಾತುಕತೆ ನಡೆಸಲು ಪ್ರಸ್ತಾಪಿಸಿರುವುದಾಗಿ ತಿಳಿಸಿದೆ.

ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಭಾರತೀಯ ಕಿಸಾನ್ ಯೂನಿಯನ್ ನಾಯಕ ರಾಕೇಶ್ ಟಿಕಾಯತ್, ಮೂರು ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯುವ ಪ್ರಕ್ರಿಯೆ ಹಾಗೂ ಕನಿಷ್ಠ ಬೆಂಬಲ ಬೆಲೆಗಳು ಮಾತುಕತೆ ಮುಂದುವರೆಸುವ ಅಜೆಂಡಾದ ಭಾಗವಾಗಿರಬೇಕು ಎಂದು ಹೇಳಿದ್ದಾರೆ.

ಇದೇ ವೇಳೆ ಪ್ರತಿಭಟನೆ ತೀವ್ರಗೊಳಿಸಲೂ ಸಹ ರೈತರು ನಿರ್ಧರಿಸಿದ್ದಾರೆ.

ಡಿಸೆಂಬರ್ 30ರಂದು ಕುಂಡಲಿ - ಮನೋಸರ್ - ಪಲ್ವಾಲ್ ಹೆದ್ದಾರಿಯಲ್ಲಿ ಟ್ರ್ಯಾಕ್ಟರ್ ಮೆರವಣಿಗೆ ನಡೆಸಲಾಗುವುದು ಎಂದು ರೈತ ಮುಖಂಡ ದರ್ಶನ್ ಪಾಲ್ ತಿಳಿಸಿದ್ದಾರೆ.

ನಾವು ಸಿಂಘುವಿನಿಂದ ಕೆ.ಎಂ.ಪಿ.ವರೆಗೆ ಮೆರವಣಿಗೆ ನಡೆಸಲಿದ್ದೇವೆ. ಸುತ್ತಲಿನ ರಾಜ್ಯಗಳ ಜನರು ಟ್ರ್ಯಾಕ್ಟರ್‌ಗಳಲ್ಲಿ ಬಂದು ಜೊತೆಯಾಗಬೇಕು. ನಾವು ಹೆದ್ದಾರಿ ತಡೆಯಬಾರದು ಎಂದಿದ್ದರೆ ಸರ್ಕಾರ ಮೂರು ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯಲಿ ಎಂದು ಇನ್ನೋರ್ವ ರೈತ ಮುಖಂಡ ರಾಜಿಂದರ್ ಸಿಂಗ್ ಆಗ್ರಹಿಸಿದ್ದಾರೆ.

## ಕುರುಬ ಸಮಾಜಕ್ಕೆ ಎಸ್.ಟಿ. ಸ್ಥಾನ ನೀಡುವಂತೆ ಒತ್ತಾಯಿಸಿ ಜ.6ರಂದು ನಗರದಲ್ಲಿ ಸಮಾವೇಶ

### ಎಸ್.ಟಿ. ಹೋರಾಟದಲ್ಲಿ ಆರ್‌ಎಸ್‌ಎಸ್ ಪಾತ್ರ ಎಂಬುದು ಸತ್ಯಕ್ಕೆ ದೂರ

ದಾವಣಗೆರೆ, ಡಿ. 26 – ಕುರುಬರ ಎಸ್.ಟಿ. ಮೀಸಲಾತಿ ಹೋರಾಟದ ಹಿಂದೆ ಆರ್.ಎಸ್.ಎಸ್. ಪಾತ್ರವಿದೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿರುವುದು ಸತ್ಯಕ್ಕೆ ದೂರವಾದದ್ದು ಎಂದು ಹೇಳಿರುವ ಎಸ್.ಟಿ. ಹೋರಾಟ ರಾಜ್ಯ ಸಮಿತಿ ಕಾರ್ಯದರ್ಶಿ ಹಾಗೂ ಕಾಂಗ್ರೆಸ್ ಮುಖಂಡ ಹೆಚ್.ಎಂ. ರೇವಣ್ಣ, ಈ ಬಗ್ಗೆ ಸಿದ್ದರಾಮಯ್ಯ ಜೊತೆ ಮಾತನಾಡಿ ವಿಷಯ ಸ್ಪಷ್ಟಪಡಿಸುವುದಾಗಿ ಹೇಳಿದ್ದಾರೆ.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ಎಸ್.ಟಿ. ಮೀಸಲಾತಿ ಹೋರಾಟ ಕುರುಬರಿಂದ, ಕುರುಬರಿಗಾಗಿ, ಕುರುಬರಿಗೋಸ್ಕರ ನಡೆಯುತ್ತಿದೆ. ಇದಕ್ಕೂ ಆರ್.ಎಸ್.ಎಸ್.ಗೂ ಸಂಬಂಧವಿಲ್ಲ ಎಂದು ಹೇಳಿದರು.



ಕಾಗಿನೆಲೆ ಮಠದ ನೇತೃತ್ವದಲ್ಲಿ ಎಸ್.ಟಿ. ಹೋರಾಟ ನಡೆಯುತ್ತಿದೆ. ಇದಕ್ಕೆ ಸಿದ್ದರಾಮಯ್ಯನವರ ಜೊತೆ ಮಾತನಾಡಲಾಗಿತ್ತು. ಅವರು ನಮ್ಮ ಪ್ರಶ್ನಾತೀತ ನಾಯಕರು. ಅವರಿಗೆ ತಪ್ಪು ಮಾಹಿತಿ ದೊರೆತಿದ್ದರೆ ಮಾತನಾಡಿ ಬಗೆಹರಿಸುತ್ತೇವೆ. ಎಂದು ಹೇಳಿದರು.

ಸಿದ್ದರಾಮಯ್ಯನವರು ಮಾಜಿ ಮುಖ್ಯಮಂತ್ರಿ. ಅವರು ಅಹಿಂದ ಎಂದು ಗುರುತಿಸಿಕೊಂಡಿದ್ದಾರೆ. ಈ ಕಾರಣದಿಂದಾಗಿ ಹೋರಾಟದಲ್ಲಿ ಬೀದಿಗೆ ಬರುವುದಿಲ್ಲ, ಆದರೆ ನಿಮ್ಮ ಜೊತೆ ಇರುತ್ತೇನೆ ಎಂದು ಹೇಳಿದ್ದಾರೆ. ಸಿದ್ದರಾಮಯ್ಯನವರೂ ಕುರುಬರಿಗೆ ಎಸ್.ಟಿ. ಸ್ಥಾನಮಾನ ನೀಡುವುದನ್ನು ವಿರೋಧಿಸಿಲ್ಲ ಎಂದು ತಿಳಿಸಿದರು.

ಕಾಗಿನೆಲೆ ಪೀಠದ ಜಗದ್ಗುರು ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಅವರು ಬರುವ ಜನವರಿ 15ರಂದು ಕಾಗಿನೆಲೆಯಿಂದ ಬೆಂಗಳೂರಿಗೆ ಪಾದಯಾತ್ರೆ ನಡೆಸಲಿದ್ದಾರೆ. ಇದಕ್ಕೂ ಮುಂಚೆ ವಿಭಾಗ ಮಟ್ಟದಲ್ಲಿ ಸಮಾವೇಶಗಳನ್ನು ನಡೆಸಲಾಗುವುದು. ದಾವಣಗೆರೆ, ಹಾವೇರಿ ಹಾಗೂ ಚಿತ್ರದುರ್ಗ ಜಿಲ್ಲೆಗಳ ಒಳಗೊಂಡ ಎಸ್.ಟಿ. ಹೋರಾಟ ಸಮಾವೇಶ ದಾವಣಗೆರೆಯಲ್ಲಿ ಜನವರಿ 6ರಂದು ನಡೆಯಲಿದೆ ಎಂದವರು ಇದೇ ಸಂದರ್ಭದಲ್ಲಿ ತಿಳಿಸಿದರು.

ಕುರುಬರಲ್ಲಿ ಶೇ.40ರಷ್ಟು ಜನರು ಅಲೆಮಾರಿಗಳಿದ್ದಾರೆ. (6ನೇ ಪುಟಕ್ಕೆ)

## ಗ್ರಾಮ ಪಂಚಾಯಿತಿ ಚುನಾವಣೆ 2ನೇ ಹಂತಕ್ಕೆ ಇಂದು ಮತದಾನ

ಬೆಂಗಳೂರು, ಡಿ. 26 - ಕೊರೊನಾ ಭೀತಿಯಲ್ಲೇ ಗ್ರಾಮ ಪಂಚಾಯಿತಿಗಳಿಗೆ ನಾಳೆ ಸಂಜೆ ವೇಳೆಗೆ ಚುನಾವಣಾ ಮತದಾನ ಅಂತ್ಯಗೊಳ್ಳಲಿದೆ.

ಕಳೆದ 22 ರಂದು ಶೇ. 50 ಕ್ಷೇತ್ರಗಳಿಗೆ ಮೊದಲ ಹಂತದಲ್ಲಿ ಚುನಾವಣೆ ನಡೆದರೆ, ಎರಡನೇ ಹಂತದಲ್ಲಿ 109 ತಾಲ್ಲೂಕುಗಳ 2,709 ಪಂಚಾಯಿತಿಗಳಿಗೆ ಚುನಾವಣೆ ನಡೆಯಲಿದೆ.

ಕೊರೊನಾ ಸಂಕಷ್ಟದ ನಡುವೆ ಬಿಹಾರ ವಿಧಾನಸಭಾ ಚುನಾವಣೆ ನಡೆದ ನಂತರ ಸಾರ್ವತ್ರಿಕವಾಗಿ ನಡೆಯುತ್ತಿರುವ ದೊಡ್ಡ ಚುನಾವಣೆ ಇದಾಗಿದೆ. ಮೊದಲ ಹಂತದಲ್ಲಿ ಎಲ್ಲಿಯೂ ಸಂಕಷ್ಟಕ್ಕೆ ಸಿಲುಕಿಲ್ಲ. ಎರಡನೇ ಹಂತದ ಚುನಾವಣೆಯನ್ನು ಶಾಂತಿಯಿಂದ



ಪೂರ್ಣಗೊಳಿಸಲು ರಾಜ್ಯ ಚುನಾವಣಾ ಆಯೋಗ ಸಕಲ ಸಿದ್ಧತೆ ಮಾಡಿಕೊಂಡಿದೆ.

ಸಂಕಷ್ಟದಲ್ಲಿ ಚುನಾವಣೆ ನಡೆಸಲು ಸರ್ಕಾರ ಮತ್ತು ರಾಜಕೀಯ ಪಕ್ಷಗಳಿಗೆ ಆಸಕ್ತಿ ಇಲ್ಲದಿದ್ದರೂ, ರಾಜ್ಯ ಹೈಕೋರ್ಟ್ ಕೆಳ ಹಂತದ ಅಧಿಕಾರ ಕೇಂದ್ರಗಳಿಗೆ ಚುನಾವಣೆ ನಡೆಸಿ, ಅವರಿಗೆ ಅಧಿಕಾರ ನೀಡಿ, ಇಂತಿಷ್ಟು ಸಮಯದಲ್ಲೇ ಚುನಾವಣಾ ಪ್ರಕ್ರಿಯೆ ಪೂರ್ಣಗೊಳಿಸಬೇಕೆಂದು ರಾಜ್ಯ ಚುನಾವಣಾ ಆಯೋಗಕ್ಕೆ ಆದೇಶ ನೀಡಿತ್ತು.

ನ್ಯಾಯಾಲಯದ ಆದೇಶದಂತೆ ಎರಡು ಹಂತಗಳಲ್ಲಿ ಚುನಾವಣಾ ಪ್ರಕ್ರಿಯೆ ಕೈಗೆತ್ತಿಕೊಂಡ ಆಯೋಗ, ನಾಳೆ ಎರಡನೇ ಹಂತದಲ್ಲಿ 43,291 ಕ್ಷೇತ್ರಗಳಲ್ಲಿ 39,378 ಸ್ಥಾನಗಳಿಗೆ ಚುನಾವಣೆ ನಡೆಸಲಿದೆ.

ಇದರಲ್ಲಿ ಈಗಾಗಲೇ 3,697 ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಉಳಿದ ಕ್ಷೇತ್ರಗಳಲ್ಲಿ ತಮ್ಮನ್ನು ಆಯ್ಕೆ ಮಾಡಿಕೊಳ್ಳಲು 1,05,431 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಶುಕ್ರವಾರ ಸಂಜೆಯೇ ಪ್ರಚಾರ ಅಂತ್ಯಗೊಂಡಿದೆ. ಆದರೆ ಅಭ್ಯರ್ಥಿಗಳು ಮಾತ್ರ ಮನೆ ಮನೆಗೆ ತೆರಳಿ ಮತದಾರರನ್ನು (6ನೇ ಪುಟಕ್ಕೆ)

## ಮೂರು ತಾಲ್ಲೂಕುಗಳಲ್ಲಿ ಇಂದು ಪಂಚಾಯ್ತಿ ಮತದಾನ

### 641 ಅಭ್ಯರ್ಥಿಗಳ ಹಣೆಬರಹ ನಿರ್ಧರಿಸಲಿರುವ 3.90 ಲಕ್ಷ ಮತದಾರರು

ದಾವಣಗೆರೆ, ಡಿ. 26 – ಜಿಲ್ಲೆ ಹರಿಹರ, ಚನ್ನಗಿರಿ ಹಾಗೂ ನ್ಯಾಮತಿ ತಾಲ್ಲೂಕುಗಳ ಗ್ರಾಮ ಪಂಚಾಯ್ತಿಗಳಿಗೆ ಭಾನುವಾರ ಎರಡನೇ ಹಂತದ ಮತದಾನ ನಡೆಯಲಿದ್ದು, ಇದರೊಂದಿಗೆ ಪಂಚಾಯ್ತಿ ಮತದಾನ ಪ್ರಕ್ರಿಯೆಗೆ ತೆರೆ ಬೀಳಲಿದೆ.

ಮೂರು ತಾಲ್ಲೂಕುಗಳ 101 ಪಂಚಾಯ್ತಿಗಳ 1,112 ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. 164 ಸ್ಥಾನಗಳಿಗೆ ಈಗಾಗಲೇ ಅವಿರೋಧ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡಿದೆ. ಹರಿಹರದ ಒಂದು ಹಾಗೂ ನ್ಯಾಮತಿಯ ಐದು ಸ್ಥಾನಗಳಿಗೆ ಯಾರೂ ನಾಮಪತ್ರ ಸಲ್ಲಿಸಿಲ್ಲ.

ಚನ್ನಗಿರಿಯಲ್ಲಿ ಅತಿ ಹೆಚ್ಚು 31 ಪಂಚಾಯ್ತಿಗಳಿದ್ದು, 641 ಸ್ಥಾನಗಳಿಗೆ ಮತದಾನ ನಡೆಯಲಿದೆ. ಹರಿಹರದ 23 ಪಂಚಾಯ್ತಿಗಳ 295 ಮತ್ತು ನ್ಯಾಮತಿಯ 17 ಪಂಚಾಯ್ತಿಗಳ 176 ಸ್ಥಾನಗಳಿಗೆ ಬೆಳಿಗ್ಗೆ 7 ರಿಂದ ಸಂಜೆ 5 ರವರೆಗೆ ಮತದಾನ ನಡೆಯಲಿದೆ.

ಈ ಚುನಾವಣೆಯಲ್ಲಿ 3.90 ಲಕ್ಷ ಮತದಾರರು ಅಭ್ಯರ್ಥಿಗಳ ಹಣೆಬರಹ ನಿರ್ಧರಿಸಲಿದ್ದಾರೆ. ಚನ್ನಗಿರಿಯ 2.29 ಲಕ್ಷ ಹರಿಹರದ 1 ಲಕ್ಷ ಹಾಗೂ ನ್ಯಾಮತಿಯ 59,704 ಮತದಾರರು ಮತದಾನ ಮಾಡುವ ಅಧಿಕಾರ ಪಡೆದುಕೊಂಡಿದ್ದಾರೆ.

ಚುನಾವಣೆಗಾಗಿ ತಲಾ 760 ಪಿ.ಆರ್.ಒ. ಹಾಗೂ ಎ.ಪಿ.ಆರ್.ಒ., 150 ಪಿ.ಒ. ಸೇರಿದಂತೆ 3,040 ಸಿಬ್ಬಂದಿಯನ್ನು (6ನೇ ಪುಟಕ್ಕೆ)

## ವಂಚನೆಯ ಮತಾಂತರಕ್ಕೆ 10 ವರ್ಷ ಜೈಲು

### ಧಾರ್ಮಿಕ ಸ್ವಾತಂತ್ರ್ಯ ಮಸೂದೆಗೆ ಮಧ್ಯ ಪ್ರದೇಶದ ಒಪ್ಪಿಗೆ

ಭೂಪಾಲ್, ಡಿ. 26 – ಮಧ್ಯ ಪ್ರದೇಶ ಸಂಪುಟವು ಧಾರ್ಮಿಕ ಸ್ವಾತಂತ್ರ್ಯ ಮಸೂದೆಗೆ ಒಪ್ಪಿಗೆ ನೀಡಿದ್ದು, ಇದರ ಅನ್ವಯ, ಮದುವೆ ಇಲ್ಲವೇ ವಂಚನಾತ್ಮಕ ಮಾರ್ಗಗಳ ಮೂಲಕ ಮತಾಂತರ ನಡೆಸುವವರಿಗೆ ಗರಿಷ್ಠ 10 ವರ್ಷಗಳ ಜೈಲು ಹಾಗೂ 1 ಲಕ್ಷ ರೂ.ಗಳ ದಂಡ ವಿಧಿಸಲಾಗುವುದು.

ಈ ಬಗ್ಗೆ ಹೇಳಿಕೆ ನೀಡಿರುವ ಗೃಹ ಸಚಿವ ನರೋತ್ತಮ್ ಮಿಶ್ರ, ವಂಚನೆ ಇಲ್ಲವೇ ಆಮಿಷ, ಬೆದರಿಕೆ ಮೂಲಕ ಮತಾಂತರ ನಡೆಸುವುದಕ್ಕೆ ದೇಶದಲ್ಲೇ ಅತಿ ಹೆಚ್ಚಿನ ಕಠಿಣ ಶಿಕ್ಷೆ ನೀಡುವ ಮಸೂದೆ ಇದಾಗಿದೆ ಎಂದಿದ್ದಾರೆ.

ಪ್ರಸ್ತಾಪಿತ ಕಾಯ್ದೆಯ ಅನ್ವಯ ಅಪರಾಧ ಸಂಜ್ಞೇಯವಾಗಿದ್ದು, ಇದಕ್ಕೆ ಜಾಮೀನಿರುವುದಿಲ್ಲ. ಸಂಪುಟದ ಒಪ್ಪಿಗೆ ಪಡೆದಿರುವ ಮಸೂದೆಯನ್ನು ರಾಜ್ಯ ವಿಧಾನಸಭೆಯಲ್ಲಿ ಮಂಡಿಸಲಾಗುವುದು.

ಕಾಯ್ದೆ ಉಲ್ಲಂಘಿಸಿ ನಡೆಸಲಾಗುವ ಯಾವುದೇ ಮದುವೆ ಅಸಿಂಧುವಾಗಲಿದೆ. ಇಂತಹ ಪ್ರಕರಣಗಳ ವಿಚಾರಣೆಯನ್ನು ಕೌಟುಂಬಿಕ ನ್ಯಾಯಾಲಯ ನಡೆಸಲಿದೆ ಎಂದು ಸಚಿವ ಮಿಶ್ರ ಹೇಳಿದ್ದಾರೆ. ಮತಾಂತರವಾಗಲು ಬಯಸುವವರು ಜಿಲ್ಲಾ ಆಡಳಿತದ ಎದುರು 60 ದಿನಗಳ ಮುಂಚೆ ಅರ್ಜಿ ಸಲ್ಲಿಸಬೇಕಾಗುತ್ತದೆ. ಮತಾಂತರದ ಸೌಲಭ್ಯ ಕಲ್ಪಿಸುವವರು 60 ದಿನ ಮುಂಚಿತವಾಗಿ ಮಾಹಿತಿ ನೀಡಬೇಕಾಗುತ್ತದೆ. ಇದನ್ನು ಉಲ್ಲಂಘಿಸುವ ವರಿಗೆ ಐದು ವರ್ಷಗಳ ಜೈಲು ಹಾಗೂ 50 ಸಾವಿರ ರೂ.ಗಳ ದಂಡವಿದೆ ಎಂದೂ ಅವರು ಹೇಳಿದ್ದಾರೆ.

ನಿಯಮ ಉಲ್ಲಂಘಿಸಿ ಮತಾಂತರ ನಡೆಸಿದವರಿಗೆ ಐದು ವರ್ಷ ಜೈಲು ಹಾಗೂ 25 ಸಾವಿರ ರೂ.ಗಳ ದಂಡ ವಿಧಿಸಲಾಗುವುದು. ಪರಿಶಿಷ್ಟ ಜಾತಿ, ಪಂಗಡ ಹಾಗೂ ಅಪ್ರಾಪ್ತರ ಮತಾಂತರ ಪ್ರಕರಣಗಳಲ್ಲಿ ಎರಡು ವರ್ಷಗಳಿಂದ ಹತ್ತು ವರ್ಷಗಳವರೆಗೆ ಜೈಲು ಹಾಗೂ 50 ಸಾವಿರ ರೂ.ಗಳ (6ನೇ ಪುಟಕ್ಕೆ)

## ಎನ್‌ಡಿಎದಿಂದ ಹೊರ ಬಿದ್ದ ಲೋಕ ತಾಂತ್ರಿಕ ಪಾರ್ಟಿ

ಜೈಪುರ, ಡಿ. 26 – ಕೃಷಿ ಕಾಯ್ದೆಗಳ ಹಿನ್ನೆಲೆಯಲ್ಲಿ ಬಿಜೆಪಿ ನೇತೃತ್ವದ ಎನ್.ಡಿ.ಎ.ದಿಂದ ಹೊರ ಬರುವುದಾಗಿ ರಾಷ್ಟ್ರೀಯ ಲೋಕ ತಾಂತ್ರಿಕ ಪಾರ್ಟಿ (ಆರ್‌ಎಲ್‌ಪಿ) ಸಂಚಾಲಕ ಹಾಗೂ ನಗೌರ್ ಸಂಸದ ಹನುಮಾನ್ ಬೇನಿವಾಲ್ ಘೋಷಿಸಿದ್ದಾರೆ.

ನಾನು ಎನ್.ಡಿ.ಎ. ಜೊತೆ ಫೆವಿಕಾಲ್ ರೀತಿಯಲ್ಲಿ ಅಂಟಿಕೊಂಡಿಲ್ಲ. ನಾನು ಎನ್.ಡಿ.ಎ.ದಿಂದ ಬೇರೆ ಆಗುತ್ತಿದ್ದೇನೆ ಎಂದು ರಾಜಸ್ಥಾನದ ಅಲ್ವಾರ್ ಜಿಲ್ಲೆಯ ಶಹಜಹಾನ್‌ಪುರದಲ್ಲಿ ಆಯೋಜಿಸಲಾಗಿದ್ದ ರೈತರ ಸಮಾವೇಶದಲ್ಲಿ ಮಾತನಾಡುತ್ತಿದ್ದ ಅವರು ಹೇಳಿದ್ದಾರೆ. ಇದಕ್ಕೂ ಮುಂಚೆ ಸೆಪ್ಟೆಂಬರ್‌ನಲ್ಲಿ ಶಿರೋಮಣಿ ಅಕಾಲಿ ದಳವು ಕೃಷಿ ಕಾಯ್ದೆಗಳ ಹಿನ್ನೆಲೆಯಲ್ಲಿ ಎನ್.ಡಿ.ಎ.ದಿಂದ ಹೊರ ಬಿದ್ದಿತ್ತು. ಪಂಜಾಬ್ ಹಾಗೂ ಹರಿಯಾಣದ ಸಾವಿರಾರು ರೈತರು ದೆಹಲಿ ಗಡಿಯಲ್ಲಿ ಕಾಯ್ದೆಗಳ ವಿರುದ್ಧ ನವೆಂಬರ್ 26ರಿಂದ ಪ್ರತಿಭಟನೆ ನಡೆಸುತ್ತಿದ್ದಾರೆ.

ಬೇನಿವಾಲ್ ಅವರು ಆರ್‌ಎಲ್‌ಪಿಯ ಏಕೈಕ ಸಂಸದರಾಗಿದ್ದಾರೆ. (6ನೇ ಪುಟಕ್ಕೆ)

## 100ನೇ ಕಿಸಾನ್ ರೈಲಿಗೆ ನಾಳೆ ಪ್ರಧಾನಿ ಚಾಲನೆ



ನವದೆಹಲಿ, ಡಿ. 26 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮಹಾರಾಷ್ಟ್ರದ ಸಂಗೋಲಾದಿಂದ ಪಶ್ಚಿಮ ಬಂಗಾಳದ ಶಾಲಿಮಾರ್‌ಗೆ ತೆರಳುವ 100ನೇ ಕಿಸಾನ್ ರೈಲಿಗೆ ನಾಳೆ ಡಿ.28ರ ಸೋಮವಾರದಂದು ವಿಡಿಯೋ ಕಾನ್ಫರೆನ್ಸ್ ಮೂಲಕ ಹಸಿರು ನಿಶಾನೆ ತೋರಲಿದ್ದಾರೆ.

ಹಲವಾರು ತರಕಾರಿ ಹಾಗೂ ಹಣ್ಣುಗಳನ್ನು ಸಾಗಿಸಲು ಕಿಸಾನ್ ರೈಲುಗಳು ನೆರವಾಗಲಿವೆ. ರೈಲು ಮಾರ್ಗದ ಎಲ್ಲ ಕಡೆಗಳಲ್ಲಿ ನಿಲ್ಲಲಿದೆ.

ಸಾಗಿಸುವ ಸರಕುಗಳ ತೂಕದ ಮೇಲೆ ಯಾವುದೇ ಮಿತಿ ಇಲ್ಲ. ಹಣ್ಣು ಹಾಗೂ ತರಕಾರಿಗಳ ಸಾಗಣೆಗೆ ಕೇಂದ್ರ ಸರ್ಕಾರ ಶೇ.50ರ ಸಬ್ಸಿಡಿ ನೀಡುತ್ತಿದೆ. ಕಳೆದ ಆಗಸ್ಟ್ 7ರಂದು ದೇವಲಾಲಿಯಿಂದ ದಾನಾಪುರಕ್ಕೆ ತೆರಳುವ ಮೊದಲ ಕಿಸಾನ್ ರೈಲಿಗೆ ಚಾಲನೆ ನೀಡಲಾಗಿತ್ತು.

## ಲಸಿಕೆಗೆ ತುರ್ತು ಅನುಮತಿ ಸಾಧ್ಯತೆ

### ಭಾರತ್ ಬಯೋಟೆಕ್‌ನ ಮೂರನೇ ಹಂತದ ಪ್ರಯೋಗ ಮುಗಿದಿಲ್ಲ, ವಿವರ ಸಲ್ಲಿಕೆಗೆ ಸಮಯ ಕೇಳಿದ ಫಿಜರ್

ನವದೆಹಲಿ, ಡಿ. 26 – ಬ್ರಿಟನ್‌ನ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯ ರೂಪಿಸಿರುವ ಕೊರೊನಾ ಲಸಿಕೆಗೆ ತುರ್ತು ಅನುಮತಿ ನೀಡಲು ಭಾರತೀಯ ಔಷಧ ನಿಯಂತ್ರಕರು ಪರಿಶೀಲಿಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ. ಪುಣೆಯ ಸೆರಮ್ ಇನ್‌ಸ್ಟಿಟ್ಯೂಟ್ ಈ ಲಸಿಕೆಯನ್ನು ಉತ್ಪಾದಿಸುತ್ತಿದೆ.

ಬ್ರಿಟನ್ ಔಷಧ ನಿಯಂತ್ರಕರು ಆಕ್ಸ್‌ಫರ್ಡ್ ಲಸಿಕೆಗೆ ಒಪ್ಪಿಗೆ ನೀಡಿದ ನಂತರ ಸಿ.ಡಿ.ಎಸ್.ಸಿ.ಒ. ಸುರಕ್ಷತೆ ಹಾಗೂ ರೋಗ ನಿರೋಧಕತೆಯ ಪೂರ್ಣ ವಿವರಗಳನ್ನು ಪರಿಶೀಲಿಸಲಿದೆ. ನಂತರ ತುರ್ತು ಅನುಮತಿ ನೀಡುವ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಮೂಲಗಳು ತಿಳಿಸಿವೆ.

ಮೂರನೇ ಹಂತದ ಪರೀಕ್ಷೆಗಳು ಇನ್ನೂ ನಡೆಯುತ್ತಿರುವ ಕಾರಣ ಭಾರತ್ ಬಯೋಟೆಕ್‌ನ ಕೊವ್ಯಾಕ್ಸಿನ್ ಲಸಿಕೆಗೆ ಅನುಮತಿ ನೀಡುವುದಕ್ಕೆ ಹೆಚ್ಚು ಸಮಯ ಬೇಕಾಗುತ್ತಿದೆ. ಫಿಜರ್ ಕಂಪನಿಯು ಇನ್ನೂ ತನ್ನ ಲಸಿಕೆಯ ವಿವರಗಳನ್ನು ಸಲ್ಲಿಸಿಲ್ಲ.

ಈ ಹಿನ್ನೆಲೆಯಲ್ಲಿ ಆಕ್ಸ್‌ಫರ್ಡ್‌ನ ಕೊವಿಶೀಲ್ಡ್ ಲಸಿಕೆ ಭಾರತದಲ್ಲಿ ಮೊದಲ ಅನುಮತಿ ಪಡೆಯುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಸೆರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಕಳೆದ ವಾರ ಲಸಿಕೆಯ ಕುರಿತ ಹೆಚ್ಚಿನ ವಿವರಗಳನ್ನು ಭಾರತದ ಔಷಧ ನಿಯಂತ್ರಕವಾದ ಡಿ.ಸಿ.ಜಿ.ಐ.ಗೆ ಸಲ್ಲಿಸಿತ್ತು ಎಂದು ಮೂಲಗಳು ಹೇಳಿವೆ.

ಬ್ರಿಟನ್‌ನಲ್ಲಿ ಕೊರೊನಾ ರೂಪಾಂತರವಾಗಿರುವ ಹಿನ್ನೆಲೆಯಲ್ಲಿ ಸೋಂಕಿನ ಕಳವಳ ಇನ್ನಷ್ಟು ಹೆಚ್ಚಾಗಿದೆ. ಆದರೆ, ಈ ರೂಪಾಂತರದಿಂದ ಕೊರೊನಾ ಲಸಿಕೆಯ ಮೇಲೆ ಯಾವುದೇ ಪರಿಣಾಮವಾಗುವುದಿಲ್ಲ ಎಂದು ಪರಿಣಿತರು ಹೇಳಿದ್ದಾರೆ.

ಭಾರತ್ ಬಯೋಟೆಕ್, ಸೆರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಹಾಗೂ ಫಿಜರ್ ಕಂಪನಿಗಳು ತಮ್ಮ ಲಸಿಕೆಗಳ ತುರ್ತು ಅನುಮತಿಗಾಗಿ (6ನೇ ಪುಟಕ್ಕೆ)

### ಶರಣ ರಾಚಣ್ಣ ಎಂ. ಕಪ್ಪರದ ನಿಧನ

ಜನನ: 01/02/1943



ಮರಣ: 26/12/2020

ದಾವಣಗೆರೆ ಎಸ್. ಎಸ್. ಬಡಾವಣೆ, ಎ ಬ್ಲಾಕ್, 1ನೇ ಮೇನ್, 5ನೇ ಕ್ರಾಸ್ ವಾಸಿ
**ಶರಣ ರಾಚಣ್ಣ ಎಂ ಕಪ್ಪರದ** (78)
ಅವರು ದಿನಾಂಕ 26.12.2020 ರ ಶನಿವಾರ ರಾತ್ರಿ 9:50ಕ್ಕೆ ಲಿಂಗೈಕ್ಯರಾಗಿರುತ್ತಾರೆ. ಪತ್ನಿ, ಓರ್ವ ಪುತ್ರ, ಮೂವರು ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 27.12.2020ನೇ ಭಾನುವಾರ ಮಧ್ಯಾಹ್ನ 12 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.
ದುಃಖತಪ್ತ ಕುಟುಂಬ ವರ್ಗ: ಮೊ: 99808 93311




# ಗ್ರಾ.ಪಂ. ಚುನಾವಣೆಗೆ ಸೂಕ್ತ ಬಂದೋಬಸ್ತ್



ಕೂಡ್ಲಿಗಿ ಡಿವೈಎಸ್ಪಿ ಹರೀಶ್ ರೆಡ್ಡಿ

ಕೂಡ್ಲಿಗಿ, ಡಿ.26- ನಾಳೆ ದಿನಾಂಕ 27 ರ ಭಾನುವಾರ ಜರುಗಲಿರುವ ಗ್ರಾ.ಪಂ. ಚುನಾವಣೆಗೆ ಸೂಕ್ತ ಬಂದೋಬಸ್ತ್ ತಯಾರಿ ಮಾಡಿಕೊಳ್ಳಲಾಗಿದೆ ಎಂದು ಕೂಡ್ಲಿಗಿ ಡಿವೈಎಸ್‌ಪಿ ಹರೀಶ್ ರೆಡ್ಡಿ ತಿಳಿಸಿದ್ದಾರೆ.

ಕೂಡ್ಲಿಗಿ ತಾಲ್ಲೂಕಿನಲ್ಲಿ ಒಟ್ಟು 208 ಮತಗಟ್ಟೆಗಳಿದ್ದು, ಇದರಲ್ಲಿ 58 ಸೂಕ್ಷ್ಮ ಮತಗಟ್ಟೆಗಳೆಂದು ಗುರುತಿಸಲಾಗಿದೆ. ಒಬ್ಬರು ಡಿ.ವೈ.ಎಸ್ಪಿ, ಐವರು ಸಿ.ಪಿ.ಐ, 8 ಪಿ.ಎಸ್.ಐ, 32 ಎ.ಎಸ್.ಐ, 55 ಹೆಚ್.ಪಿ.ಸಿ, 155 ಪಿ.ಸಿ, 50 ಹೋಮ್ ಗಾರ್ಡ್‌ಗಳು, 2 ಜಿಲ್ಲಾ ಸಶಸ್ತ್ರ ಪೊಲೀಸ್ ಪಡೆ ಹಾಗೂ ಒಬ್ಬ ಕೆ.ಎಸ್.ಆರ್.ಪಿ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಸಂಡೂರು ವ್ಯಾಪ್ತಿಯಲ್ಲಿ ಒಟ್ಟು 227 ಮತಗಟ್ಟೆಗಳಿದ್ದು, ಅವುಗಳಲ್ಲಿ 44 ಮತಗಟ್ಟೆಗಳನ್ನು ಸೂಕ್ಷ್ಮ ಎಂದು ಗುರುತಿಸಲಾಗಿದೆ. ಒಬ್ಬರು ಡಿ.ವೈ.ಎಸ್.ಪಿ, ಐವರು ಸಿಪಿಐ, 8 ಪಿ.ಎಸ್.ಐ, 33 ಎ.ಎಸ್.ಐ, 55 ಹೆಚ್.ಪಿ.ಸಿ, 216 ಪಿ.ಸಿ, 41 ಹೋಂ ಗಾರ್ಡ್‌ಗಳು, 2 ಜಿಲ್ಲಾ ಸಶಸ್ತ್ರ ಪೊಲೀಸ್ ಪಡೆ, ಒಬ್ಬ ಕೆ.ಎಸ್.ಆರ್.ಪಿ. ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಸೂಕ್ಷ್ಮ ಮತಗಟ್ಟೆಗಳಲ್ಲಿ ಸೂಕ್ತ ಭದ್ರತೆ ನಿಯೋಜಿಸಲಾಗುತ್ತಿದೆ. ಮುಂಜಾಗ್ರತೆಯಾಗಿ ಆಯಾ ವ್ಯಾಪ್ತಿಯ ರೌಡಿಶೀಟರ್‌ಗಳಿಗೆ ಕಟ್ಟುನಿಟ್ಟಿನ ಎಚ್ಚರಿಕೆ ನೀಡಲಾಗಿದ್ದು, ಅವರಿಂದ ಮುಚ್ಚಳಿಕೆ ತೆಗೆದುಕೊಳ್ಳಲಾಗಿದೆ ಎಂದು ಹರೀಶ್ ರೆಡ್ಡಿ ವಿವರಿಸಿದ್ದಾರೆ.

## ಕೆ.ಎನ್. ಹಳ್ಳಿಯಲ್ಲಿ ಕ್ರಿಸ್‌ಮಸ್




ಮಲೇಬೆನ್ನೂರು ಡಿ.26- ಕೆ.ಎನ್. ಹಳ್ಳಿ ಗ್ರಾಮದ ಗುಡ್‌ಶೆಫರ್ಡ್ ವತಿಯಿಂದ ಹಮ್ಮಿಕೊಂಡಿದ್ದ ಕ್ರಿಸ್‌ಮಸ್ ಆಚರಣೆಯನ್ನು ಶಾಸಕ ಎಸ್. ರಾಮಪ್ಪ ಅವರು ಕೇಕ್ ಕತ್ತರಿಸುವ ಮೂಲಕ ಉದ್ಘಾಟಿಸಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ, ಕೆಪಿಸಿಸಿ ವಕ್ತಾರ ನಿಖಿಲ್ ಕೊಂಡಜ್ಜಿ, ಮುಖಂಡ ಸಿ.ಎನ್. ಹುಲಗೇಶ್ ಮತ್ತಿತರರು ಪಾಲ್ಗೊಂಡಿದ್ದರು.

## ಮಲೇಬೆನ್ನೂರಿನಲ್ಲಿ ಕಾರ್ತಿಕೋತ್ಸವ



ಮಲೇಬೆನ್ನೂರು, ಡಿ.26- ಇಲ್ಲಿನ ನಂದಿಗುಡಿ ರಸ್ತೆಯಲ್ಲಿರುವ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಶನಿವಾರ ಸಂಜೆ ಸಂಭ್ರಮದಿಂದ ಕಾರ್ತಿಕೋತ್ಸವ ಆಚರಿಸಲಾಯಿತು. ಪುರಸಭೆ ಮುಖ್ಯಾಧಿಕಾರಿ ಧರಣೇಂದ್ರಕುಮಾರ್ ಸೇರಿದಂತೆ ನೂರಾರು ಭಕ್ತರು ದೀಪ ಹಚ್ಚಿ ಭಕ್ತಿ ಸಮರ್ಪಿಸಿದರು.

## ದೊಡ್ಡಬಾತಿಯಲ್ಲಿ ಇಂದು

ವಿಶ್ವಗುರು ಭಾರತ ಪ್ರತಿಷ್ಠಾನ (ದೊಡ್ಡಬಾತಿ), ಕಲಾಕುಂಚ ಸಾಂಸ್ಕೃತಿಕ ಸಂಘ ಇವರುಗಳ ಸಂಯುಕ್ತಾಶ್ರಯದಲ್ಲಿ 2021ನೇ ವರ್ಷದ ಕಲಾಕುಂಚ ದಿನದರ್ಶಿಕೆ ಲೋಕಾರ್ಪಣೆ ಸಮಾರಂಭವು ಪ್ರೇರಣಾ ಮಕ್ಕಳ ಆರೈಕೆ ಕೇಂದ್ರದಲ್ಲಿ ಇಂದು ಬೆಳಿಗ್ಗೆ 11.35 ಕ್ಕೆ ನಡೆಯಲಿದೆ.ಬಿ.ವಾಮದೇವಪ್ಪದಿನದರ್ಶಿಕೆಯನ್ನುಲೋಕಾರ್ಪಣೆಗೊಳಿಸುವರು. ಅಧ್ಯಕ್ಷತೆ : ಶಿವಕುಮಾರ್ ಮೇಗಳಮನಿ. ಅತಿಥಿಗಳು : ಕೆ.ಹೆಚ್. ಮಂಜುನಾಥ್, ಶಾರದಮ್ಮ ಶಿವನಪ್ಪ.

# ಗ್ರಾ.ಪಂ.ಚುನಾವಣೆಗೆ ಹರಪನಹಳ್ಳಿ ಸಜ್ಜು

ಹರಪನಹಳ್ಳಿ, ಡಿ.26- ತಾಲ್ಲೂಕಿನ 35 ಗ್ರಾಮ ಪಂಚಾಯ್ತಿಗಳ 539 ಅಭ್ಯರ್ಥಿಗಳು ಚುನಾವಣಾ ಕಣದಲಿದ್ದು, 280 ಮತಗಟ್ಟೆಗಳು, ಪುರುಷ - 97,274 ಹಾಗೂ ಮಹಿಳೆ - 93,276 ಸೇರಿ ಒಟ್ಟು 1,90,554 ಮತದಾರರಿದ್ದಾರೆ.

ಅವಧಿ ಪೂರ್ಣಗೊಳ್ಳದ ಕಂಚಿಕೇರಿ, ಹಾರಕನಾಳು ಗ್ರಾಮ ಪಂಚಾಯ್ತಿಗಳನ್ನು ಹೊರತುಪಡಿಸಿ 35 ಗ್ರಾಮ ಪಂಚಾಯ್ತಿಗಳಿಗೆ ಚುನಾವಣೆ ನಡೆಯಲಿದೆ. ಈಗಾಗಲೇ 49 ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದು ಘೋಷಣೆ ಬಾಕಿ ಇದೆ.

1020 ಸಿಬ್ಬಂದಿಯನ್ನು ಚುನಾವಣಾ ಕರ್ತವ್ಯಕ್ಕೆ ನೇಮಕ ಮಾಡಲಾಗಿದೆ. ಡಿವೈಎಸ್ಪಿ - 1,



ಸಿಪಿಐ - 5, ಪಿಎಸ್ ಐ -10, ಎಎಸ್ ಐ - 27, ಮುಖ್ಯ ಪೇದೆ - 75, ಮಹಿಳಾ ಪೇದೆ - 200, ಗೃಹ ರಕ್ಷಕ ದಳ - 115 ಸೇರಿದಂತೆ ಒಟ್ಟು 433 ಸಿಬ್ಬಂದಿಯನ್ನು ಕಾನೂನು ಸುವ್ಯವಸ್ಥೆ ಕಾಪಾಡಲು ನಿಯೋಜಿಸಲಾಗಿದೆ.

ಪಟ್ಟಣದ ತರಳ ಬಾಳು ಆಂಗ್ಲ ಮಾಧ್ಯಮ ಶಾಲೆಯಲ್ಲಿ ಮಸ್ಟರಿಂಗ್ ನಡೆಸಿ ಸಿಬ್ಬಂದಿಯನ್ನು ಮತಗಟ್ಟೆಗಳಿಗೆ ಶನಿವಾರ ಮಧ್ಯಾಹ್ನ ಕಳಿಸಿಕೊಡಲಾಯಿತು. ಉಪವಿಭಾಗಾಧಿಕಾರಿ ವಿ. ಕೆ.ಪ್ರಸನ್ನಕುಮಾರ್ ಹಾಗೂ ತಹಶೀಲ್ದಾರ್ ಎಲ್. ಎಂ. ನಂದೀಶ್ ಅವರು ಚುನಾವಣಾ ಕರ್ತವ್ಯದ ಉಸ್ತುವಾರಿ ವಹಿಸಿದ್ದರು. ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಎಂ. ವೀರಭದ್ರಯ್ಯ, ಸಮಾಜ ಕಲ್ಯಾಣಾಧಿಕಾರಿ ಆನಂದ ಡೊಳ್ಳಿನ ಹಾಗು ಇತರರು ಮಸ್ಟರಿಂಗ್ ಸಮಯದಲ್ಲಿ ಹಾಜರಿದ್ದರು. ಮತದಾನವು ನಾಳೆ ದಿನಾಂಕ 27 ರ ಭಾನುವಾರ ಬೆಳಿಗ್ಗೆ 7 ರಿಂದ ಸಂಜೆ 5 ಗಂಟೆವರೆಗೆ ನಡೆಯಲಿದೆ.

# ಹರಿಹರದ ಪಿಕಾರ್ಡ್ ಬ್ಯಾಂಕಿಗೆ 48 ಲಕ್ಷ ರೂ. ಲಾಭ



ವಾರ್ಷಿಕ ಸಭೆಯಲ್ಲಿ ಬ್ಯಾಂಕಿನ ಅಧ್ಯಕ್ಷ ಸಿದ್ದವೀರಪ್ಪ ಹರ್ಷ

ಹರಿಹರ, ಡಿ.26- 2019-20ನೇ ಸಾಲಿನಲ್ಲಿ ಹರಿಹರ ತಾಲ್ಲೂಕು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ 48,86,561 ಲಕ್ಷ ರೂ. ಲಾಭ ಗಳಿಸಿದೆ ಎಂದು ಬ್ಯಾಂಕಿನ ಅಧ್ಯಕ್ಷ ಬೆಳ್ಳೂಡಿಯ ಎ. ಸಿದ್ದವೀರಪ್ಪ ಹೇಳಿದರು.

ಇಲ್ಲಿನ ಕಾಟ್ವೆ ಭವನದಲ್ಲಿ ಇಂದು ಹಮ್ಮಿಕೊಂಡಿದ್ದ 2019-20ನೇ ಸಾಲಿನ ಸರ್ವ ಸದಸ್ಯರ ಮಹಾಸಭೆಯ ಅಧ್ಯಕ್ಷತೆ ಅವರು ವಹಿಸಿ ಮಾತನಾಡಿ, ಸಾಲ ಪಡೆದ ರೈತರು ಸಾಲ ಮನ್ನಾ ಆಗುತ್ತದೆ ಎಂಬ ಗಾಳಿ ಸುದ್ದಿಗೆ ಮನ್ನಣೆ ನೀಡದೆ ಸಕಾಲಕ್ಕೆ ಸಾಲ ಮರುಪಾವತಿ ಮಾಡಿ, ಬ್ಯಾಂಕಿನ ಅಭಿವೃದ್ಧಿಗೆ ಕೈ ಜೋಡಿಸಿ ಎಂದು ಮನವಿ ಮಾಡಿದರು.

ನಿರ್ದೇಶಕ ಕೆ.ಎಂ. ಬಸವರಾಜಪ್ಪ ಜಮಾ-ಖರ್ಚು ಓದಿದರು. ನಿರ್ದೇಶಕ ಜಿ. ಆಂಜನೇಯ ಆಸ್ತಿ ಮತ್ತು ಜವಾಬ್ದಾರಿ ತಃಖ್ತೆ ಓದಿದರೆ, ನಿರ್ದೇಶಕ ಸಿರಿಗೆರೆ ರಾಜಣ್ಣ ಅವರು ಸದಸ್ಯರ ಪ್ರಶ್ನೆಗಳಿಗೆ ಉತ್ತರ ನೀಡಿದರು.

ಬ್ಯಾಂಕಿನ ವ್ಯವಸ್ಥಾಪಕರಾದ ಶ್ರೀಮತಿ ನಿರ್ಮಲಾ ಸಭೆಯ ಆಹ್ವಾನ ಪತ್ರ ಓದಿ, ಹಿಂದಿನ ಸಭೆಯ ನಡವಳಿಕೆಗಳನ್ನು ಸಭೆಯ ಗಮನಕ್ಕೆ ತಂದರು. ನಿರ್ದೇಶಕ ಆರ್.ಸಿ. ಪಾಟೀಲ್ ಆಡಳಿತ ಮಂಡಳಿ ವರದಿ ಓದಿದರು. ನಿರ್ದೇಶಕರಾದ ರವೀಂದ್ರನಾಥ್, ಹೆಚ್. ಚಂದ್ರಪ್ಪ, ಪ್ರಸನ್ನ ಬಣಕಾರ್, ಧರ್ಮರಾಜ್, ಅಶೋಕ್, ಸುಧಾ ಹಾಜರಿದ್ದರು.

# ಹರಿಹರದ ಶ್ರೀ ಸಾಯಿಬಾಬಾ ಮಂದಿರದಲ್ಲಿ ಧನುರ್ಮಾಸ ಪೂಜೆ



ಹರಿಹರ, ಡಿ.26- ಕೇಶವನಗರ, ಪಟೇಲ್ ಬಡಾವಣೆಯ ಶ್ರೀ ಸಾಯಿ ಬಾಬಾ ಮಂದಿರದಲ್ಲಿ ಧನುರ್ಮಾಸ ಪೂಜಾ ಪ್ರಯುಕ್ತ ಇಂದು ಸ್ವಾಮಿಗೆ ವಿಶೇಷ ಅಲಂಕಾರ, ಮಹಾ ಮಂಗಳಾರತಿ ನಡೆಯಿತು.

ಬರುವ ಜನವರಿ 7ರ ಗುರುವಾರ ಧನುರ್ಮಾಸ ಪೂಜಾ ಸಮಾರೋಪ ನಡೆಯಲಿದ್ದು, ಅಂದು ಬೆಳಿಗ್ಗೆ 6.30 ರಿಂದ ಸಿದ್ಧಿ ವಿನಾಯಕ, ಶ್ರೀ ಸಾಯಿಬಾಬಾ, ಶ್ರೀ ಕಾಶಿ ವಿಶ್ವನಾಥ ಮತ್ತು ಬಸವಣ್ಣ ಮೂರ್ತಿಗಳಿಗೆ ಸಾರ್ವಜನಿಕರಿಂದ ಕ್ಷೀರಾಭಿಷೇಕ ನಡೆಯಲಿದೆ. ಜೊತೆಗೆ ಮೃತ್ಯುಂಜಯ ಹೋಮ, ಆಶ್ಲೇಷ ಬಲಿ, ಸರ್ಪಶಾಂತಿ ಹೋಮ, ನವಗ್ರಹ ಶಾಂತಿಯನ್ನು ನಾಡಿನ ಸದ್ಭಕ್ತರ ಶ್ರೇಯೋಭಿವೃದ್ಧಿಗಾಗಿ ನಡೆಸಲಾಗುತ್ತದೆ ಎಂದು ಸಮಿತಿ ಅಧ್ಯಕ್ಷ ಬಸವರಾಜ್ ಪಟೇಲ್ ತಿಳಿಸಿದ್ದಾರೆ.

ಅರ್ಚಕ ಕುಮಾರ್ ಸ್ವಾಮಿ, ಸಮಿತಿ ಉಪಾಧ್ಯಕ್ಷ ಸುರ್ವೆ, ಖಜಾಂಚಿ, ಮಹಾದೇವಪ್ಪ ಸರಫದ್, ನಿರ್ದೇಶಕರಾದ ಎಸ್.ಎಸ್. ಸಂಗನಾಳಮಠ, ದೊರೆಸ್ವಾಮಿ, ಎಸ್.ಎಸ್. ಚಳಗೇರಿ, ವಾಗೀಶ್ ಪ್ರಸಾದ್, ಲಿಂಗರಾಜ್ ಪಾಟೀಲ್, ಚಂದ್ರಶೇಖರ್ ಸರಫದ್, ಗೋಪಾಲರಾವ್, ಅಮಿತ್ ಕಬಾಡಿ, ಅಶೋಕ್ ಪಾಟೀಲ್, ಭೀಮಣ್ಣ ಐರಣಿ, ಸತೀಶ್ ಪಾಟೀಲ್, ಶಶಿಧರ್ ಆನ್ವೇರಿ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

## ಹರಿಹರ : ಅಪರ ಜಿಲ್ಲಾಧಿಕಾರಿಯಿಂದ ಚುನಾವಣಾ ತಯಾರಿ ವೀಕ್ಷಣೆ



ಹರಿಹರ, ಡಿ.26- ತಾಲ್ಲೂಕಿನ 23 ಗ್ರಾಮ ಪಂಚಾಯ್ತಿಗಳ ಚುನಾವಣೆ ನಾಳೆ ದಿನಾಂಕ 27ರ ಭಾನುವಾರ ನಾಳೆ ನಡೆಯಲಿದ್ದು, ಅದಕ್ಕೆ ಪೂರಕ ತಯಾರಿಯನ್ನು ನಗರದ ಹರಪನಹಳ್ಳಿ ರಸ್ತೆಯ ಸೆಂಟ್ ಮೇರಿಸ್ ಶಾಲೆಯ ಆವರಣದಲ್ಲಿ ಕೈಗೊಳ್ಳಲಾಯಿತು.

ಅಪರ ಜಿಲ್ಲಾಧಿಕಾರಿ ವೀರಮಲ್ಲಪ್ಪ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ನಾಳೆ ನಡೆಯುವ ಚುನಾವಣೆಯಲ್ಲಿ ಯಾವುದೇ ರೀತಿಯ ಲೋಪದೋಷಗಳು ಆಗದಂತೆ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪನವರಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಕೆ. ಬಿ. ರಾಮಚಂದ್ರಪ್ಪ, ಸಿಪಿಐ ಎಸ್. ಶಿವಪ್ರಸಾದ್, ಪಿಎಸ್‌ಐ ಗಳಾದ. ಸುನಿಲ್, ಬಸವರಾಜ್, ಡಿ. ರವಿಕುಮಾರ್ ಮತ್ತಿತರರು ಹಾಜರಿದ್ದರು.

# ಕ್ರೈಸ್ತ ಸಮುದಾಯದ ಕಷ್ಟ, ಸುಖಗಳಿಗೆ ಸ್ಪಂದನೆ: ಎಂ.ಪಿ.ಲತಾ



ಹರಪನಹಳ್ಳಿ

ಹರಪನಹಳ್ಳಿ, ಡಿ.26 - ಕೊರೊನಾ ಸಂಕಷ್ಟದಿಂದ ಸಾಕಷ್ಟು ಕಷ್ಟ ನಷ್ಟಗಳನ್ನು ಜನ ಎದುರಿಸುವಂತಾಗಿದೆ ಎಂದು ಹೇಳಿದ ಕೆಪಿಸಿಸಿ ಮಹಿಳಾ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಪಿ.ಲತಾ ಮಲ್ಲಿಕಾರ್ಜುನ್, ಈ ಸಮುದಾಯದ ಆಗು, ಹೋಗುಗಳಿಗೆ ಸ್ಪಂದಿಸುತ್ತೇನೆ ಎಂದರು.

ಹರಪನಹಳ್ಳಿ ಪಟ್ಟಣದ ಹೊಸಪೇಟೆ ರಸ್ತೆಯಲ್ಲಿರುವ ಚರ್ಚ್‌ನಲ್ಲಿ ಕ್ರಿಸ್‌ಮಸ್ ಹಬ್ಬದ ಅಂಗವಾಗಿ ಕ್ರಿಶ್ಚಿಯನ್ ಸಮುದಾಯದ ಆರಾಧ್ಯ ದೈವ ಜೀಸಸ್ ಅವತರಿಸಿದ ಪ್ರತೀಕವಾಗಿ ಅತ್ಯಂತ ಸಂಪ್ರದಾಯ ಬದ್ಧವಾಗಿ ವೈವಿಧ್ಯ ರೀತಿಯ ಅಲಂಕಾರ ಮಾಡಲಾಗಿತ್ತು. ಯೇಸು ಕ್ರಿಸ್ತನ ಮೂರ್ತಿಯ ಮುಂದೆ ಪ್ರಾರ್ಥನೆ ಸಲ್ಲಿಸುವ ಮೂಲಕ ಶಾಂತಿ, ನೆಮ್ಮದಿ ಕೋರಲಾಯಿತು.

ನಂತರ ಕ್ರಿಸ್ತನ ಹಬ್ಬವನ್ನು ಕೇಕ್ ಕತ್ತರಿಸುವ ಮೂಲಕ ಆಚರಿಸಲಾಯಿತು. ಚರ್ಚ್‌ನ ಪಾದರ್ ನೀಲ್ ಆರ್ಮ್‌ಸ್ಟ್ರಾಂಗ್ ಮಾತನಾಡಿದರು. ನಂತರ ಎಂ.ಪಿ. ಲತಾ ಮಲ್ಲಿಕಾರ್ಜುನ್ ಅವರು ಮಕ್ಕಳಿಗೆ ಪೆನ್ಸಿಲ್ ಹಾಗೂ ಸಿಹಿ ವಿತರಿಸಿದರು.

ತಾ.ಪಂ ಮಾಜಿ ಸದಸ್ಯೆ ಕಂಚಿಕೇರಿ ಜಯಲಕ್ಷ್ಮಿ, ಮುಖಂಡರಾದ ಉದಯಶಂಕರ್, ಶಮೀವುಲ್ಲಾ, ಫಿಲಿಪ್ಸ್ ದೊಡ್ಡಮನಿ, ಸೋಲ್ ದೊಡ್ಡಮನೆ, ಪುಷ್ಪ, ಸರಳಾ ಮತ್ತಿತರರು ಉಪಸ್ಥಿತರಿದ್ದರು.

# ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ಗೊ.ರು.ಚ



ಬೆಂಗಳೂರು, ಡಿ.26-ಇಲ್ಲಿನ ಕನ್ನಲ್ಲಿ ಶ್ರೀ ವೀರಭದ್ರಸ್ವಾಮಿ ದೇವಾಲಯದ ಆವರಣದಲ್ಲಿ ನಡೆದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಇಪ್ಪತ್ತಾರನೆಯ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಪರಿಷತ್ತಿನ ಮಾಜಿ ಅಧ್ಯಕ್ಷರೂ, ಹಾಲಿ ಗೌರವ ಸಲಹೆಗಾರರಾಗಿದ್ದ ಹಿರಿಯ ಸಾಹಿತಿ ಗೊ.ರು. ಚನ್ನಬಸಪ್ಪ ಅವರನ್ನು ಪರಿಷತ್ತಿನ ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಪರಿಷತ್ತಿನ ಗೌರವಾಧ್ಯಕ್ಷರುಗಳಾದ ಸುತ್ತೂರು ಮಠದ ಜಗದ್ಗುರು ಶ್ರೀ ಶಿವರಾತ್ರಿ ದೇಶೀಕೇಂದ್ರ ಮಹಾಸ್ವಾಮೀಜಿ ಮತ್ತು ಗದುಗಿನ ತೋಂಟದಾರ್ಯ ಮಠದ ಶ್ರೀ ಸಿದ್ಧರಾಮ ಮಹಾಸ್ವಾಮೀಜಿ ನೇತೃತ್ವದಲ್ಲಿ ನಡೆಯಿತು.

ಪರಿಷತ್ತಿನ ಅಧ್ಯಕ್ಷರಾಗಿದ್ದ ಅಪ್ಪಾರಾವ್ ಅಕ್ಕೋಣೆ ರಾಜೀನಾಮೆ ನೀಡಿದ್ದು, ತೆರವಾಗಿದ್ದ ಸ್ಥಾನಕ್ಕೆ ಗೊ.ರು.ಚ. ಅವರನ್ನು ಆಜೀವ ಪರ್ಯಂತ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. ಅವರಿಗೆ 90 ವರ್ಷ ವಯಸ್ಸಾಗಿದ್ದು, ಕಣ್ಣಿನ ದೃಷ್ಟಿ ಕಡಿಮೆಯಾಗಿದೆ, ಕಿವಿಯೂ ಕೇಳಿಸದಾಗಿದೆ. ಆದರೂ ಸಹ ಸರ್ವ ಸದಸ್ಯರ ಅಪೇಕ್ಷೆಯ ಮೇರೆಗೆ ನಾನು ಕೊನೆಯ ಉಸಿರಿರುವವರೆಗೂ ಪರಿಷತ್ತಿನ ಅಧ್ಯಕ್ಷನಾಗಿ ಸೇವೆ ಸಲ್ಲಿಸುತ್ತೇನೆಂದು ಘೋಷಿಸಿದರು.

## ನಗರದಲ್ಲಿ ಇಂದು ಓಶೋ ಧ್ಯಾನ ಶಿಬಿರ

ಓಶೋ ಸನ್ನಿಧಿ ಇನ್‌ಸೈಟ್ ಫೌಂಡೇಷನ್ ಆಶ್ರಯದಲ್ಲಿ ಇಂದು ಧ್ಯಾನ ಶಿಬಿರವನ್ನು ಬೆಳಿಗ್ಗೆ 6 ಗಂಟೆಗೆ ನಗರದ ಎಸ್.ಎಸ್. ಲೇಔಟ್‌ನಲ್ಲಿರುವ ಲಿಟ್ಲ್ ಚಾಂಪ್ಸ್ ಗುರುಕುಲಂ ನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಅರ್ಚನ (97385 72318), ಪುಷ್ಪ (90367 19573) ತಿಳಿಸಿದ್ದಾರೆ.

## ನಗರದಲ್ಲಿ ಇಂದು ಮಾಧ್ಯಮ ದಿನಾಚರಣೆ ಪ್ರಶಸ್ತಿ ಪ್ರದಾನ ಸಮಾರಂಭ

ವರದಿಗಾರರ ಕೂಟದಿಂದ ಇಂದು ಬೆಳಿಗ್ಗೆ 11 ಗಂಟೆಗೆ ಮಾಧ್ಯಮ ದಿನಾಚರಣೆ ಹಾಗೂ ಮಾಧ್ಯಮ ಪ್ರಶಸ್ತಿ ಪ್ರದಾನ ಸಮಾರಂಭವು ಕುವೆಂಪು ಕನ್ನಡ ಭವನದಲ್ಲಿ ನಡೆಯಲಿದೆ.

ಹಿರಿಯ ಪತ್ರಕರ್ತ, ರಾಜಕೀಯ ವಿಶ್ಲೇಷಕ ರವೀಂದ್ರ ರೇಷ್ಮೆ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ವರದಿಗಾರರ ಕೂಟದ ಅಧ್ಯಕ್ಷ ಜಿ.ಎಂ.ಆರ್. ಆರಾಧ್ಯ ಅಧ್ಯಕ್ಷತೆ ವಹಿಸುವರು. ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರುಗಳಾದ ಶಾಮನೂರು ಶಿವಶಂಕರಪ್ಪ, ಎಸ್.ಎ. ರವೀಂದ್ರನಾಥ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ವಿಜಯ ಕರ್ನಾಟಕದ ಪ್ರಧಾನ ವರದಿಗಾರ ಯಳನಾಡು ಮಂಜುನಾಥ್, ಸಂಯುಕ್ತ ಕರ್ನಾಟಕ ವರದಿಗಾರ ಡಿ. ರಂಗನಾಥರಾವ್, ನ್ಯೂಸ್ 18 ವರದಿಗಾರ ಹೆಚ್.ಎಂ.ಪಿ. ಕುಮಾರ್, ದಾವಣಗೆರೆ ಟೈಮ್ಸ್ ಸಂಪಾದಕ ಜಿ.ಎಸ್. ವೀರೇಶ್, ಬಿ ಟಿವಿ ಕ್ಯಾಮೆರಾ ಮೆನ್ ಪಿ.ಎಸ್. ಲೋಕೇಶ್ ಅವರುಗಳು ಪ್ರಶಸ್ತಿ ಸ್ವೀಕರಿಸಲಿದ್ದಾರೆ.


॥ ಶ್ರೀ ವೀರಭದ್ರೇಶ್ವರ ಪ್ರಸನ್ನ ॥

ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ಜನನ : 1949 ಲಿಂಗೈಕ್ಯ : 14.12.2020

ಚಿತ್ರದುರ್ಗ ತಾ. ಮತ್ತು ಜಿ. ಸಿರಿಗೆರೆ ಸಿದ್ದಾಪುರ ಗ್ರಾಮದ ವಾಸಿ

ಶ್ರೀಮತಿ ನಿರ್ಮಲ ಕುಮಾರಿ ಮತ್ತು ಮಕ್ಕಳು

ಇವರು ಮಾಡುವ ವಿಜ್ಞಾಪನೆಗಳು.

ಶರಣ ಬಂಧುಗಳೇ, ದಿ. 14.12.2020ನೇ ಸೋಮವಾರ ರಾತ್ರಿ 11.30 ಕ್ಕೆ ನನ್ನ ಪೂಜ್ಯ ಪತಿಯವರಾದ

ಶ್ರೀ ಎಸ್.ಸಿ. ಕಲಿವೀರಪ್ಪನವರು

ನಿವೃತ್ತ ಅಸಿಸ್ಟೆಂಟ್ ಕಮೀಷನರ್ (ವಾಣಿಜ್ಯ ತೆರಿಗೆ)

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

ಕೈಲಾಸ ಶಿವಗಣಾರಾಧನೆಯನ್ನು

ದಿನಾಂಕ 27.12.2020ನೇ ಭಾನುವಾರ ಬೆಳಿಗ್ಗೆ 10.30 ಗಂಟೆಗೆ

ಚಿತ್ರದುರ್ಗ ತಾ. ಸಿರಿಗೆರೆ ಸಿದ್ದಾಪುರ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀಮತಿ ನಿರ್ಮಲ ಕುಮಾರಿ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಮೃತರ ಅಪಾರ ಬಂಧು ವರ್ಗದವರು ಹಾಗೂ ಚನ್ನಪ್ಪಗೌಡ್ರು ವಂಶಸ್ಥರು, ಸಿರಿಗೆರೆ ಸಿದ್ದಾಪುರ ಹಾಗೂ ಬಂಧು-ಮಿತ್ರರು.

ಫೋನ್ : 72044 96762


# ಹೊನ್ನಾಳಿ ತಾ. ವ್ಯಾಪ್ತಿಗೆ ವಿಸ್ತರಿಸಿದ ಹಿರಿಯ ನಾಗರಿಕರ ಸಂಘ

ಹೊನ್ನಾಳಿ, ಡಿ.26 - ಪಟ್ಟಣಕ್ಕೆ ಸೀಮಿತವಾಗೊಂಡಿದ್ದ ಹಿರಿಯ ನಾಗರಿಕರ ಸಹಕಾರ ಸಂಘವನ್ನು ಇದೀಗ ತಾಲ್ಲೂಕು ವ್ಯಾಪ್ತಿಗೆ ವಿಸ್ತರಿಸುವ ಆಸಕ್ತಿ ಹೊಂದಿದೆ ಎಂದು ಸೊಸೈಟಿಯ ಅಧ್ಯಕ್ಷ ಬೆನಕನಹಳ್ಳಿ ಪಿ. ವೀರಪ್ಪ ಹೇಳಿದರು.

ಹೊನ್ನಾಳಿ ಪಟ್ಟಣದಲ್ಲಿ ನಿನ್ನೆ ನಡೆದ ಸಂಘದ ಐದನೇ ವಾರ್ಷಿಕ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಂಘವು 219 ಹಿರಿಯ ನಾಗರಿಕ ಸದಸ್ಯರನ್ನು ಹೊಂದಿದ್ದು, ಇಂದು ಗೌಡರ ಬಸವರಾಜ್ ಪಾಟೀಲ್, ನಿವೃತ್ತ ಶಿಕ್ಷಕ ಚಿಕ್ಕಪ್ಪನವರು ಸ್ವಯಂ ಪ್ರೇರಣೆಯಿಂದ



ಸದಸ್ಯತ್ವ ಪಡೆದಿರುವುದು ಸಂಘಕ್ಕೆ ಮತ್ತಷ್ಟು ಪ್ರೇರಣೆಯಾಗಿದೆ. ತಾಲ್ಲೂಕಿನ ಪ್ರತಿ ಹಳ್ಳಿಗೆ ಕನಿಷ್ಠ 25 ಸದಸ್ಯರನ್ನು ನೋಂದಣಿ ಮಾಡಿಸುವ ಆಸಕ್ತಿ ಹೊಂದಿ ಕಾರ್ಯಪ್ರವೃತ್ತರಾಗುವುದಾಗಿ ತಿಳಿಸಿದರು.

ಕಾರ್ಯದರ್ಶಿ ಕೆ. ಎಸ್ ಸಿದ್ದಬಸಪ್ಪ ಮಾತನಾಡಿ, ಬಂಡವಾಳ 1 ಲಕ್ಷದ 74000 ಇದ್ದು, 2 ಲಕ್ಷ ಸಾಲ ನೀಡಿದ್ದು ವಸೂಲಾತಿ ಶೇ. 90ರಷ್ಟು ಇದೆ. ಡಿಸಿಸಿ ಬ್ಯಾಂಕ್‌ನಲ್ಲಿ ವಹಿವಾಟು ನಡೆಸುತ್ತಿದೆ ಎಂದರು.


ಲಾಯರ್ ಶಿವಯೋಗಾರಾಧ್ಯರು ಸಭೆಯನ್ನು ಉದ್ಘಾಟಿಸಿದರು. ಉಪಾಧ್ಯಕ್ಷ ಗುರುಮೂರ್ತಿ, ಸದಸ್ಯರಾದ ಎನ್ ಬಾಬು, ಅಂಬ್ಲಿ ನರಸಪ್ಪ, ಹೆಚ್ ನಾಗರಾಜಪ್ಪ, ಹೆಚ್.ಎಂ. ಚಂದ್ರಕುಮಾರ್, ಹೆಚ್.ಎನ್. ಚಂದ್ರಪ್ಪ, ಬಿ.ಹೆಚ್. ಚಂದ್ರಪ್ಪ ಗೌರಮ್ಮ, ಸುಶೀಲಮ್ಮ, ದೊಡ್ಡಹಾಲೇಶ್, ಸಿದ್ದಬಸಪ್ಪ ಹಾಗೂ ಇತರರು ಉಪಸ್ಥಿತರಿದ್ದರು.

## ದಿನದ ಚುಟುಕು

ನಾವು ಮಾಡಿದ ಅಡುಗೆ
ತಿನ್ನಲಿಹುದು ಇಂದು ನಾಳೆಗೆ
ತತ್ವದಲ್ಲಿರುವ ಸತ್ವ ನೀತಿಗೆ
ಬೆಸೆದ ಬೆಸುಗೆ ಬದುಕಿಗೆ.

- ಶ್ರೀಮತಿ ವೀಕೆಎಂ

## ಶಾಮನೂರು ಗೌರಮ್ಮ ನಿಧನ



ದಾವಣಗೆರೆ ಸಿಟಿ ಶಾಮನೂರು ವಾಸಿ ಹುಚ್ಚಪ್ಪರ ಗಿರೀಶ್ ಅವರ ಧರ್ಮಪತ್ನಿ ಶ್ರೀಮತಿ ಗೌರಮ್ಮ (55) ಅವರು ದಿನಾಂಕ 26.12.2020ರ ಶನಿವಾರ ರಾತ್ರಿ 11 ಕ್ಕೆ ನಿಧನರಾದರು. ಪತಿ, ಇಬ್ಬರು ಪುತ್ರರು, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 27.12.2020ರ ಭಾನುವಾರ ಮಧ್ಯಾಹ್ನ 12 ಕ್ಕೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಲಿದೆ.

# ನಗರದಲ್ಲಿ ಇಂದು ರಾಜ್ಯೋತ್ಸವ, ಕವಿಗೋಷ್ಠಿ, ಪ್ರಶಸ್ತಿ ಪ್ರದಾನ

ದಾವಣಗೆರೆ,ಡಿ.26- ವೀರಶೈವ ಲಿಂಗಾಯಿತ ಏಕೀಕರಣ ಪರಿಷತ್ ಹಾಗೂ ವಿಶ್ವ ಕಲ್ಯಾಣ ಪರಿಸರ ಗ್ರಾಹಕ ಸಾಂಸ್ಕೃತಿಕ ಪರಿಷತ್ ಆಶ್ರಯದಲ್ಲಿ 65ನೇ ಕನ್ನಡ ರಾಜ್ಯೋತ್ಸವ, ಶರಣ ದಂಪತಿ ಪ್ರಶಸ್ತಿ ಪ್ರದಾನ ಹಾಗೂ ರಾಜ್ಯಮಟ್ಟದ ಕವಿಗೋಷ್ಠಿಯನ್ನು ನಾಳೆ ದಿನಾಂಕ 27ರಂದು ಬೆಳಿಗ್ಗೆ 10.30ಕ್ಕೆ ರೋಟರಿ ಬಾಲ ಭವನದಲ್ಲಿ ಏರ್ಪಡಿಸಲಾಗಿದೆ.

ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ಕೂಡಲಸಂಗಮ ಪೀಠದ ಜಗದ್ಗುರು ಶ್ರೀ ಜಯಮೃತ್ಯುಂಜಯ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸುವರು. ಮೇಯರ್ ಬಿ.ಜಿ. ಅಜಯಕುಮಾರ್, ಪತ್ರಕರ್ತ ಶ್ರೀಧರ್ ಪಾಟೀಲ್ ಕಾರ್ಯಕ್ರಮ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷೆ ಉಮಾ ರಮೇಶ್, ಗ್ರಾಮಾಂತರ ಬುದ್ಧಿ ಜೀವಿಗಳ ಬಳಗ ಬೇರ್ಯ ರಾಮ್‌ಕುಮಾರ್, ಸ್ವರ್ಣ ಭೂಮಿ ಸಂಸ್ಥಾಪಕ ಬಿ.ಶಿವಕುಮಾರ್. ಜ್ಯೋತಿಷಿ ಶಿವಕುಮಾರ್, ಪಿ. ಜಗನ್ನಾಥ್, ಇಂದೂಧರ್ ನಿಶಾನಿಮಠ್, ದಾಕ್ಷಾಯಣಮ್ಮ ಅಂದಪ್ಪ ಮತ್ತಿತರರು ಭಾಗವಹಿಸುವರು ಎಂದು ಪರಿಷತ್ ಅಧ್ಯಕ್ಷ ಬಳ್ಳಾರಿ ರೇವಣ್ಣ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಪರಿಷತ್ ಕಾರ್ಯದರ್ಶಿ ಶಿವಕುಮಾರ್ ಶೆಟ್ಟರ್, ಎ.ಬಿ.ರುದ್ರಪ್ಪ, ಎನ್.ಜೆ.ಶಿವಕುಮಾರ್, ಟಿ.ಆರ್.ಪಂಕಜಾ, ಶ್ರೀಧರ ಪಾಟೀಲ್, ಎಸ್.ಎಚ್. ವಿನಯಕುಮಾರ್ ಉಪಸ್ಥಿತರಿದ್ದರು.

## ಹರಪನಹಳ್ಳಿ ಪುರಸಭೆ : ಸಲಹೆಗೆ ಸಭೆ

ಹರಪನಹಳ್ಳಿ, ಡಿ.18 - ಆಯವ್ಯಯ ಅಂದಾಜು ಪತ್ರಿಕೆಯನ್ನು ತಯಾರಿಸುವ ಸಲುವಾಗಿ ಸಾರ್ವನಿಕರಿಂದ ಮತ್ತು ಸಂಘ ಸಂಸ್ಥೆಗಳಿಂದ ಸಲಹೆ. ಅನಿಸಿಕೆ ಪಡೆಯಲು ಇದೇ ದಿನಾಂಕ 30 ರಂದು ಮಧ್ಯಾಹ್ನ 3 ಕ್ಕೆ ಪುರಸಭೆಯ ಸಭಾಂಗಣದಲ್ಲಿ ಸಭೆಯನ್ನು ಆಯೋಜಿಸಲಾಗಿದೆ.

# ದೀಪೋತ್ಸವದಿಂದ ಜ್ಞಾನಾಭಿವೃದ್ಧಿ, ಮನೆಯಲ್ಲಿ ಸೌಭಾಗ್ಯ ಹೆಚ್ಚಳ



ರಾಣೇಬೆನ್ನೂರು

ರಾಣೇಬೆನ್ನೂರು, ಡಿ.26- ಸ್ಥಳೀಯ ವಾಗೀಶ ನಗರದ ಶ್ರೀ ವೀರಭದ್ರಸ್ವಾಮಿಗೆ ಕಾರ್ತಿಕ ದೀಪೋತ್ಸವದಂದು ರುದ್ರಾಭಿಷೇಕ ನೆರವೇರಿಸಿ, ಬೆಳ್ಳಿ ಕವಚ ತೊಡಿಸಿ, ವಿಶೇಷ ಅಲಂಕಾರದೊಂದಿಗೆ ಪೂಜೆ ಮಾಡಲಾಯಿತು.

ವೀರಭದ್ರೇಶ್ವರ ಸ್ವಾಮಿ ಮತ್ತು ಗಣಪತಿ, ಈಶ್ವರ, ಬಸವಣ್ಣ ದೇವರ ಕಾರ್ತಿಕ ದೀಪೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದ ಹೊನ್ನಾಳಿ ಹಿರೇಕಲ್ಮಠದ ಡಾ. ಚೆನ್ನಮಲ್ಲಿಕಾರ್ಜುನ ಸ್ವಾಮಿಗಳು, ದೀಪೋತ್ಸವವು ಸಕಲ ಅಭೀಷ್ಟೆಗಳನ್ನು ಕೊಡುತ್ತದೆ. ದೀಪೋತ್ಸವದಲ್ಲಿ ಭಾಗವಹಿಸುವುದರಿಂದ ಜ್ಞಾನಾಭಿವೃದ್ಧಿ ಹಾಗೂ ಮನೆಯಲ್ಲಿ ಸೌಭಾಗ್ಯ, ಸಂಪದ ಹೆಚ್ಚುತ್ತದೆ ಎಂದು ನುಡಿದರು.

ದೇವಸ್ಥಾನ ಸಮಿತಿ ಅಧ್ಯಕ್ಷ ಬಿ.ಎಸ್. ಪಟ್ಟಣಶೆಟ್ಟಿ, ಜಿ.ಜಿ. ಹೊಟ್ಟಿಗೌಡ್ರ, ಬಾಬು ಐರಣಿ, ವೀರೇಶ್ ಮೋಟಗಿ, ಜಗದೀಶ ಗೌಡ ಎಂ. ಪಾಟೀಲ, ವಿರೂಪಾಕ್ಷಪ್ಪ ಅಂಗಡಿ, ಕರಬಸಪ್ಪ ರಾಮಲಿಂಗಣ್ಣನವರ, ಎಸ್.ಎಸ್. ರಾಮಲಿಂಗಣ್ಣನವರ, ಮೇಘರಾಜ ಪಟ್ಟಣಶೆಟ್ಟಿ, ಕೆ.ಎಂ. ಹಾಲಸಿದ್ಧಶಾಸ್ತ್ರಿ, ಉಮೇಶ ಗುಂಡಗಟ್ಟಿ, ಡಾ. ಎಸ್.ಸಿ. ಹಿರೇಮಠ, ಉಮೇಶ ಪಟ್ಟಣಶೆಟ್ಟಿ, ಶಿವಯೋಗಿ ಹಳ್ಳಳ್ಳಿ, ಪುಟ್ಟರಾಜ ಅಂಗಡಿ, ಬಸವರಾಜ ನ್ಯಾಮತಿ, ಮರಬಸಣ್ಣನವರ ಎಂಜಿನಿಯರ್ ಪಾಲ್ಗೊಂಡಿದ್ದರು.

## ರಾಶಿ ಭವಿಷ್ಯ

**ದಿನಾಂಕ : 27.12.2020 ರಿಂದ 02.01.2021**

**– ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಹಿಡಿದ ಕೆಲಸವನ್ನು ಸಾಧಿಸಿ ಎಲ್ಲರ ಮೆಚ್ಚುಗೆ ಪಡೆಯುವಿರಿ, ಸರ್ಕಾರಿ ನೌಕರರಿಗೆ ಮೇಲಾಧಿಕಾರಿಗಳಿಂದ ಅನೇಕ ಮೆಚ್ಚುಗೆ ಮಾತುಗಳು ಕೇಳಿಬರಲಿವೆ. ಆಸ್ತಿ ಸಂಬಂಧಿ ವಿಚಾರದಲ್ಲಿ ಸೋದರನ ವಿರೋಧ ಕಟ್ಟಿಕೊಳ್ಳಬಹುದು. ಹಿರಿಯರನ್ನು ಮಧ್ಯಸ್ಥರನ್ನಾಗಿ ಮಾಡಿಕೊಂಡಲ್ಲಿ, ಆದಾಯದ ಮೂಲದಲ್ಲಿ ನಿರೀಕ್ಷೆಗೂ ಮೀರಿ ಹೆಚ್ಚಳ. ಮನೆಯಲ್ಲಿ ವೃದ್ಧರ ಆರೋಗ್ಯದ ವಿಷಯದಲ್ಲಿ ಎಚ್ಚರದಿಂದಿರಿ. ವ್ಯವಹಾರದಲ್ಲಿ ಹೆಚ್ಚಿನ ಲಾಭಾಂಶ ನಿಮಗೆ ದೊರೆಯಲಿದೆ. ಸೋಮ-ಮಂಗಳ-ಬುಧ ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಸದಾಕಾಲ ಪ್ರತಿಯೊಂದು ಕೆಲಸಕ್ಕೂ ಮತೊಬ್ಬರನ್ನು ಅವಲಂಬಿಸುವುದನ್ನು ಬಿಟ್ಟು, ಸ್ವತಂತ್ರವಾಗಿ ನಿರ್ಣಯಗಳನ್ನು ತೆಗೆದುಕೊಳ್ಳಿ, ರಕ್ಷಣಾ ಇಲಾಖೆಯವರಿಗೆ ಕಾರ್ಯಗಳ ಒತ್ತಡದಿಂದ ಮಾನಸಿಕ ಕಿರಿಕಿರಿ, ಅತಿಯಾದ ದುರಭಿಮಾನ ಒಳ್ಳೆಯದಲ್ಲ, ಕ್ರೀಡಾಪಟುಗಳಿಗೆ ಅವಕಾಶಗಳು ಅರಸಿ ಬರಲಿವೆ. ಸ್ನೇಹಿತರ ಸಹಕಾರದಿಂದ ವ್ಯವಹಾರದಲ್ಲಿ ಆಗುತ್ತಿದ್ದ ಸೋರಿಕೆ ನಿಮ್ಮ ಗಮನಕ್ಕೆ ಬರಲಿದೆ. ಮಿತಿ ಮೀರುತ್ತಿರುವ ಖರ್ಚು ಹಾಗೂ ಅತಿಯಾದ ಮೋಜು ಮಸ್ತಿ ನಿಮ್ಮ ಈ ವಾರದ ಸಂಪಾದನೆಯನ್ನು ಕರಗಿಸ ಬಹುದು. ನಿರುದ್ಯೋಗಿ ಪದವೀಧರರಿಗೆ ನೌಕರಿ. ಬುಧ-ಶುಕ್ರ-ಶನಿ- ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಙ, ಚ.ಕೆ.ಕೋ.ಹ.)**

ಬದುಕಿನಲ್ಲಿ ಹುಡುಗಾಟವನ್ನು ಬಿಟ್ಟು, ಗಂಭೀರವಾಗಿ ಚಿಂತಿಸುವುದು ಉತ್ತಮ. ಇಲ್ಲವಾದಲ್ಲಿ ನೀವು ಕೊನೆಯವರೆಗೂ ಪರಾವಲಂಬಿಗಳಾಗಿಯೇ ಇರಬೇಕಾದೀತು. ಹಿರಿಯರು ಮಕ್ಕಳ ಮುಂದಿನ ಭವಿಷ್ಯದ ಬಗ್ಗೆ ಈಗಲೇ ಒಂದು ವ್ಯವಸ್ಥೆ ಮಾಡುವುದು ಲೇಸು. ಕೊಟ್ಟ ಹಣ ಮರಳಿ ಬರಲು ಹರಸಾಹಸ ಪಡುವಿರಿ. ಅಂದುಕೊಂಡ ಕೆಲಸ ಕಾರ್ಯಗಳು ತುಸು ತಡವಾದರೂ, ಲಾಭದಾಯಕವಾಗಲಿವೆ. ಕುಟುಂಬದ ಆಂತರಿಕ ಕಲಹಗಳಲ್ಲಿ ಹಿರಿಯರು ಮಧ್ಯಪ್ರವೇಶ ಮಾಡದಿರುವುದು ಉತ್ತಮ. ಅಮೂಲ್ಯ ವಸ್ತುಗಳ ಬಗ್ಗೆ ಎಚ್ಚರದಿಂದಿರಿ. ಆಹಾರದಲ್ಲುಂಟಾದ ವ್ಯತ್ಯಾಸ ಆರೋಗ್ಯದ ಮೇಲೆ ಅಡ್ಡ ಪರಿಣಾಮ. ಭಾನು-ಬುಧ-ಶುಕ್ರ ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ಚಿತ್ರಕಲಾವಿದರಿಗೆ ಉತ್ತಮ ದಿನ, ಸಂಬಂಧವಿಲ್ಲದ ಹಗರಣಗಳು ನಿಮನ್ನು ಸುತ್ತಿಕೊಳ್ಳದಂತೆ ಎಚ್ಚರ ವಹಿಸಿರಿ. ಉತ್ತಮ ಆದಾಯ, ವ್ಯವಹಾರದಲ್ಲಿ ಪಾಲುದಾರರ ನಡುವೆ ಉತ್ತಮ ಬಾಂಧವ್ಯ, ಹೊಸ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಇದು ಸಕಾಲ. ಕೆಲಸಗಾರರು ತಂತ್ರಜ್ಞಾನಕ್ಕೆ ಹೊಂದಿಕೊಂಡಲ್ಲಿ ಮಾತ್ರ ಉತ್ತಮ ಭವಿಷ್ಯ, ಬದಲಾವಣೆ ಬದುಕಿನಲ್ಲಿ ಅನಿವಾರ್ಯ ಎಂಬುದು ನೆನಪಿರಲಿ.ಚಿಕ್ಕಮಕ್ಕಳ, ಅನಾರೋಗ್ಯ ಸಮಸ್ಯೆ ನಿಮ್ಮನ್ನು ಚಿಂತೆಗೀಡು ಮಾಡಬಹುದು. ವೃಥಾ ತಿರುಗಾಟದಿಂದ ಏನೂ ಪ್ರಯೋಜನವಿಲ್ಲ. ಚಾಡಿ ಮಾತುಗಳಿಗೆ ಮರುಳಾಗಬೇಡಿ. ಗೋವುಗಳಿಗೆ ಮೇವು-ನೀರು ಕೊಡಿ. ವಿದ್ಯಾರ್ಥಿಗಳಿಗೆ, ಉತ್ತಮ ಫಲಿತಾಂಶ ದೊರೆಯಲಿದೆ. ಉಳಿತಾಯಕ್ಕೆ ಇದು ಸಕಾಲ. ಮಂಗಳ-ಬುಧ-ಗುರು ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಕೌಟುಂಬಿಕ ಗುರುತರ ಜವಾಬ್ದಾರಿಯೊಂದು ನಿಮ್ಮ ಹೆಗಲೇರಲಿದೆ. ಅದನ್ನು ಸರಿಯಾಗಿ ನಿಭಾಯಿಸಿ, ಬಹುದಿನಗಳಿಂದ ಕಷ್ಟಪಡುತ್ತಿದ್ದ ನಿಮಗೆ, ಉತ್ತಮ ಪ್ರತಿಫಲ ದೊರೆಯಲಿದೆ. ಆದರೆ, ಹೆಚ್ಚಿನ ಬಂಡವಾಳ ಬಯಸುವ ಹೊಸ ವ್ಯವಹಾರದಲ್ಲಿ ಆಸಕ್ತಿ ತೋರಬೇಡಿ. ಅತಿಯಾದ ತಿರುಗಾಟದಿಂದ ಮೊಣಕಾಲು, ಕೀಲುನೋವು, ಉತ್ತಮ ವಾಗ್ಮಿಗಳಿಗೆ ಉಪನ್ಯಾಸ ನೀಡಲು ಅವಕಾಶ ದೊರೆಯಲಿದೆ. ನೀವು ಮೇಲಾಧಿಕಾರಿಗಳೊಂದಿಗೆ ವಿನಯದಿಂದ ವರ್ತಿಸಿ, ಆದಾಯ ಉತ್ತಮವಾಗಿರುವುದರಿಂದ ಆರ್ಥಿಕ ಮುಗ್ಗಟ್ಟು ಸ್ವಲ್ಪ ಕಡಿಮೆಯಾಗಲಿದೆ. ಹಿರಿಯರ ಅಭಿಪ್ರಾಯಗಳನ್ನು ಗೌರವಿಸಿ. ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ. ಭಾನು-ಮಂಗಳ-ಗುರು ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಪೂರ್ವ ನಿರ್ಧಾರಿತ ಕೆಲಸಗಳ ಬಗ್ಗೆ ಆಲಸ್ಯ ಬೇಡ. ಮಿತಿಮೀರುತ್ತಿರುವ ಖರ್ಚಿಗೊಂದು ಕಡಿವಾಣ ಹಾಕಿ. ದೈನಂದಿನ ಚಟುವಟಿಕೆಗಳಲ್ಲಿ ಉತ್ಸಾಹದಿಂದ ಪಾಲ್ಗೊಳ್ಳಿ. ಮಡದಿ, ಮಕ್ಕಳ ಸಿಡಿಮಿಡಿಗೆ ಮೌನವೇ ಉತ್ತರವಾಗಿರಲಿ. ಉದ್ಯೋಗಸ್ಥ ಮಹಿಳೆಯರಿಗೆ ಪದೋನ್ನತಿ ದೊರೆಯಲಿದೆ. ಹಿರಿಯರೊಂದಿಗೆ ಇದ್ದ ಮನಸ್ತಾಪ ದೂರವಾಗಲಿದೆ. ವಿದೇಶದಲ್ಲಿ ಅಧ್ಯಯನ ಮಾಡುತ್ತಿರುವವರಿಗೆ ತುಸು ತೊಂದರೆ ಕಾಣಲಿದೆ. ಆದರೆ, ಅದು ತಾತ್ಕಾಲಿಕ ಎಂಬುದು ನೆನಪಿರಲಿ. ಕ್ರೀಡಾಪಟುಗಳು ತಮ್ಮ ಸಾಧನೆಗಳ ಕಡೆ ಗಮನಹರಿಸಿದಲ್ಲಿ ಖ್ಯಾತಿ ಗಳಿಸುವರು. ಬಹಳ ದಿನಗಳ ಮೇಲೆ ಹಳೆಯ ಮಿತ್ರರ ಭೇಟಿಯಾಗಲಿದೆ. ನಿಮ್ಮ ಅನೇಕ ಸಮಸ್ಯೆಗಳಿಗೆ ಉತ್ತರ ಸಿಗಲಿದೆ. ದೂರದೂರುಗಳಿಗೆ ಪ್ರಯಾಣ ಬೇಡ, .ಅತಿಯಾದ ಮನರಂಜನೆ ಅಷ್ಟು ಒಳ್ಳೆಯದಲ್ಲ. ಸೋಮ-ಬುಧ-ಶುಕ್ರ ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ನಿವೃತ್ತಿಯಂಚಿನಲ್ಲಿರುವವರು ತಮ್ಮ ಗಳಿಕೆಯ ಬಗ್ಗೆ ಒಂದು ಯೋಜನೆ ರೂಪಿಸುವುದು ಉತ್ತಮ. ವಿದ್ಯಾರ್ಥಿ ವೇತನವು ಸಕಾಲಕ್ಕೆ ದೊರೆಯಲಿದೆ. ಉನ್ನತಾಧ್ಯಯನದ ಬಗ್ಗೆ ಮತ್ತೊಂದು ಬಾರಿ ವಿವೇಚಿಸುವುದು ಲೇಸು. ವೈಯಕ್ತಿಕ ಆರೋಗ್ಯ ಸಾಕಷ್ಟು ಸುಧಾರಿಸಲಿದೆ. ಚಿಕ್ಕಮಕ್ಕಳನ್ನು ಹರಿತವಾದ ಆಯುಧಗಳಿಂದ ದೂರವಿಡಿ. ಅತಿಥಿಗಳ ನಿರಂತರಾಗಮನದಿಂದ ಖರ್ಚಿನ ಬಾಬ್ತು ಹೆಚ್ಚು. ವ್ಯವಹಾರದಲ್ಲಿ ಪಾಲುದಾರರೊಂದಿಗೆ ಸೌಹಾರ್ದತೆಯಿಂದ ವರ್ತಿಸಿ. ಹೊಸ ಯೋಜನೆಗಳಿಗೆ ಸರ್ಕಾರದಿಂದ ಸಾಲ ದೊರೆಯಲಿದೆ. ಕಠಿಣೋಕ್ತಿಗಳಿಂದ ಮತ್ತೊಬ್ಬರ ಮನೋಯಿಸ ಬೇಡಿ. ಸೋದರನಿಗೆ ಕಂಕಣಭಾಗ್ಯ, ಪುಣ್ಯಕ್ಷೇತ್ರ ದರ್ಶನ, ಉಳಿತಾಯದ ಬಗ್ಗೆ ಆಲೋಚಿಸುವುದು ಉತ್ತಮ. ಮಂಗಳ-ಶುಕ್ರ-ಶನಿ ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯು.)**

ನೀವು ಎಷ್ಟೇ ಪ್ರಯತ್ನಪಟ್ಟರೂ ಮಾಡಿದ ಕೆಲಸಗಳು ಪ್ರಯೋಜನವಿಲ್ಲದೇ ಹೋಗಬಹುದು. ನಂಬಿದ ಜನರೇ ನಿಮ್ಮ ವಿರುದ್ಧ ಪಿತೂರಿ ಮಾಡುವರು, ಅಂತಹವರ ಬಗ್ಗೆ ಎಚ್ಚರದಿಂದಿರಿ. ಹಣದ ಹರಿವು ಹೆಚ್ಚಿದ್ದರೂ ಕೂಡ, ಸೋರಿಕೆ ವಿಪರೀತವಾಗಲಿದೆ. ಆಸ್ತಿಗೆ ಸಂಬಂಧಪಟ್ಟ ಕೋರ್ಟ್-ಕಛೇರಿ ವ್ಯಾಜ್ಯಗಳು ನಿಮ್ಮ ಪರವಾಗಿ ಆಗಲಿದ್ದು, ಮುಂದೆ ಹೋಗಲಿದೆ. ಶತ್ರುಗಳ ಒಳಸಂಚು ನಿಮ್ಮ ಅರಿವಿಗೆ ಬರಲಿದೆ. ಆಸ್ತಿ ಖರೀದಿ ವಿಚಾರವನ್ನು ಮತ್ತೊಮ್ಮೆ ವಿಚಾರಿಸಿ, ಎಷ್ಟೇ ಕಾರ್ಯ ಒತ್ತಡವಿದ್ದರೂ ದೈಹಿಕ ಆರೋಗ್ಯದ ಬಗ್ಗೆ ಸಾಕಷ್ಟು ಕಾಳಜಿ ವಹಿಸುವುದು ಉತ್ತಮ. ಕಳೆದುಹೋದ ದಾಖಲೆಗಳು ಕೈಸೇರಲಿವೆ. ಬಂಧುಗಳ ವೈಯಕ್ತಿಕ ವಿಚಾರಗಳಲ್ಲಿ ನಿಮ್ಮ ಪ್ರವೇಶ ಬೇಡ.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಹೊಸಮನೆ ಕಟ್ಟುವ ವಿಚಾರ ಆರಂಭದಲ್ಲಿ ಕುಂಠಿತಗೊಂಡರೂ, ನಂತರದಲ್ಲಿ ಚುರುಕಾಗಲಿದೆ. ನಿರುದ್ಯೋಗಿ ಪದವೀಧರರಿಗೆ ಉತ್ತಮ ವೇತನದ ನೌಕರಿ. ಮಡದಿ, ಮಕ್ಕಳ ಸಂತೋಷಕ್ಕಾಗಿ ತುಸು ಹೆಚ್ಚೇ ಎನ್ನಬಹುದಾದ ಹಣ ಖರ್ಚಾಗಬಹುದು.ಪಿತ್ರಾರ್ಜಿತ ಆಸ್ತಿಯಲ್ಲಿ, ನಿಮ್ಮ ಪಾಲು ಪಡೆಯುವಿರಿ. ವ್ಯವಹಾರದಲ್ಲಿ ಹೊಸ ಪಾಲುದಾರರನ್ನು ಸೇರಿಸಿಕೊಳ್ಳುವ ಮೊದಲು ಅವರ ಪೂರ್ವಾಪರಗಳನ್ನು ಸರಿಯಾಗಿ ತಿಳಿದುಕೊಳ್ಳಿ. ತೀವ್ರಾತಿತೀವ್ರವಾಗಿದ್ದ ಹಿರಿಯರ ಆರೋಗ್ಯದಲ್ಲಿ, ಅನಿರೀಕ್ಷಿತ ಆಶ್ಚರ್ಯ ಎಂಬಂತೆ ಹೆಚ್ಚಿನ ಸುಧಾರಣೆ. ಸೋಮ-ಗುರು-ಶನಿ ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಅತಿ ಚುರುಕಾಗಿ ಕೆಲಸ ಮಾಡುವುದರ ಮೂಲಕ ನಿಮ್ಮ ಆತ್ಮವಿಶ್ವಾಸ ಹೆಚ್ಚಿಸಿಕೊಳ್ಳುವಿರಿ. ಸಂಪನ್ಮೂಲಗಳ ಕ್ರೋಢೀಕರಣಕ್ಕೆ ಪ್ರಯತ್ನಿಸುವ ವಿಚಾರದಲ್ಲಿ ಯಶಸ್ವಿಯಾಗುವಿರಿ. ಮನಸ್ಸು ವ್ಯಗ್ರವಾಗಿದ್ದಾಗ. ಸಾಧ್ಯವಾದಷ್ಟು ಏಕಾಂಗಿಯಾಗಿರುವುದು ಲೇಸು. ಅವಿವಾಹಿತರಿಗೆ ಕಂಕಣಬಲ ಇಷ್ಟರಲ್ಲೇ ಕೂಡಿ ಬರಲಿದೆ. ಲೇವಾದೇವಿ ವ್ಯವಹಾರದಲ್ಲಿ, ಹೆಚ್ಚಿನ ಹಣ ಹೂಡಬೇಡಿ. ಮಹಿಳಾ ಉದ್ಯಮಿಗಳಿಗೆ ಸರ್ಕಾರದಿಂದ ಉತ್ತಮ ನೆರವು ದೊರೆಯಲಿದೆ. ವೈದ್ಯಕೀಯ ಶಿಕ್ಷಣ ಪಡೆದವರಿಗೆ ಉತ್ತಮ ಅವಕಾಶಗಳು, ಬ್ಯಾಂಕ್ ನೌಕರರು ತಮ್ಮ ಕರ್ತವ್ಯದಲ್ಲಿ ಸಾಕಷ್ಟು ಎಚ್ಚರದಿಂದಿರುವುದು ಉತ್ತಮ. ಭಾನು-ಬುಧ-ಶನಿ ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಮಾನಸಿಕ ದುಗುಡವನ್ನು ಆಪ್ತರಲ್ಲಿ ಹಂಚಿಕೊಳ್ಳಿ. ವಿದ್ಯಾಭ್ಯಾಸದ ಬಗ್ಗೆ ಉದಾಸಿನತೆ ಬೇಡ, ಹಣ-ಕಾಸಿನ ವಿಷಯದಲ್ಲಿ ತುಸು ಕಠಿಣವಾಗಿ ವರ್ತಿಸುವುದು ಲೇಸು. ಸೋದರನೊಂದಿಗೆ ಸೌಹಾರ್ದತೆಯಿಂದ ನಡೆದುಕೊಂಡಲ್ಲಿ ಅವನಿಂದ ಒಳ್ಳೆಯ ನೆರವು ದೊರೆಯುವುದು. ಕೃಷಿಕ ಮಿತ್ರರು, ಬೇಸಾಯಕ್ಕೆ ಬೇಕಾದ ಉಪಕರಣಗಳ ಬಗ್ಗೆ ಎಚ್ಚರದಿಂದಿರುವುದು ಉತ್ತಮ. ಗೃಹ ನಿರ್ಮಾಣ ಪರಿಕರಗಳ ಮಾರಾಟಗಾರರಿಗೆ ಹೆಚ್ಚಿನ ವಹಿವಾಟು. ವಾಹನಗಳನ್ನು ಚಾಲಿಸಲು ಹೋಗಬೇಡಿ. ಕರಿದ ಪದಾರ್ಥಗಳ ಅತಿಯಾದ ಸೇವನೆ ಒಳ್ಳೆಯದಲ್ಲ, ಪುಣ್ಯ ನದಿಗಳಲ್ಲಿ ಸ್ನಾನ ಮಾಡಿ. ಗುರು-ಶುಕ್ರ-ಶನಿ ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಆರೋಗ್ಯದ ನಿರ್ಲಕ್ಷ ನಿಮ್ಮನ್ನು ಹೈರಾಣಾಗಿಸಲಿದೆ. ಕೂಡಲೇ ವೈದ್ಯಕೀಯ ಚಿಕಿತ್ಸೆ ಪಡೆಯಿರಿ, ಮಾಡುವ ಕೆಲಸಗಳಲ್ಲಿ ಆತುರ ತೋರಬೇಡಿ. ಮಹಿಳೆಯರಿಗೆ, ಮನೆಯ ಒಳ ಹಾಗೂ ಹೊರ ಕೆಲಸಗಳು ಹೆಚ್ಚಿ ಒತ್ತಡಕ್ಕೆ ಒಳಗಾಗುವರು. ಎಷ್ಟೇ ಕೆಲಸ, ಕಾರ್ಯಗಳ ಒತ್ತಡವಿದ್ದರೂ, ಮನೆಯ ಆಗುಹೋಗುಗಳ ಬಗ್ಗೆ ವಿಶೇಷ ಗಮನಕೊಡುವುದು ಲೇಸು. ಸ್ನೇಹಿತರ-ಕಷ್ಟಗಳಿಗೆ ನೆರವಾಗುವಿರಿ. ಸಂಗಾತಿಯು ನಿಮ್ಮನ್ನು ಬೆಂಬಲಿಸುವರು. ನದಿ-ಕೆರೆಗಳಲ್ಲಿ ಈಜಲು ಹೋಗಬೇಡಿ. ಸಮಾಜದಲ್ಲಿ ಹೊಸ ಜನರು ನಿಮ್ಮ ಸಂಪರ್ಕಕ್ಕೆ ಬರುವರು.ಆದಾಯಕ್ಕೆ ತಕ್ಕಂತೆ ಖರ್ಚು-ವೆಚ್ಚಗಳನ್ನು ರೂಢಿಸಿಕೊಳ್ಳುವುದು ಉತ್ತಮ. ಅಪರಿಚಿತರೊಂದಿಗೆ ಸ್ನೇಹ ಅಪಾಯ. ಗುರು-ಚರಿತ್ರೆ ಪಾರಾಯಣ ಮಾಡಿ. ಸೋಮ-ಗುರು-ಶನಿ ಶುಭ ದಿನಗಳು.

**ವಿಶೇಷ ದಿನಗಳು ; ದಿನಾಂಕ : 27.12.2020 ಭಾನುವಾರ ಹನುಮದ್ವ್ರತ, ದಿನಾಂಕ : 31.12.2020 ಗುರುವಾರ ಗುರು-ಪುಷ್ಯ ಅಮೃತ ಸಿದ್ಧಿಯೋಗ ದಿನಾಂಕ : 2.1.2021 ಶನಿವಾರ ಸಂಕಷ್ಟ ಚತುರ್ಥಿ, ಚಂದ್ರೋದಯ ರಾತ್ರಿ 9 ಘಂಟೆ 12 ನಿಮಿಷಕ್ಕೆ.**

# ಪುನರಪಿ ಜನನಂ, ಪುನರಪಿ ಮರಣಂ...



ನಾವು ಹುಟ್ಟಿ,ಬೆಳೆದ ಅಥವಾ ಬೆಳೆಯುತ್ತಿರುವ ಮತ, ಧರ್ಮಗಳಲ್ಲಿರುವ ಸಣ್ಣಪುಟ್ಟ ಕುಂದುಕೊರತೆಗಳನ್ನೇ ದೊಡ್ಡಲೋಪವೆಂದು ಭಾವಿಸಿ, ಅದರ ಬಗ್ಗೆ ಆಂತರಿಕ ಸೆಳೆತವಿದ್ದರೂ ಕೂಡ ಯಾವುದೋ ಬಾಹ್ಯಾಕರ್ಷಣೆ, ಧನದ ಮುಂದೆ ಸರ್ವವೂ ಸತ್ಯಮಾರ್ಗವೆಂದು, ಇರುವುದೊಂದು ಜಗತ್ತಿನಲ್ಲಿ ಇರುವ ಅನೇಕ ಜಗದ್ಗುರುಗಳ ಪಾದ ತೊಳೆಯುತ್ತಾ, ಸುಖದ ಭ್ರಮೆಯಲ್ಲಿ, ಭೃಂಗದ ಬೆನ್ನೇರಿ ಹೋಗುತ್ತೇವೆ, ಕೊನೆಗೆ ಭ್ರಮನಿರಸನಕ್ಕೆ ಒಳಗಾದಾಗ ಸಾಧನೆಯ ದಾರಿ ಕವಲು ಕಳೆದು ಹೋಗಿರುತ್ತದೆ. ಮತ್ತೆ ಪುನರಪಿ ಜನನಂ, ಪುನರಪಿ ಮರಣಂ ತಪ್ಪುವುದಿಲ್ಲ.

ಮಹಾಭಾರತ ನಡೆದಿದ್ದು ಎಷ್ಟು ನಿಜವೋ, ಸುಳ್ಳೋ ಅದು ಅವರವರ ನಂಬಿಕೆಗೆ ಬಿಟ್ಟ ವಿಚಾರ. ಆದರೆ ಅದರಲ್ಲಿ ಹೇಳುವ ಜೀವನ ಮೌಲ್ಯಗಳು ಅಪಾರ ಮತ್ತು ಅದು ಸಾರ್ವತ್ರಿಕ ಹಾಗೂ ಸಾರ್ವಕಾಲಿಕ ಸತ್ಯ ಎಂಬುದಂತೂ ಶತಷಃ ನಿಜ. ಇದನ್ನು, ಎಂತಹ ನಾಸ್ತಿಕನೂ ಕೂಡ ಆಂತರಂಗಿಕವಾಗಿಯಾದರೂ ಒಪ್ಪುತ್ತಾನೆ.

ತಿಳಿದವರು ಹೇಳಿದಂತೆ ಮಹಾಭಾರತದ ಮುಖ್ಯಸಾರ, ಒಂದು ಕೃಷ್ಣನ ನಲ್ನುಡಿಯಾದ ಭಗವದ್ಗೀತೆ, ಮತ್ತೊಂದು ಅಂತ್ಯ ಕಾಲದಲ್ಲಿ ವಿಶೇಷವಾಗಿ ಭೀಷ್ಮರು ಭಕ್ತಿಯ ಬಸಿರಿನಿಂದ ಯುಧಿಷ್ಠಿರನಿಗೆ ಉಸಿರಿದ ವಿಷ್ಣುಸಹಸ್ರನಾಮ. ಇವೆರಡೂ ಹಲವರಿಗೆ ಕಟು ಕಷಾಯವಾದರೆ, ಕೆಲವರಿಗೆ ರಸಪಾಕ. ಇನ್ನು ನಮ್ಮಂತಹ ಅರೆಬೆಂದ ಮೆದುಳಿನವರಿಗೆ, ಸುರುಳಿ ಮಾಡೊಗೆದ ದಾರದುಂಡೆಯಂತೆ ಗೋಜಲು. ಆದರೆ, ಸಾಧಕರಿಗೆ ನಿಷ್ಕಂಟಕ, ನಿಷ್ಕಳಂಕ, ನಿಷ್ಕಪಟ ಮತ್ತೆ ಮರಳಿಬಾರದ ದಾರಿ. ದಾರಿ ತಿಳಿದವನು ಮಾತ್ರ ಸರಿದಾರಿ ತೋರಲು ಸಾಧ್ಯ ಅಲ್ಲವೇ? ಅದನ್ನೇ ಶ್ರೀಕೃಷ್ಣ, ತಾನೇ ಸ್ವತಃ ತನ್ನ ನಲ್ನುಡಿಯಲ್ಲಿ ಹೇಗೆ ಮುಕ್ತಿಮಾರ್ಗಕ್ಕೆ ಕೈಮರವಾಗುತ್ತಾನೆ ಎಂಬುದನ್ನು ಗೀತಾಜಯಂತಿ ಶುಭಾವಸರದಲ್ಲಿ ಒಂದು ಶ್ಲೋಕದಿಂದ ತಿಳಿಯಲು ಪ್ರಯತ್ನಿಸೋಣ. ಭಗವ ದ್ಗೀತೆಯ ಮೂರನೆ ಅಧ್ಯಾಯ 35ನೇ ಶ್ಲೋಕ ಹೀಗಿದೆ.

***ಶ್ರೇಯಾನ್ ಸ್ವಧರ್ಮೋ ವಿಗುಣಃ***
***ಪರಧರ್ಮಾತ್ ಸ್ವನಿಷ್ಠಿತಾತ್।***
***ಸ್ವಧರ್ಮೇ ನಿಧನಂ ಶ್ರೇಯಃ***
***ಪರಧರ್ಮೋ ಭಯಾವಹಃ ॥***

ನಾವು ಸರಿಯಾದ ಅರಿವಿಲ್ಲದ ಮತ್ತೊಂದು ಧರ್ಮವನ್ನು ಆಸೆ, ಆಮಿಷ, ಪ್ರೇಮ, ಕಾಮ ಹೀಗೆ ಕಾರಣಾಂತರಗಳು ಏನೇ ಆಗಿದ್ದರೂ, ಅದನ್ನ ಆಶ್ರಯಿಸಲು ಹೋದರೆ ಇದರ ಪರಿಣಾಮ ಮಾತ್ರ ಅತಿಘೋರ. ಪುರಪುಣ್ಯವೆಲ್ಲವೂ ಪರಧರ್ಮ ರೂಪದಲ್ಲಿ ಪರಲೋಕ ಸೇರಿಬಿಡುತ್ತದೆ. ಅದಕ್ಕಿಂತಲೂ, ನಾವು ಹುಟ್ಟಿನಿಂದ ನಂಬಿಕೊಂಡು ಬಂದಂತಹ ಧರ್ಮಗಳಲ್ಲಿ ಅಲ್ಪ ಸ್ವಲ್ಪ ನ್ಯೂನತೆಯಿದ್ದರೂ ಕೂಡ ಅದರಲ್ಲೇ ನಂಬಿಕೆಯಿಟ್ಟು ಧರ್ಮಾಚರಣೆ ಮಾಡುತ್ತಾ, ಅದರಲ್ಲಿಯೇ ಮರಣ ಹೊಂದುವುದು ಎಷ್ಟೋ ಉತ್ತಮ. ಇದಕ್ಕೆ ಮಹಾಭಾರತದ ಪ್ರಸಂಗವೊಂದನ್ನು ವ್ಯಾಸಮುನಿಗಳು ಹೀಗೆ ನಮ್ಮ ಮುಂದಿಡುತ್ತಾರೆ.

ಘೃತಾಚೀ ಮತ್ತು ಭರದ್ವಾಜರ ಮಗ ದ್ರೋಣಾಚಾರ್ಯರು. ಕೃಪಿ ಮತ್ತು ದ್ರೋಣರ ಮಗ ಅಶ್ವತ್ಥಾಮ. ಈ ತಂದೆ ಮಕ್ಕಳು ಹುಟ್ಟಿನಿಂದ ಬ್ರಾಹ್ಮಣರು. ತಂದೆ ಭರದ್ವಾಜರಲ್ಲಿ ಶಸ್ತ್ರಾಭ್ಯಾಸ ಮಾಡಿದ್ದರೂ, ಗೆಳೆಯ ದೃಪದನ ಮೇಲುಂಟಾದ ಕೋಪದಿಂದ ಪರಶುರಾಮರ ಬಳಿ, ಅನೇಕ ನೂರು ವರ್ಷಗಳ ಕಾಲ ಶಸ್ತ್ರಾಭ್ಯಾಸ ಮಡುತ್ತಾರೆ, ಕಾಲಘಟ್ಟದಲ್ಲಿ ಶಸ್ತ್ರ-ಶಾಸ್ತ್ರಗಳ ತಾಕಲಾಟದಲ್ಲಿ ಶಾಸ್ತ್ರ ದೀರ್ಘವನ್ನು ಕಳೆದುಕೊಂಡು, ಅವರು ಕಲಿತ ಆ ಎರಡೂ ವಿದ್ಯೆ ಶಸ್ತ್ರಾಸ್ತ್ರಗಳಾಗಿ ಬಿಡುತ್ತವೆ. ಧನಸ್ಸಿನ ಠೇಂಕಾರಕ್ಕೆ ಅಂಜಿ ತಾಳೆಗರಿಗಳು ಗೂಡು ಸೇರಿದರೆ, ಬತ್ತಳಿಕೆಯಿಂದ ಬಾಣಗಳು ಹೊರಬರುತ್ತವೆ. ಹಾಲಿನ ನೆಪವೇ ಹಾಲಾಹಲವಾಗಿ, ಸಂದರ್ಭದ ಶಿಶುವಾಗಿ, ಸರ್ವಧನುರಾಚಾರ್ಯರೆಂದೇ ಪ್ರಸಿದ್ಧರಾದರೆಂದು ವ್ಯಾಸರು ದ್ರೋಣರ ಪಾತ್ರ ಪರಿಚಯವನ್ನು ಮಹಾಭಾರತದಲ್ಲಿ ಮಾಡಿಕೊಡುತ್ತಾರೆ. ಈ ಪರಿವರ್ತನೆಗೆ, ಅಶ್ವತ್ಥಾಮನೂ ಹೊರತಾಗುವುದಿಲ್ಲ. ಹೀಗೆ ಉಭಯರೂ ಬ್ರಾಹ್ಮಣ್ಯ ಧರ್ಮದಿಂದ ಕ್ಷತ್ರಿಯ ಧರ್ಮಕ್ಕೆ ಮಗ್ಗಲು ಬದಲಾಯಿಸುತ್ತಾರೆ. ಇದರ ಪರಿಣಾಮ?

ಮುಂದೆ ಇದೇ ದ್ರೋಣರು, ಕುರು-ಪಾಂಡವ ವಂಶದಲ್ಲಿ ನಡೆವ ಅನೇಕಾನೇಕ ಘಟನೆಗಳಿಗೆ ಮೂಕ ಪ್ರೇಕ್ಷಕರಾಗುತ್ತಾರೆ ಮತ್ತು ಧರ್ಮ ಮೌನವಾಗಿಬಿಡುತ್ತದೆ. ಒಕ್ಕೊರಲಿನಿಂದ ಬರಬೇಕಾಗಿದ್ದ ಧರ್ಮಾಧರ್ಮದ ವಿವೇಚನಾಯುಕ್ತವಾದ ಮಾತುಗಳು ಗಂಟಲಲ್ಲೇ ಹುದುಗಿಹೋಗಿ, ಬ್ರಾಹ್ಮಣ್ಯದ ಸಾತ್ವಿಕತೆ ಸತ್ತುಹೋಗುತ್ತದೆ. ಮುಂದೆ ಮಹಾಭಾರತ ಯುದ್ಧ ಪ್ರಸಂಗದಲ್ಲಿ ನಿರಾಯುಧನಾದ ಅಭಿಮನ್ಯುವನ್ನು ಕೊಲ್ಲುವಾಗ ಇದ್ದ ಕ್ಷಾತ್ರಕಾಠಿಣ್ಯ, ಮಗನಾದ ಅಶ್ವತ್ಥಾಮನು ಹತನಾದನೆಂಬ ವಾರ್ತಾ ಶ್ರವಣ ಮಾತ್ರದಿಂದಲೇ ಕೆರಳಿಕನಲಬೇಕಾಗಿದ್ದ ಅವರು, ಶಸ್ತ್ರತ್ಯಾಗ ಮಾಡಿ, ಮಾರ್ದವತೆಗೆ ಒಳಗಾಗಿ ಕ್ಷಾತ್ರಧರ್ಮವನ್ನು ಮರೆಯುತ್ತಾರೆ. ಇವರನ್ನು ನಂಬಿದ್ದ ದುರ್ಯೋಧನನ ಸ್ಥಿತಿ ಅತಂತ್ರವಾಗುತ್ತದೆ.

ಇತ್ತ ಅಶ್ವತ್ಥಾಮನದೋ ಇನ್ನೊಂದು ಕಥೆ. ಇವನೂ ಸಹ, ತಂದೆಯಿಂದ ಉಭಯ ಶಾಸ್ತ್ರಗಳನ್ನು ಕಲಿತಿದ್ದರೂ, ಅತಿಯಾದ ಆತ್ಮವಿಶ್ವಾಸ, ಬೇಜವಾಬ್ದಾರಿತನ ಮತ್ತು ಹುಂಬತನ ಇವುಗಳಿಂದಾಗಿ ಇವನೂ ಕೂಡ ತಂದೆಯ ಹಾದಿಯಲ್ಲೇ ಸಾಗುತ್ತಾನೆ.

ವೈಶಂಪಾಯನ ಸರೋವರದ ಬಳಿ ಭೀಮನ ಗದಾಘಾತದಿಂದ ದೇವಸಮಾಗಮ ಸಮಯವನ್ನು ನಿರೀಕ್ಷಿಸುತ್ತಿದ್ದ ದುರ್ಯೋಧನನ ಬಳಿ ಬಂದ ಅಶ್ವತ್ಥಾಮ, ಅವನಿಗೆ ಸದ್ಗತಿಯಾಗಲೆಂದು ಪ್ರಾರ್ಥಿಸುವುದನ್ನು ಬಿಟ್ಟು, ಮರೆವಿನಿಂದಲೋ ಅಥವಾ ಮರುಕದಿಂದಲೋ ದುರ್ಯೋಧನನ ಎಲ್ಲಾ ಕೋರಿಕೆಗಳಿಗೆ ಅಸ್ತು ಎಂದನು. ಇದರ ಫಲಶೃತಿ ಮರಣಶಯ್ಯೆಯಲ್ಲಿದ್ದ ಉರಗಪತಾಕನು ಮಾಡಿದ ಧೂಳಿನಿಂದಲೇ ಸೇನಾಪತ್ಯದಲ್ಲಿ ಅಭಿಷಿಕ್ತನಾದ, ಅಶ್ವತ್ಥಾಮನ ವಿವೇಕ ಮಸುಕಾಗುತ್ತದೆ. ಅವನ ಮಡದಿಯಾದ ಭಾನುಮತಿಯಲ್ಲಿ ಸಂತತಿಯನ್ನು ಹುಟ್ಟಿಸಿಯಾದರೂ ಅವರ ಮುಖಾಂತರ, ಪಾಂಡವರನ್ನು ನಾಶ ಮಾಡಬೇಕೆಂಬ ಕೋರಿಕೆಯನ್ನು ಮುಂದಿಟ್ಟಾಗ ಮೌನಕ್ಕೆ ಶರಣಾಗುತ್ತಾನೆ ಈ ಬ್ರಹ್ಮಜ್ಞಾನಿ (ಇದು ನೆರವೇರುವುದಿಲ್ಲ ಅದು ಮುಂದಿನ ಮಾತು). ಪಾಂಡವರ ಸರ್ವನಾಶ ಮಾಡುತ್ತೇನೆ ಎಂದು ಪ್ರತಿಜ್ಞೆಗೈದ ಈ ದ್ರೌಣಿ ಅರ್ಧರಾತ್ರಿ ವೇಳೆ ಪಾಂಡವರ ಶಿಬಿರಕ್ಕೆ ನುಗ್ಗುವುದು ಇವನು ಯಾವ ಕ್ಷತ್ರಿಯನೂ ಮಾಡದ ಅಕಾರ್ಯಕ್ಕೆ ಪ್ರವೃತ್ತನಾದ. ಇಲ್ಲೊಂದು ಸ್ವಾರಸ್ಯವೆಂದರೆ, ಕ್ಷತ್ರಿಯರಿಗೆ ಅವರದ್ದೇ ಆದ ಕೆಲವು ಧರ್ಮದ ಕಟ್ಟುಪಾಡುಗಳಿವೆ. ರಾತ್ರಿವೇಳೆ ಯುದ್ಧ ಮಾಡುವ ಹಾಗಿಲ್ಲ. ಶತ್ರುವು ನಿರಾಯುಧನಾಗಿ ಎದುರಿಗೆ ಬಂದಾಗ ಅವನನ್ನು ಕೊಲ್ಲದೇ ಬಂಧಿಸಬೇಕು, ಮಲಗಿರುವ ವೈರಿಯನ್ನು, ಚಿಕ್ಕಮಕ್ಕಳನ್ನು, ಶರಣಾಗತರಾದವರನ್ನು ಕೊಲ್ಲುವ ಹಾಗಿಲ್ಲ ಮತ್ತು ಶತೃವಿನ ಶಿಬಿರಕ್ಕೆ ಬೆಂಕಿ ಹಚ್ಚುವುದು ಇವೆಲ್ಲವೂ ಕ್ಷತ್ರಿಯ ಧರ್ಮಕ್ಕೆ ವಿರುದ್ಧವಾದ ನಡೆಗಳು ಬ್ರಾಹ್ಮಣನಾದ ಅಶ್ವತ್ಥಾಮ ಪರಧರ್ಮದ ಸೆಳೆತಕ್ಕೆ ಒಳಗಾಗಿ ಮಲಗಿದ್ದ ನಿಶ್ಶಸ್ತ್ರರಾಗಿದ್ದ ನಾಳೆಯ ಯಮಪುರಿಗೆ ಪಯಣಿಸಬೇಕಿದ್ದ ಅನೇಕ ಯೋಧರನ್ನು ಉಪಪಾಂಡವರನ್ನು ಕೊಂದು, ಶಿಬಿರಕ್ಕೆ ಬೆಂಕಿಹಚ್ಚಿದ. ತನ್ನ ಕೊನೆ ಪ್ರಯತ್ನವೆಂಬಂತೆ ಉತ್ತರೆಯ ಗರ್ಭಸ್ಥ ಭ್ರೂಣಕ್ಕೆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿ, ಶಿಶುಹತ್ಯೆಗೆ ಪ್ರಯತ್ನಿಸುತ್ತಾನೆ, ಎಲ್ಲರಿಗೂ ನೀತಿಬೋಧನಾಗಬೇಕಿದ್ದ ಈ ಅಶ್ವತ್ಥಾಮ ಹೀಗೆ ಸ್ವಧರ್ಮಕ್ಕೆ ನಿಷ್ಠೆ ತೋರಲಾಗದೆ, ಪರಧರ್ಮವನ್ನೂ ಸರಿಯಾಗಿ ತಿಳಿಯದೆ ಸರ್ವರಿಂದಲೂ ಪೂಜಿತನಾಗಿದ್ದವನು, ಅವರಿಂದಲೇ ತಿರಸ್ಕೃತನಾಗಿ, ಉಭಯ ಧರ್ಮಭ್ರಷ್ಟನಾಗಿ ಅಲೆಮಾರಿಯಂತೆ ತಿರುಗಬೇಕಾಗುತ್ತದೆ.

ನಮ್ಮಗಳ ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ, ನಾವು ಹುಟ್ಟಿ, ಬೆಳೆದ ಅಥವಾ ಬೆಳೆಯುತ್ತಿರುವ ಮತ, ಧರ್ಮಗಳಲ್ಲಿರುವ ಸಣ್ಣಪುಟ್ಟ ಕುಂದುಕೊರತೆಗಳನ್ನೇ ದೊಡ್ಡ ಲೋಪವೆಂದು ಭಾವಿಸಿ, ಅದರ ಬಗ್ಗೆ ಆಂತರಿಕ ಸೆಳೆತವಿದ್ದರೂ ಕೂಡ ಯಾವುದೋ ಬಾಹ್ಯಾಕರ್ಷಣೆ, ಧನದ ಮುಂದೆ ಸರ್ವವೂ ಸತ್ಯಮಾರ್ಗವೆಂದು ಇರುವುದೊಂದು ಜಗತ್ತಿನಲ್ಲಿ ಸುಖದ ಭ್ರಮೆಯಲ್ಲಿ, ಭೃಂಗದ ಬೆನ್ನೇರಿ ಹೋಗುತ್ತೇವೆ, ಕೊನೆಗೆ ಭ್ರಮನಿರಸನಕ್ಕೆ ಒಳಗಾದಾಗ ಸಾಧನೆಯ ದಾರಿ ಕವಲು ಕಳೆದು ಹೋಗಿರುತ್ತದೆ. ಮತ್ತೆ ಪುನರಪಿ ಜನನಂ, ಪುನರಪಿ ಮರಣಂ ತಪ್ಪುವುದಿಲ್ಲ. ಇದನ್ನೇ ಗೀತಾಚಾರ್ಯ ಹೇಳಿದ್ದು, ಸ್ವಧರ್ಮೇ ನಿಧನಂ ಶ್ರೇಯಃ, ಪರಧರ್ಮೋ ಯಾವುದೋ ಆಕರ್ಷಣೆ, ಯೌವ್ವನದ ಉನ್ಮಾದ, ಸನ್ನಿವೇಶ, ಸಂದರ್ಭಗಳು ಅಶ್ವತ್ಥಾಮನನ್ನು ಪರಧರ್ಮ ಸೆಳೆದಂತೆ ನಮ್ಮನ್ನೂ ಸೆಳೆಯುತ್ತದೆ. ಆದರೆ, ಅದರ ಸುಳಿಗೆ ಸಿಕ್ಕವರು ಮತ್ತೆ ಮೇಲೆ ಬರುವುದು ಶವವಾಗಿ ಅಥವಾ ಜೀವಚ್ಛವವಾಗಿ. ಇದಕ್ಕೆ ದಣಿಯುವಷ್ಟು ದೃಷ್ಟಾಂತಗಳು ನಮಗೆ ಸಮಾಜದಲ್ಲಿ ದೃಗ್ಗೋಚರವಾಗುತ್ತವೆ. ಧರ್ಮ-ಧರ್ಮಗಳ ನಡುವೆ ಪರಸ್ಪರ ಗೌರವ, ಸೌಹಾರ್ದತೆ ಇರಬೇಕೇ ವಿನಃ ಖಡ್ಗಗಳ ಝಳಪಲ್ಲ.

ಇದನ್ನೇ ಯದುನಂದನ ಭಗವದ್ಗೀತೆಯಲ್ಲಿ ಬೋಧನೆಯ ಬುತ್ತಿಯನ್ನು ನಮ್ಮ ಮುಂದೆ ಬಿಚ್ಚಿಟ್ಟಿದ್ದಾನೆ. ಆದರೆ ಯಾಕೋ, ಅದನ್ನುಣ್ಣುವ ಹಸಿವೇ ನಮಗಿಲ್ಲ. ಪಕ್ಕದ ಎಲೆಯ ಮೇಲಿರುವ ಚಿತ್ತಾಕರ್ಷಕ ಬಣ್ಣದ, ಶುಚಿ-ರುಚಿ ತಿಳಿಯದ, ಊಟದ ಮೇಲೇ ಕಣ್ಣು. ಊಟದ ಅಸಲಿಯತ್ತು ತಿಳಿಯುವುದೇ ಅದು ಉದರ ಸೇರಿದಾಗ. ನಮ್ಮ ಬುತ್ತಿ ನಮಗಿರಲಿ, ಅವರ ಮೃಷ್ಟಾನ್ನ ಅವರಿಗಿರಲಿ. ಇದೆ ಈ ಶ್ಲೋಕದ ಸಾರಸರ್ವಸ್ವ.

ಇಷ್ಟು ಹೇಳಿದ ಮೇಲೂ ಶ್ರೀಕೃಷ್ಣ ಹೇಳುವುದು 'ಯಥೇಚ್ಛಸಿ ತಥಾ ಕುರು' (ನಿನಗೆ ಇಷ್ಟಬಂದಂತೆ ಮಾಡು). ಇದನ್ನು ಅರಿವುದು ಬಿಡುವುದು ನಮಗೆ ಬಿಟ್ಟ ವಿಚಾರ.

**- ಜಯತೀರ್ಥಾಚಾರ್ ವಡೇರ್**
**ದಾವಣಗೆರೆ.**

# ಹೊನ್ನಾಳಿ ಅರ್ಬನ್ ಕ್ರೆಡಿಟ್ ಸೊಸೈಟಿಯಿಂದ ಶೇ.12 ಡಿವಿಡೆಂಡ್



ಹೊನ್ನಾಳಿ ಡಿ. 26 - ಹೊನ್ನಾಳಿ ಅರ್ಬನ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯು 50 ಲಕ್ಷ ರೂ.ಗಳ ನಿವ್ವಳ ಲಾಭ ಹೊಂದಿದೆ. 12ರಷ್ಟು ಡಿವಿಡೆಂಡನ್ನು ಸದಸ್ಯರಿಗೆ ನೀಡಲು ತೀರ್ಮಾನಿಸಲಾಗಿದೆ ಎಂದು ಸೊಸೈಟಿಯ ಅಧ್ಯಕ್ಷ ಡಾ. ರಾಜಕುಮಾರ್ ಹೇಳಿದರು.

ಸಂಘದ 21 ನೇ ವಾರ್ಷಿಕ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸೊಸೈಟಿಯು ಒಂದು ಕುಟುಂಬದಂತೆ, ಸಾಲಗಾರರ ಕಾಳಜಿಯಂತೆ ಠೇವಣಿದಾರರ ರಕ್ಷಣೆ ಮಾಡುವುದರಿಂದ ಕೆಲವೊಂದು ಕಠಿಣ ನಿರ್ಧಾರಗಳ ಅನಿವಾರ್ಯತೆ ಇದೆ ಎಂದರು.

5379 ಸದಸ್ಯರನ್ನು ಹೊಂದಿದ್ದು, ಷೇರು ಬಂಡವಾಳ ಎರಡು ಕೋಟಿ 40 ಲಕ್ಷವಿದೆ. 25 ಕೋಟಿ ರೂ.ಗಳ ದುಡಿಯುವ ಬಂಡವಾಳವಿದ್ದು, ಸೊಸೈಟಿ 'ಎ' ಗ್ರೇಡ್ ನಲ್ಲಿದೆ. ನ್ಯಾಮತಿ ಶಾಖೆ ಕಟ್ಟಡಕ್ಕೆ ಮುಂದಾಗಿರುವುದಾಗಿ ಅವರು ಹೇಳಿದರು.

ಸೊಸೈಟಿ ಉಪಾಧ್ಯಕ್ಷ ವೀರೇಶ್, ಸದಸ್ಯರುಗಳಾದ ಪ್ರಕಾಶ್, ಜೈ ರಾವ್, ಹನುಮಂತಪ್ಪ, ಶಿವಮೂರ್ತಿ, ರಾಜನಾಯ್ಕ, ಮೋಹನ್, ನಾಗರಾಜ್, ರವಿಕುಮಾರ್, ಉಮೇಶ್, ಪ್ರಸಾದ್, ರೂಪ, ನಾಗರತ್ನ, ಶಾಂತಲಾ, ಕಾರ್ಯದರ್ಶಿ ಕುಮಾರ್ ಮತ್ತಿತರರು ಇದ್ದರು.

# ರೈತನನ್ನು ಎರಡನೇ ಯೋಧನಂತೆ ಬಿಂಬಿಸಬೇಕು : ತಿಮ್ಮಪ್ಪ ಆಶಯ




ಮಲೇಬೆನ್ನೂರು, ಡಿ.26 - ಸಮೀಪದ ಗುಡ್ಡದ ಬೇವಿನಹಳ್ಳಿ ಗ್ರಾಮದಲ್ಲಿ ಹಳ್ಳಿ ಸೊಬಗು ಯುವಕರ ತಂಡದಿಂದ ರೈತ ದಿನಾಚರಣೆ ಮಾಡಲಾಯಿತು.ತಂಡದ ಅಧ್ಯಕ್ಷ ತಿಮ್ಮಪ್ಪ ಮಾತನಾಡಿ, ರೈತರು ಯಾವ ಸಮಸ್ಯೆಗಳು ಬಂದರೂ ಎದೆಗುಂದದೇ ಎದುರಿಸಿ ಜೀವನ ನಡೆಸಬೇಕು. ರೈತ ಜೀವನದಲ್ಲಿ ಸುಖ ಕಾಣಬೇಕು ಎಂದರು.

ತಂಡದ ಉಪಾಧ್ಯಕ್ಷ ನಾಗರಾಜ್ ಕೆಂಗಣ್ಣರ ಮಾತನಾಡಿ, ಹಗಲಿರುಳ ಶ್ರಮದಿಂದ ರೈತರು ಇಡೀ ಜಗಕೆ ಆಹಾರ ನೀಡುತ್ತಾರೆ, ಅಂತಹ ಪುಣ್ಯದ ಕಾರ್ಯವನ್ನು ಮಾಡುವ ರೈತರಿಗೆ ಇಡೀ ಜನತೆ ಋಣಿಯಾಗಿರಬೇಕು. ಧನ್ಯತಾ ಭಾವ ವ್ಯಕ್ತಪಡಿಸಬೇಕು. ರೈತನನ್ನು ಎರಡನೇ ಯೋಧನಂತೆ ಬಿಂಬಿಸಬೇಕು ಎಂದು ಕರೆ ನೀಡಿದರು.

ಯುವಕ ಓಂಪ್ರಕಾಶ್ ಮಾತನಾಡಿ, ರೈತನೊಬ್ಬ ವಿಶ್ವದಲ್ಲಿರದಿದ್ದರೆ ಇಡೀ ಜೀವ ಸಂಕುಲ ನಾಶವಾಗುತ್ತಿತ್ತು. ರೈತರಿಂದಲೇ ದೇಶದ ಬದುಕು, ರೈತ ಮತ್ತು ಯೋಧ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಎಂದು ತಿಳಿಸಿದರು.

ಮುಖಂಡರಾದ ತಿಮ್ಮಣ್ಣ ಮೂಗಿನಗೊಂದಿ, ಸಹದೇವಪ್ಪ, ಕಾರ್ತಿಕ್, ರಾಕೇಶ್ ಪಟೇಲ್, ರವಿಕಿರಣ್ ಮತ್ತಿತರರು ಭಾಗಿಯಾಗಿ ರೈತ ದಿನದ ಸ್ಮರಣೆಗಾಗಿ ನೆರೆದಿರುವ ರೈತರಿಗೆ ತೆಂಗಿನ ಸಸಿ ವಿತರಿಸಲಾಯಿತು.

## ಗೀತಾ ಜಯಂತಿ ಪ್ರಯುಕ್ತ
## ಭಗವದ್ಗೀತೆಯ ಚಿಂತನೆ

ಭಗವದ್ಗೀತೆಯ ಪೇಳಿದ ದಿನವಿಂದು
ಭಗವಂತನ ಬೋಧೆ ಕೇಳೋಣವಿಂದು
ಬಗೆ ಬಗೆಯ ಕಷ್ಟದಿ ನರಳುತಿಹೆವಿಂದು
ನಿಗಮವಂದ್ಯನ ಮಾತ ತಿಳಿವ ಇಂದು

ಕೃಷ್ಣ ನುಪದೇಶ ಶ್ರೇಷ್ಠ ಉಪದೇಶ
ಕಷ್ಟಗಳ ಕಳೆವುದು ಗೀತೋಪದೇಶ
ಸೃಷ್ಟಿ ಗೊಡೆಯ ನಮ್ಮ ದೇವಾಧಿದೇವನ
ದೃಷ್ಟಿ ನಮ್ಮ ಮೇಲೆ ತರಿಸೋ ಉಪದೇಶ

ಒಳಗಿಹ ಆತ್ಮನನು ಕಾಣೆಂದು ಪೇಳಿಹನು
ಬಳಲಿಸುವ ದೇಹವಿದು ಕ್ಷರವೆಂದಿಹನು
ಹೊಳೆವೆ ನಾನೆ ನಿನ್ನೊಳಹೊರಗೆ ಎಂದಿಹನು
ಬೆಳೆದು ವಿಶ್ವರೂಪ ತೋರಿಸಿಹನು

ನಿನ್ನ ಕರ್ತವ್ಯ ನೀ ಮಾಡು ನಿಶ್ಕಾಮದಿ
ಏನು ಬಂದರು ಸಹಿಸು ಸಮಚಿತ್ತದಿ
ಅನುಕ್ಷಣವು ಅರ್ಪಿಸುತ ನನಗೆ ಎಲ್ಲವನು
ಅನುಪಮ ಭಕ್ತಿಲಿ ಬೆಳೆ ಎಂದಿರುವನು

ಜ್ಞಾನ ಭಕ್ತಿ ಯೋಗ ಮಾರ್ಗಗಳ ತೋರಿ
ಮಾನವನ ಕರ್ತವ್ಯಗಳನೆಲ್ಲ ತೋರಿ
ತಾನೆ ಪುರುಷೋತ್ತಮ ಎಂದು ಸಾರಿ
ಅನನ್ಯ ಸಿರಿಹರಿ ಪರಮ ಕೃಪೆ ತೋರಿ


**- ಶ್ರೀ ಕೃಷ್ಣಾರ್ಪಣಮಸ್ತು**
**ರೂಪಶ್ರೀ ಶಶಿಕಾಂತ್**

## ದಿನದ ಚುಟುಕು

ಕಾಣದ ಮನಸಿನ ಮಾಯೆ
ಮೊಗದಲ್ಲಿ ನಲಿವ ಛಾಯೆ
ಕಣ್ಮಣಿಯಲ್ಲಿ ಕಂಡ ಬಿಂಬ
ಮನವನರಿಸಿತದರ ತುಂಬಾ !

**- ವೀಕೆಎಂ**

# ಫುಟ್ ಪಾತ್ ವ್ಯಾಪಾರಕ್ಕೆ ಅವಕಾಶ ಕೊಡದಿದ್ದರೆ ಹೋರಾಟ : ರವಿ ಪಾಟೀಲ



**ರಾಣೇಬೆನ್ನೂರು**

ರಾಣೇಬೆನ್ನೂರು, ಡಿ.26 - ಫುಟ್ ಪಾತ್ ವ್ಯಾಪಾರಸ್ಥರ ಎತ್ತಂಗಡಿ ಅಮಾನವೀಯವಾದದ್ದು ಎಂದು ರಾಜ್ಯ ರೈತ ಸಂಘದ ಸಂಚಾಲಕ ರವೀಂದ್ರ ಗೌಡ ಪಾಟೀಲ ತೀವ್ರವಾಗಿ ಖಂಡಿಸಿದ್ದು, ಸೂಕ್ತ ಕ್ರಮ ಜರುಗಿಸದಿದ್ದಲ್ಲಿ ಬೀದಿಗಿಳಿಯುವ ಎಚ್ಚರಿಕೆ ನೀಡಿದ್ದಾರೆ. ಕೊರೊನಾ ಸೋಂಕು, ಲಾಕ್ ಡೌನ್ ಮುಂತಾದ ಒಂದು ವರ್ಷದ ನೋವಿನಿಂದ ಹೊರ ಬಂದು ಬದುಕಿಗೆ ನೆಲೆಕಂಡುಕೊಳ್ಳಲು ಪ್ರಯತ್ನ ನಡೆಸಿದ್ದ ಫುಟ್ ಪಾತ್ ನ ಬಡ ವ್ಯಾಪಾರಿಗಳನ್ನು ಎತ್ತಂಗಡಿ ಮಾಡಿರುವುದು ತಾಲ್ಲೂಕು ಆಡಳಿತದ ರಾಕ್ಷಸಿ ಪ್ರವೃತ್ತಿ ಆಗಿದೆ. ಬಡವರ ಗೋಳಿಗೆ ಸ್ಪಂದಿಸದ ಬಿಜೆಪಿ ಸರ್ಕಾರ ಅವರನ್ನು ಅಮಾನವೀಯವಾಗಿ ನಡೆಸಿಕೊಳ್ಳುತ್ತಿದೆ ಎಂದು ಪಾಟೀಲ ಕಿಡಿಕಾರಿದ್ದಾರೆ. ಎಂ.ಜಿ. ರಸ್ತೆಯಲ್ಲಿನ ಮಳಿಗೆಗಳ ಹರಾಜು ಪ್ರಕ್ರಿಯೆ ಮುಗಿಯುವವರೆಗೆ ಈ ಬಡವರಿಗೆ ವ್ಯಾಪಾರ ಮಾಡಿಕೊಳ್ಳಲು ಅವಕಾಶ ಮಾಡಿಕೊಡಬೇಕು. ಈ ಜನರ ಗೋಳು ತಪ್ಪಿಸುವಲ್ಲಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು ತಕ್ಷಣ ಆಗಮಿಸಿ ಬಡವರಿಗೆ ನ್ಯಾಯ ನೀಡದಿದ್ದರೆ ಹೋರಾಟಕ್ಕಿಳಿಯಲಾಗುವುದು ಎಂದು ರವಿ ಪಾಟೀಲ ತಿಳಿಸಿದ್ದಾರೆ.

# ದೊಡ್ಡಬಾತಿಯಲ್ಲಿ ಇಂದು, ನಾಳೆ ಕಾರ್ತಿಕೋತ್ಸವ

ದಾವಣಗೆರೆ ತಾಲ್ಲೂಕು ದೊಡ್ಡಬಾತಿಯಲ್ಲಿ ಇಂದು ರಾತ್ರಿ ಶ್ರೀ ಬೀರಲಿಂಗೇಶ್ವರ ಸ್ವಾಮಿಯ ಕಾರ್ತಿಕೋತ್ಸವ ನಡೆಯಲಿದೆ. ನಾಳೆ ಸೋಮವಾರ ರಾತ್ರಿ ಶ್ರೀ ರೇವಣಸಿದ್ದೇಶ್ವರ ಸ್ವಾಮಿಯ ಕಾರ್ತಿಕೋತ್ಸವ ನಡೆಯಲಿದೆ.

# ಮಲ್ಲನಾಯಕನಹಳ್ಳಿಯಲ್ಲಿಂದು ಕಂದಮೂಲ ಉತ್ಸವ

ಮಲೇಬೆನ್ನೂರು ಸಮೀಪದ ಮಲ್ಲನಾಯಕನಹಳ್ಳಿಯ ರಾಘವ್ ಅವರ ತೋಟದಲ್ಲಿ ಇಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ 'ಕಂದಮೂಲ ಉತ್ಸವ' ನಡೆಯಲಿದೆ. ಸಹಜ ಕೃಷಿಯ ಉತ್ಪನ್ನಗಳಾದ ಭತ್ತ, ಕೋಕೋ, ಗೆಡ್ಡೆ ಗೆಣಸು, ಸಾಂಬಾರು ಪದಾರ್ಥಗಳ ಪ್ರದರ್ಶನ ಮತ್ತು ಮಾರಾಟ, ಉಳುಮೆ ಮಾಡದೇ ಬೆಳೆದಿರುವ ತೆಂಗು ಹಾಗೂ ಸಮಗ್ರ ತೋಟಗಾರಿಕೆ ಬೆಳೆಗಳ ತೋಟ ವೀಕ್ಷಣೆಗೂ ಅವಕಾಶವಿದೆ.

# ನಗರದಲ್ಲಿ ಇಂದು ಗೌಡ ಸಾರಸ್ವತ ಸಮಾಜದ ಸಭೆ

ಗೌಡ ಸಾರಸ್ವತ ಸಮಾಜದ ಸರ್ವ ಸದಸ್ಯರ ಮಹಾಸಭೆಯು ಇಂದು ಸಂಜೆ 6 ಗಂಟೆಗೆ ಸುಕೃತೀಂದ್ರ ಕಲಾ ಮಂದಿರದಲ್ಲಿ ನಡೆಯಲಿದೆ ಎಂದು ಕಾರ್ಯದರ್ಶಿ ಕೆ. ವೆಂಕಟರಮಣ ಭಟ್ ತಿಳಿಸಿದ್ದಾರೆ.


## ಹುಟ್ಟುಹಬ್ಬದ ಶುಭಾಶಯಗಳು



**ಚಿ|| ಮನೀಷ್ ಅಣ್ಣಿಗೇರಿ**

ಇಂದು ತನ್ನ ದ್ವಿತೀಯ ವರ್ಷದ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿದ್ದು, ಅವನಿಗೆ ನಮ್ಮೆಲ್ಲರ ಶುಭಾಶಯಗಳು.

- ✦ ತಂದೆ: ನಾಗರಾಜ್
- ✦ ತಾಯಿ: ಶ್ವೇತಾ
- ✦ ಅಜ್ಜ: ಬಕ್ಕೇಶ್ ನಾಗನೂರು
- ✦ ಅಜ್ಜಿಯಂದಿರು: ಸರೋಜ, ಶಾಂತಮ್ಮ
- ✦ ದೊಡ್ಡಪ್ಪಂದಿರು: ರುದ್ರೇಶ್ ಮತ್ತು ಸುರೇಶ್
- ✦ ದೊಡ್ಡಮ್ಮಂದಿರು: ಸುಧಾ ಹಾಗೂ ಕವಿತಾ
- ✦ ಮಾವ : ವಿನಾಯಕ
- ✦ ಅಕ್ಕಂದಿರು : ಅಮೃತ ಮತ್ತು ಅನನ್ಯ
- ✦ ಅಣ್ಣಂದಿರು : ಅಭಿಷೇಕ, ಅಭಯ್, ತೇಜಸ್ ಹಾಗೂ ಬಂಧು-ಮಿತ್ರರು.

## ಸಾರ್ವಜನಿಕ ಪ್ರಕಟಣೆಗಾಗಿ

ಈ ಕೆಳಕಂಡ ಪ್ರಕಟಣೆದಾರರು ಈ ಮುಖೇನ ಸಾರ್ವಜನಿಕ ಪ್ರಕಟಣೆ ನೀಡುವುದೇನೆಂದರೆ:-

ನಾನು ದಿ.22.10.2020ರಂದು ದಾವಣಗೆರೆಯ ವಿದ್ಯಾನಗರ ಕೊನೆ ಬಸ್ ನಿಲ್ದಾಣದ ಕಡೆಗೆ ಆಟೋದಲ್ಲಿ ಹೋಗುತ್ತಿರುವಾಗ ಮೂಲ ಕ್ರಯಪತ್ರ ಸಂಖ್ಯೆ.6254 ದಿ.3.1.1985 ಹಾಗೂ ಅದರೊಂದಿಗೆ ಇತರೆ ರೆವಿನ್ಯೂ ದಾಖಲೆಗಳು ಇರುವ ಕವರ್ ವಿದ್ಯಾನಗರ 2ನೇ ಬಸ್ ನಿಲ್ದಾಣದ ಬಳಿ ಕೈ ಜಾರಿ ಕೆಳಗೆ ಬಿದ್ದಿತು.

ಸ್ವಲ್ಪ ಮುಂದೆ ಹೋದಾಗ ಆ ಕವರ್ ಬಿದ್ದಿರುವುದು ಗೊತ್ತಾಗಿ ನಾನು ಬಂದ ಮಾರ್ಗದಲ್ಲಿಯೇ ಕೂಡಲೇ ಹಿಂದಿರುಗುವಷ್ಟರಲ್ಲಿ ಸದರಿ ಕವರ್ ಸಿಕ್ಕಿತು, ಆದರೆ ಆ ಕವರ್‌ನಲ್ಲಿದ್ದ ಮೂಲ ಕ್ರಯಪತ್ರ ಸಂಖ್ಯೆ.6254 ದಿ.3.1.1985 ದಾಖಲೆ ಕಳೆದಿರುತ್ತದೆ. ಆದರೆ ಅದರೊಂದಿಗೆ ಇತರೆ ರೆವಿನ್ಯೂ ದಾಖಲೆಗಳು ಹಾಗೆಯೇ ಇದ್ದವು. ಆದ ಕಾರಣ ಸದರಿ ಮೂಲ ಕ್ರಯಪತ್ರ ಸಂಖ್ಯೆ.6254 ದಿ.3.1.1985 ದಾಖಲೆ ಯಾರಿಗಾದರೂ ದೊರೆತಲ್ಲಿ ಕೂಡಲೇ ಈ ಕೆಳಕಂಡ ಪ್ರಕಟಣೆದಾರರ ವಿಳಾಸಕ್ಕೆ ಸಂಪರ್ಕಿಸಬೇಕೆಂದು ಸದರಿ ಪ್ರಕಟಣೆದಾರರು ತಮ್ಮ ಮೇಲೆ ಯಾವುದೇ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲು ಮಾಡಿಲ್ಲ ಹಾಗೂ ತಮ್ಮ ಮೇಲೆ ಪ್ರಕಟಣೆದಾರರು ಯಾವುದೇ ರೀತಿಯ ಕಾನೂನಿನ ಕ್ರಮ ಕೈಗೊಳ್ಳುವುದಿಲ್ಲವೆಂದು ತಿಳಿಸಲಾಗಿದೆ.

**ವಿ.ಸೂ :** ಸದರಿ ಮೇಲ್ಕಾಣಿಸಿದ ಮೂಲ ಕ್ರಯಪತ್ರ ಸಂಖ್ಯೆ.6254 ದಿ.3.1.1985 ದಾಖಲೆ ಯಾರಾದರೂ ನೀಡಿದಲ್ಲಿ ಅವರಿಗೆ ಸೂಕ್ತ ಬಹುಮಾನ ನೀಡಲಾಗುತ್ತದೆ.

ಪ್ರಕಟಣೆದಾರ
**ಪುಟ್ಟಾನಾಯ್ಕ ಎ. ಬಿನ್ ಲೇಟ್ ಭೋಜಾನಾಯ್ಕ**
ಮನೆ ನಂ.1780/6-32, ಗಂಗಾಶ್ರೀ ನಿಲಯ, 1ನೇ ಮೇನ್, 6ನೇ ಕ್ರಾಸ್,
ವಿನಾಯಕ ಬಡಾವಣೆ, ವಿದ್ಯಾನಗರ, ದಾವಣಗೆರೆ-577005.
ಮೊಬೈಲ್ ಸಂಖ್ಯೆ : 9902220936 & 9008354153.

## 2ನೇ ಹಂತಕ್ಕೆ ಇಂದು ಮತದಾನ

**(1ನೇ ಪುಟದಿಂದ)** ಒಲೈಯಿಸಿಕೊಳ್ಳಲು ಹರಸಾಹಸ ನಡೆಸಿದ್ದಾರೆ.

ನಾಳೆ ಬೆಳಿಗ್ಗೆ 7 ಗಂಟೆಯಿಂದ ಸಂಜೆ 5 ಗಂಟೆಯವರೆಗೂ ಚುನಾವಣೆ ನಡೆಯುತ್ತಿದ್ದು, ಇದಕ್ಕೆ ಅಗತ್ಯವಾಗಿರುವ ಸಿಬ್ಬಂದಿ ನೇಮಕಗೊಂಡಿದ್ದಾರೆ. ಯಾವುದೇ ಅಹಿತಕರ ಘಟನೆಯಾಗದಂತೆ ನೋಡಿಕೊಳ್ಳಲು ಪೊಲೀಸ್ ಇಲಾಖೆ ಸನ್ನದ್ಧವಾಗಿದೆ.

ಮೊದಲ ಹಂತದ ಮತದಾನ ಸಂದರ್ಭದಲ್ಲಿ ಕೆಲವು ಲೋಪದೋಷಗಳು ಉಂಟಾಗಿದ್ದವು. ಅವುಗಳು ಮತ್ತೆ ಮರುಕಳಿಸದಂತೆ ನೋಡಿಕೊಳ್ಳಲು ಆಯೋಗ ಮುಂಜಾಗ್ರತಾ ಕ್ರಮ ಕೈಗೊಂಡಿದೆ.

ಬೀದರ್ ಜಿಲ್ಲೆ ಹೊರತುಪಡಿಸಿ, ಉಳಿದ 29 ಜಿಲ್ಲೆಗಳಲ್ಲಿ ಮತ ಪತ್ರದ ಮೂಲಕ ಚುನಾವಣೆ ನಡೆಯುತ್ತಿದೆ. ಎರಡೂ ಹಂತಗಳಲ್ಲಿ ನಡೆದ ಕ್ಷೇತ್ರಗಳ ಮತ ಎಣಿಕೆ ಡಿಸೆಂಬರ್ 30 ರಂದು ಆಯಾ ತಾಲ್ಲೂಕು ಕೇಂದ್ರಗಳಲ್ಲಿ ನಡೆಯಲಿದೆ. ಪಂಚಾಯ್ತಿ ಚುನಾವಣೆ ಯಶಸ್ವಿಯಾಗಿ ಪೂರ್ಣಗೊಂಡ ನಂತರ ರಾಜ್ಯ ಚುನಾವಣಾ ಆಯೋಗ ಎರಡು ಮತ್ತು ಮೂರನೇ ಹಂತದ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳಿಗೆ 2021ರ ಮಾರ್ಚ್ ಇಲ್ಲವೇ ಏಪ್ರಿಲ್‌ನಲ್ಲಿ ಚುನಾವಣೆ ನಡೆಸಲು ಸಿದ್ದವಾಗಿದೆ.

## ಇಂದು ಪಂಚಾಯ್ತಿ ಮತದಾನ

**(1ನೇ ಪುಟದಿಂದ)** ನಿಯೋಜಿಸಲಾಗಿದೆ. ಮತದಾನದಲ್ಲಿ 102 ಚುನಾವಣಾಧಿಕಾರಿಗಳು, 106 ಸಹಾಯಕ ಚುನಾವಣಾಧಿಕಾರಿಗಳು ಹಾಗೂ 31 ಸೆಕ್ಟರ್ ಅಧಿಕಾರಿಗಳು ಕಾರ್ಯ ನಿರ್ವಹಿಸಲಿದ್ದಾರೆ.

632 ಮತಗಟ್ಟೆಗಳನ್ನು ಚುನಾವಣೆಗಾಗಿ ರೂಪಿಸಲಾಗಿದೆ. ಚನ್ನಗಿರಿಯ 368 ಮತಗಟ್ಟೆಗಳಲ್ಲಿ 45 ಸೂಕ್ಷ್ಮ, 47 ಅತಿ ಸೂಕ್ಷ್ಮ ಹಾಗೂ 276 ಸಾಮಾನ್ಯವಾಗಿವೆ. ಹರಿಹರದ 167 ಮತಗಟ್ಟೆಗಳಲ್ಲಿ 17 ಸೂಕ್ಷ್ಮ, 17 ಅತಿ ಸೂಕ್ಷ್ಮ ಹಾಗೂ 133 ಸಾಮಾನ್ಯವಾಗಿವೆ. ನ್ಯಾಮತಿಯ 97 ಮತಗಟ್ಟೆಗಳಲ್ಲಿ 11 ಸೂಕ್ಷ್ಮ, 15 ಅತಿ ಸೂಕ್ಷ್ಮ ಹಾಗೂ 71 ಸಾಮಾನ್ಯವಾಗಿವೆ. ಡಿ.30ರಂದು ಗ್ರಾಮ ಪಂಚಾಯ್ತಿ ಚುನಾವಣೆಯ ಮತಗಳ ಎಣಿಕೆ ನಡೆಯಲಿದೆ.

# ಕುರುಬ ಸಮಾಜಕ್ಕೆ ಎಸ್.ಟಿ. ಸ್ಥಾನ ಒತ್ತಾಯ




**(1ನೇ ಪುಟದಿಂದ)** ಅವರು ಸಾಕಷ್ಟು ನಿಂದನೆಯ ಪ್ರಕರಣಗಳನ್ನು ಎದುರಿಸುತ್ತಿದ್ದಾರೆ. ಸಂಕಷ್ಟದಲ್ಲಿದ್ದಾರೆ. ಎಷ್ಟೋ ಜನರು ಜಾತಿ ಅವರಿಗಾಗಿ ಎಸ್.ಟಿ. ಹೋರಾಟ ನಡೆಯುತ್ತಿದೆ ಎಂದ ರೇವಣ್ಣ, ಸ್ವಾತಂತ್ರ್ಯ ಪೂರ್ವದಲ್ಲೇ ಕುರುಬರನ್ನು ಎಸ್.ಟಿ. ಎಂದು ಗುರುತಿಸಲಾಗಿತ್ತು. ನಾವು ಹೊಸದಾಗಿ ಕೇಳುತ್ತಿಲ್ಲ, ನಮ್ಮ ಕೈ ತಪ್ಪಿರುವುದನ್ನೇ ಕೇಳುತ್ತಿದ್ದೇವೆ ಎಂದು ಸ್ಪಷ್ಟಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಮಾಜದ ಮುಖಂಡರುಗಳಾದ ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಜಿಲ್ಲಾ ಪಂಚಾಯ್ತಿ ಸದಸ್ಯ ಜೆ.ಸಿ. ಲಿಂಗಪ್ಪ, ಪಾಲಿಕೆ ಸದಸ್ಯೆ ಜಯಮ್ಮ, ಬಿ.ಎಂ. ಸತೀಶ್, ಕುಂದೂರು ವಿರೂಪಾಕ್ಷಪ್ಪ, ಬಳ್ಳಾರಿ ವೀರಮ್ಮ, ನೀಲಪ್ಪ, ಗುರುನಾಥ, ಜೀವೇಶ್ವರಿ, ಸೊಕ್ಕೆ ನಾಗರಾಜ್, ಓಬಣ್ಣ, ಶಿವಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.

## ಮತಾಂತರಕ್ಕೆ 10 ವರ್ಷ ಜೈಲು

**(1ನೇ ಪುಟದಿಂದ)** ದಂಡ ಇರಲಿದೆ.

ಧಾರ್ಮಿಕ ವಿವರಗಳನ್ನು ಮುಚ್ಚಿಟ್ಟು ಇಲ್ಲವೇ ಸೋಗು ಹಾಕಿ ಮದುವೆಯಾದರೆ ಮೂರರಿಂದ ಹತ್ತು ವರ್ಷಗಳವರೆಗೆ ಜೈಲು ಹಾಗೂ 50 ಸಾವಿರ ರೂ.ಗಳವರೆಗೆ ದಂಡ ವಿಧಿಸಲಾಗುವುದು.

ಎರಡಕ್ಕೂ ಹೆಚ್ಚು ವ್ಯಕ್ತಿಗಳಿಗೆ ಸಾಮೂಹಿಕವಾಗಿ ಮತಾಂತರ ಮಾಡಿದ ಪ್ರಕರಣಗಳಲ್ಲಿ ಐದರಿಂದ ಹತ್ತು ವರ್ಷಗಳ ಜೈಲು ಹಾಗೂ ಒಂದು ಲಕ್ಷ ರೂ. ಗಳವರೆಗೆ ದಂಡ ವಿಧಿಸಲಾಗುವುದು.

ಈ ಕಾಯ್ದೆಯ ಅನ್ವಯ ಸಂತ್ರಸ್ತೆ ಮಹಿಳೆ ಜೀವನಾಂಶಕ್ಕೆ ಅರ್ಹತೆ ಪಡೆಯುತ್ತಾಳೆ. ಇಂತಹ ಮಹಿಳೆಗೆ ಜನಿಸಿದ ಮಕ್ಕಳು ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲನ್ನೂ ಪಡೆಯುತ್ತಾರೆ.

## ತುರ್ತು ಅನುಮತಿ ಸಾಧ್ಯತೆ

**(1ನೇ ಪುಟದಿಂದ)** ಡಿ.ಸಿ.ಜಿ.ಐ. ಈ ತಿಂಗಳ ಆರಂಭದಲ್ಲಿ ಅರ್ಜಿ ಸಲ್ಲಿಸಿದ್ದವು. ಸೆಂಟ್ರಲ್ ಡ್ರಗ್ಸ್ ಸ್ಟಾಂಡರ್ಡ್ ಕಂಟ್ರೋಲ್ ಆರ್ಗನೈಸೇಷನ್‌ನ ವಿಷಯ ಪರಿಣಿತರ ಸಮಿತಿಯು ಡಿಸೆಂಬರ್ 9ರಂದು ಭಾರತ್ ಬಯೋಟೆಕ್ ಹಾಗೂ ಸೆರಮ್ ಕಂಪನಿಗಳಿಂದ ಹೆಚ್ಚಿನ ಸುರಕ್ಷತೆ ಹಾಗೂ ದಕ್ಷತೆಯ ವಿವರ ಕೇಳಿತ್ತು. ಫಿಜರ್ ವಿವರ ಸಲ್ಲಿಸಲು ಇನ್ನಷ್ಟು ಹೆಚ್ಚಿನ ಸಮಯ ಬೇಕು ಎಂದು ಈಗಾಗಲೇ ಕೇಳಿದೆ.

ಫಿಜರ್ ಲಸಿಕೆಗೆ ಬ್ರಿಟನ್, ಅಮೆರಿಕ ಹಾಗೂ ಬಹರೇನ್‌ಗಳು ಈಗಾಗಲೇ ಒಪ್ಪಿಗೆ ನೀಡಿವೆ. ಸೆರಮ್ ಸಂಸ್ಥೆಯು ಅನುಮತಿಗೆ ಮೊದಲೇ 40 ದಶಲಕ್ಷ ಲಸಿಕೆ ಡೋಸ್‌ಗಳನ್ನು ಉತ್ಪಾದಿಸಿ ದಾಸ್ತಾನು ಮಾಡಿಕೊಟ್ಟುಕೊಂಡಿದೆ.

## ನಗರದಲ್ಲಿ ಇಂದು ನೃತ್ಯ ನಮನ

ವನಿತಾ ಸಮಾಜದ ಆಶ್ರಯದಲ್ಲಿ 'ಶೃತಿ ಮತ್ತು ಲಯ' ವೇದಿಕೆ ವತಿಯಿಂದ ನೃತ್ಯ ನಮನ ಕಾರ್ಯಕ್ರಮ ಇಂದು ಸಂಜೆ 6 ಕ್ಕೆ ಶ್ರೀ ಸತ್ಯಸಾಯಿ ರಂಗಮಂದಿರದಲ್ಲಿ ಏರ್ಪಡಿಸಲಾಗಿದೆ. ಮುಖ್ಯ ಅತಿಥಿಗಳಾಗಿ ಶ್ರೀಮತಿ ಹೇಮಾ ಶ್ರೀನಿವಾಸ ಆಗಮಿಸುವರು. ಅಧ್ಯಕ್ಷತೆಯನ್ನು ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ ವಹಿಸುವರು.

## ಹಿಮೋಫಿಲಿಯಾ ಸೊಸೈಟಿಯಲ್ಲಿ ವಿಕಲಚೇತನರ ದಿನಾಚರಣೆ

ದಾವಣಗೆರೆ, ಡಿ.26- ಕರ್ನಾಟಕ ಹಿಮೋಫಿಲಿಯಾ ಸೊಸೈಟಿಯಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ವಿಕಲಚೇತನರ ದಿನಾಚರಣೆ ಆಚರಿಸಲಾಯಿತು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಕರ್ನಾಟಕ ರಾಜ್ಯ ವಿಕಲಚೇತನರ ಆಯುಕ್ತ ವಿ.ಎಸ್. ಬಸವರಾಜು ಮಾತನಾಡಿ, ಹಿಮೋಫಿಲಿಯಾ ಬಾಧಿತರು ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದು, ಅವರು ಕೂಡ ವಿಕಲಚೇತನರ ಕಾಯ್ದೆಯಡಿಯಲ್ಲಿ ಸೌಲಭ್ಯ ಪಡೆಯಲು ಅರ್ಹರಾಗಿದ್ದಾರೆ. ಈ ದೆಸೆಯಲ್ಲಿ ಸರ್ಕಾರದ ಮಟ್ಟದಲ್ಲಿ ಹಲವಾರು ಯೋಜನೆಗಳಿದ್ದು, ಅವುಗಳ ಸದುಪಯೋಗ ಪಡೆದುಕೊಳ್ಳುವಂತೆ ಸಲಹೆ ನೀಡಿದರು.

ರಾಜ್ಯ ವಿಕಲಚೇತನರ ಸಹಾಯಕ ಆಯುಕ್ತ ಎಸ್. ಕೆ. ಪದ್ಮನಾಭ್ ಮಾತನಾಡಿ, ಅಂಗವಿಕಲರ ಹಕ್ಕುಗಳ ಕಾಯ್ದೆಯಡಿ ಪಡೆಯಬಹುದಾದ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು. ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಕಲ್ಯಾಣಾಧಿಕಾರಿ ಶಶಿಧರ್, ಇಲಾಖೆಯ ಸಮಾಲೋಚಕ ಜೈ. ದುರ್ಗೇಶ್ ಸವಲತ್ತುಗಳ ಮಾಹಿತಿ ನೀಡಿದರು.

ಸಂಸ್ಥೆ ಅಧ್ಯಕ್ಷ ಡಾ. ಸುರೇಶ್ ಹನಗವಾಡಿ ಹಿಮೋಫಿಲಿಯಾದಿಂದಾಗುವ ಅಂಗವಿಕಲತೆ ತಡೆಗಟ್ಟುವ ಮತ್ತು ಅಂಗವಿಕಲರ ಗುರುತಿನ ಚೀಟಿಯ ಪ್ರಮಾಣೀಕರಣ ಮಾರ್ಗಸೂಚಿ ಕುರಿತು ತಿಳಿಸಿದರು. ಹಿಮೋಫಿಲಿಯಾ ಮಗುವಿನ ತಾಯಿ ಮತ್ತು ಸಂಸ್ಥೆಯ ಕಾರ್ಯಕಾರಿಣಿ ಮಂಡಳಿ ಸದಸ್ಯೆ ಹೆಚ್.ಬಿ. ಸುನೀತ ಮಗುವಿನ ಆರೈಕೆ ಮಾಡುವ ಕುರಿತು ತಿಳಿಸಿಕೊಟ್ಟರು. ಶಿವಕುಮಾರ ಮೇತ್ರಿ ತಮ್ಮ ಅನುಭವ ಹಂಚಿಕೊಂಡರು.

ಜ್ಯೋತಿ ಆಡಿನ್ ಪ್ರಾರ್ಥಿಸಿದರು. ಸಂಸ್ಥೆಯ ಸಲಹಾ ಮಂಡಳಿ ಸದಸ್ಯ ಈಶ್ವರ್ ತಲವಾರ್ ವಂದಿಸಿದರು. ಮಹಿಳಾ ವಿಭಾಗದ ಅಧ್ಯಕ್ಷೆ, ಆಡಳಿತಾಧಿಕಾರಿ ಡಾ. ಮೀರಾ ಎಸ್. ಹನಗವಾಡಿ ನಿರೂಪಿಸಿದರು. ನವೀನ್ ಹವಳಿ ಫೇಸ್‌ಬುಕ್ ಮತ್ತು ಯೂಟ್ಯೂಬ್ ಮೂಲಕ ನೇರ ಪ್ರಸಾರ ಮಾಡಿ, ಸಂಪೂರ್ಣ ಕಾರ್ಯಕ್ರಮ ಆಯೋಜಿಸಿದ್ದರು.

## ಹೊರ ಬಿದ್ದ ಲೋಕತಾಂತ್ರಿಕ ಪಾರ್ಟಿ

**(1ನೇ ಪುಟದಿಂದ)** ರಾಜಸ್ಥಾನದಲ್ಲಿ ಪಕ್ಷ ಮೂವರು ಶಾಸಕರನ್ನು ಹೊಂದಿದೆ. ಬಿಜೆಪಿ ಲೋಕಸಭೆಯಲ್ಲಿ 302 ಸಂಸದರನ್ನು ಹೊಂದಿದ್ದು ಸ್ವಂತ ಬಹುಮತದಲ್ಲಿದೆ. ಹೀಗಾಗಿ ಆರ್‌ಎಲ್‌ಪಿ ನಿರ್ಗಮನದಿಂದ ಸರ್ಕಾರದ ಮೇಲೆ ಯಾವುದೇ ಪರಿಣಾಮವಾಗುವುದಿಲ್ಲ.


**ಸೈಟು ಮಾರಾಟಕ್ಕೆ**
ಶಾಮನೂರು ವಾಜಪೇಯಿ ಲೇಔಟ್‌ನಲ್ಲಿ 30x40 ಪಶ್ಚಿಮ, 30x40 ಪಶ್ಚಿಮ
ಕಿರಣ್ ಬೂಸ್ನೂರ್ (ಏಜೆಂಟ್)
98440-63409, 97315-63409

**ಮನೆ ಮಾರಾಟಕ್ಕಿದೆ**
ಕುವೆಂಪು ಬಡಾವಣೆಯಲ್ಲಿ 40x60 North, 3 ಬೆಡ್‌ರೂಂ ಮನೆ ಇಂಡಿಪೆಂಡೆಂಟ್ ಹೌಸ್.
ರಿಯಲ್ ಎಸ್ಟೇಟ್ ಏಜೆಂಟ್ ಐನಳ್ಳಿ ಚನ್ನಬಸಪ್ಪ
99166 12110

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆಯಲ್ಲಿ ಕೆಲಸ ಮಾಡಲು ಸೆಕ್ಯುರಿಟಿ ಸೂಪರ್‌ವೈಸರ್ ಮತ್ತು ಸೆಕ್ಯುರಿಟಿ ಗಾರ್ಡ್ಸ್ ಬೇಕಾಗಿದ್ದಾರೆ. ವಿದ್ಯಾರ್ಹತೆ : ಎಸ್ಸೆಸ್ಸೆಲ್ಸಿ ಪಾಸ್, ESI, PF ವೇತನ : 7,500 ರಿಂದ 10,000 ರೂ. ಕೊಡಲಾಗುವುದು. ಅನುಭವವಿರುವವರಿಗೆ ಆದ್ಯತೆ.
98440 53261, 99867 21420

**ಶ್ರೇಯಸ್ ಉದರ, ಲಿವರ್, ಕರುಳು ರೋಗಗಳ ಚಿಕಿತ್ಸಾ ಕೇಂದ್ರ**
ಡಾ. ಇ.ಆರ್. ಸಿದ್ದೇಶಿ
M.D. (MED), D.M. (Gastro), F.A.C.G. (USA), P.G.C.C. Diab. Care (Aust)
ಉದರ, ಲಿವರ್, ಕರಳು, ಪ್ಯಾನ್‌ಕ್ರಿಯಾಸ್, ಎಂಡೋಸ್ಕೋಪಿ, ಸಕ್ಕರೆ ಕಾಯಿಲೆ ತಜ್ಞರು
8th Main, 8th Cross, P.J. Extension, Davangere.
08192-237325, 94837 23166

**ಸೈಟು ಮಾರಾಟಕ್ಕೆ (ಪೂರ್ವ)**
ಈ ಸೈಟು ಕೇವಲ (ಅರ್ಧ ಪರ್ಸೆಂಟ್) 1/2% ಕಮಿಷನ್‌ಗೆ ಕೊಡಿಸುತ್ತೇವೆ.
ಕರ್ನಾಟಕ ಗೃಹ ಮಂಡಳಿಯಲ್ಲಿ 60x80, 1ನೇ ಹಂತ, ಡಬಲ್ ರೋಡ್‌ಗೆ (ಕಮರ್ಷಿಯಲ್ ಆಗುವಂತಹ)
ಕಿರಣ್ ಬೂಸ್ನೂರ್ (ಏಜೆಂಟ್)
97315 63409, 98440 63409
(ಕಾಂಪ್ಲೆಕ್ಸ್, Show Room, ಮಾಲ್ (mall) ಮಾಡಲು ಸೂಕ್ತವಿದೆ)
(30x40, 30x50, 40x60, 50x80 ಸಹ ಮಾರಾಟಕ್ಕಿವೆ)

**ಬಾಡಿಗೆಗೆ**
ಪಿ.ಜೆ. ಬಡಾವಣೆ, 8ನೇ ಮೇನ್, 8ನೇ ಕ್ರಾಸ್, ಡಾ|| ಸಿದ್ದೇಶ್ ಬಿಲ್ಡಿಂಗ್‌ನಲ್ಲಿ ಡಾಕ್ಟರರ್ ಕನ್ಸಲ್ಟಿಂಗ್ ರೂಂಗಳು ಬಾಡಿಗಿವೆ.
ಆಸಕ್ತರು ವಿಚಾರಿಸಿ:
94480 28103

**40x60 ಸೈಟ್‌ಗಳು ಮಾರಾಟಕ್ಕಿವೆ**
40x60 North, ವಿವೇಕಾನಂದ ಬಡಾವಣೆಯಲ್ಲಿ, 40x60 East, ವಿನಾಯಕ ಬಡಾವಣೆಯಲ್ಲಿ 40x60 East ಜೆ.ಹೆಚ್ ಪಟೇಲ್ ಬಡಾವಣೆಯಲ್ಲಿ
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟುಗಳು/ಮನೆಗಳು ಮಾರಾಟಕ್ಕಿವೆ**
ಶಿವಪಾರ್ವತಿ ಬಡಾವಣೆ 30×40 ಪಶ್ಚಿಮ ಕುವೆಂಪು ಬಡಾವಣೆ ಮನೆಗಳು 20×48 ಪೂರ್ವ, ಆರ್.ಟಿ.ಓ. ರಿಂಗ್ ರೋಡ್ ಸರ್ಕಲ್ ಹತ್ತಿರ 40×60 ಮನೆ, ಪೂರ್ವ ದಿಕ್ಕು, ನಿಜಲಿಂಗಪ್ಪ ಬಡಾವಣೆ ಪಶ್ಚಿಮ-ಪೂರ್ವ ದಿಕ್ಕಿನ ಮನೆಗಳು/ಸೈಟುಗಳು, ಕುವೆಂಪು ಬಡಾವಣೆ ಉತ್ತರ 40×60, ಪಶ್ಚಿಮ, ಸಿದ್ದವೀರಪ್ಪ ಬಡಾವಣೆ ಪಶ್ಚಿಮ, 30×50 ಪೂರ್ವ, ವಿನೋಬನಗರ, ರಿಂಗ್ ರೋಡ್ ಹತ್ತಿರ, 30×40 ಉತ್ತರ.
ಕೊಡುವುದಕ್ಕೂ, ತೆಗೆದುಕೊಳ್ಳುವುದಕ್ಕೂ ಸಂಪರ್ಕಿಸಿ
ಸುರೇಶ್, 95911 60520
ಐಗೂರು ವಿಜಯ್‌ಕುಮಾರ್, 99457 02495

**ಸೈಟ್‌ಗಳು ಮಾರಾಟಕ್ಕಿವೆ**
ಜೆ.ಹೆಚ್ ಪಟೇಲ್ ಬಡಾವಣೆಯಲ್ಲಿ 20x30 ದಕ್ಷಿಣ, ವಿನಾಯಕ ಬಡಾವಣೆಯಲ್ಲಿ 30x40 ಪಶ್ಚಿಮ
ಶಾಮನೂರು ಧನ್ಯಕುಮಾರ್
97415 62589
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟ್‌ಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆಯಲ್ಲಿ ಪಾರ್ಕ್ ಎದುರು 40x65 ಪೂರ್ವ, ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 40 ಅಡಿ ರಸ್ತೆಗೆ 30x52 ಪೂರ್ವ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಕಾರು ಮಾರಾಟಕ್ಕಿದೆ**
2003ನೇ ಮಾಡೆಲ್, ಉತ್ತಮ ಸ್ಥಿತಿಯಲ್ಲಿರುವ ಎಲ್ಲಾ ದಾಖಲೆಗಳು ಚಾಲ್ತಿಯಲ್ಲಿರುವ Zen Maruthi Suzuki White ಕಾರು ಮಾರಾಟಕ್ಕಿದೆ.
ಮೊ. 98444-84072

**ಬೇಕಾಗಿದ್ದಾರೆ**
ಪಿಯುಸಿ ಆಗಿರುವ ಹುಡುಗರು ಕೌಂಟರ್ ಸೇಲ್ಸ್‌ಮನ್ ಹುದ್ದೆಗೆ ಬೇಕಾಗಿದ್ದಾರೆ. ಆಸಕ್ತರು ಬಯೋಡಾಟಾ ಹಾಗೂ ಪರಿಚಯಸ್ಥರೊಂದಿಗೆ ಸಂಪರ್ಕಿಸಿ :
ಆರ್ಚೀಸ್ ಗ್ಯಾಲರಿ
ಶರಾವತಿ ಲೇಡೀಸ್ ಹಾಸ್ಟೆಲ್ ಎದುರು, ಮಾಮಾಸ್ ಜಾಯಿಂಟ್ ರಸ್ತೆ, ದಾವಣಗೆರೆ.
ಮೊ : 96324-33166
ಆಕರ್ಷಕ ವೇತನ ನೀಡಲಾಗುವುದು.

**ಬಾಡಿಗೆಗೆ**
ಬಂಬೂಬಜಾರ್ ಹಿಂಭಾಗ, ಬಸಾಪುರ ರಸ್ತೆಯಲ್ಲಿ 20x30 ಮತ್ತು 145x40 ಅಳತೆಯ ಗೋಡೌನ್‌ಗಳು ಬಾಡಿಗೆಗಿವೆ.
ವಿಚಾರಿಸಿ:
94480 28103

**ಮನೆ ಬಾಡಿಗೆಗೆ / ಭೋಗ್ಯಕ್ಕಿದೆ**
ಗ್ರೌಂಡ್ ಫ್ಲೋರ್ ನಲ್ಲಿ 3 BHK, ಹಾಗೂ ಎರಡನೇ ಮಹಡಿಯಲ್ಲಿ 1 BHK ಉತ್ತರ ದಿಕ್ಕಿನ ಮುಂಬಾಗಿಲುವುಳ್ಳ ಮನೆ ಬಾಡಿಗೆಗಿದೆ ಹಾಗೂ ಕಾರ್ ಪಾರ್ಕಿಂಗ್, ಬೋರ್-ಕಾರ್ಪೊರೇಷನ್ ನೀರಿನ ಸೌಲಭ್ಯವಿರುವ ಮನೆಗಳು, ನಂ. 651, ಶ್ರೀ ಕಟೀಲು, 6ನೇ ಕ್ರಾಸ್, ಶ್ರೀನಿವಾಸ ನಗರ, ಹದಡಿ ರಸ್ತೆ, ದಾವಣಗೆರೆ.
70194 27951, 93410 14488

**ಮನೆ ಬಾಡಿಗೆಗೆ**
ದಾವಣಗೆರೆ ಪಿ.ಜೆ. ಬಡಾವಣೆ, 7ನೇ ಮೇನ್, ಡೆಲ್ ಶೋ ರೂಂ ಹತ್ತಿರ ಆಫೀಸ್, ಬ್ಯಾಂಕ್, ವಾಣಿಜ್ಯ ಉಪಯೋಗಕ್ಕೆ ಅನುಕೂಲವಾದ 4 ಬೆಡ್ ರೂಂ, 2 ಅಟ್ಯಾಚ್ಡ್ ಬಾತ್ ರೂಂ, ಕಾರ್ ಪಾರ್ಕಿಂಗ್ ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ ಮತ್ತು ಎಸ್. ಎಸ್. ಲೇಔಟ್, ಅಥಣಿ ಕಾಲೇಜ್ ರೋಡ್‌ನಲ್ಲಿ 1 ಮಳಿಗೆ ಬಾಡಿಗೆಗೆ ಇದೆ. ಸಂಪರ್ಕಿಸಿ
ಡಾ|| ನಾರಾಯಣ್, 86187 25056

**ಬೇಕಾಗಿದ್ದಾರೆ**
ಬಾರ್‌ನಲ್ಲಿ ಸಪ್ಲೈಯರ್ ಕೆಲಸಕ್ಕೆ ಬೇಕಾಗಿದ್ದಾರೆ.
94483 38709

**3 ಬೆಡ್ ರೂಂ ಮನೆ ಬಾಡಿಗೆಗೆ ಇದೆ**
ದಾವಣಗೆರೆ ವಿದ್ಯಾನಗರ 2ನೇ ಬಸ್‌ಸ್ಟಾಪ್ ಹತ್ತಿರ, 2A ಮೇನ್, 8ನೇ ಕ್ರಾಸ್ ತರಳಬಾಳು ಬಡಾವಣೆಯಲ್ಲಿ ಮೊದಲನೇ ಮಹಡಿಯಲ್ಲಿ ಉತ್ತರಾಭಿಮುಖದ 3 ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಬೋರ್, ಕಾರ್ಪೊರೇಷನ್ ನೀರು ಹಾಗೂ ಕಾರ್ ಪಾರ್ಕಿಂಗ್ ಸೌಲಭ್ಯವಿದೆ. ಆಸಕ್ತರು ಸಂಪರ್ಕಿಸಿ:
99026 88442

**ಸೈಟುಗಳು ಮಾರಾಟಕ್ಕಿವೆ**
ಬಸವೇಶ್ವರ ಲೇಔಟ್‌ನಲ್ಲಿ 40x60, ಶಿವಪಾರ್ವತಿ ಬಡಾವಣೆಯಲ್ಲಿ 30X50, 40X40, 40X60, ಆವರಗೆರೆ ಉತ್ತಮಚಂದ್ ಬಡಾವಣೆಯಲ್ಲಿ 30X60 ಎಸ್.ಎಸ್.ಎಂ. ಎನ್‌ಕ್ಲೈವ್‌ನಲ್ಲಿ 40x30, 30X50 ಅಳತೆಯ ಸೈಟುಗಳು ಮಾರಾಟಕ್ಕಿವೆ.
99866 17483, 78996 81386

**ಬೇಕಾಗಿದ್ದಾರೆ**
ಪಿಯುಸಿ (ಕಾಮರ್ಸ್) ವರೆಗೆ ಓದಿರುವ ಮಹಿಳಾ ಅಭ್ಯರ್ಥಿ ಅಕೌಂಟ್ಸ್ ಹಾಗೂ ಟ್ಯಾಲಿ ಗೊತ್ತಿರುವವರು ಬೇಕಾಗಿದ್ದಾರೆ.
ಆನಂದ ಹಾರ್ಡ್‌ವೇರ್ಸ್ & ಪೇಂಟ್ಸ್
ಮಂಡಿಪೇಟೆ, ದಾವಣಗೆರೆ.

**ಇಂಡಿಕಾ ಕಾರು ಮಾರಾಟಕ್ಕಿದೆ**
2014 ಮಾಡೆಲ್, ಉತ್ತಮ ಸ್ಥಿತಿಯಲ್ಲಿರುವ ಇಂಡಿಕಾ ಕಾರು (Yellow Board) ಮಾರಾಟಕ್ಕಿದೆ.
ದಯವಿಟ್ಟು ಸಂಪರ್ಕಿಸಿ :
88670 80867

**ಮನೆ ಲೀಜ್‌ಗೆ ಇದೆ**
ದಾವಣಗೆರೆ ದೇವರಾಜ್ ಅರಸ್ ಬಡಾವಣೆ 'ಬಿ' ಬ್ಲಾಕ್, 12ನೇ ಕ್ರಾಸ್‌ನಲ್ಲಿ (#380/3) ಮೊದಲನೇ ಮಹಡಿಯಲ್ಲಿರುವ 2 ಬೆಡ್ ರೂಂ, 2 ಹಾಲ್ ಇರುವ ಮನೆ ಲೀಜ್‌ಗೆ ಇದೆ (ಸಸ್ಯಹಾರಿಗಳಿಗೆ ಮಾತ್ರ)
99163 23302

**ಮನೆ ಮಾರಾಟಕ್ಕಿದೆ**
ಬಂಟ್ಸ್ ಸಮುದಾಯ ಭವನದ ಹತ್ತಿರ, ಕುಂದುವಾಡ ರಸ್ತೆಯಲ್ಲಿ 30 x 40 ಅಳತೆಯ ಮನೆ ಮಾರಾಟಕ್ಕಿದೆ.
ಮೊ. 78996 81386
99866 17483

**ಸೈಟುಗಳು/ಹೊಲ ಮಾರಾಟಕ್ಕೆ**
ಬನಶಂಕರಿ ಲೇಔಟ್, ಜಯನಗರ, ಶಿವ-ಪಾರ್ವತಿ ಬಡಾವಣೆ 30x30, 30x50, 50x75, 40x60, ಸೈಟ್‌ಗಳು, ಮನೆ ಮತ್ತು ಹೊಲ, ಬಂಗ್ಲೆ ಸೈಟುಗಳು, ಅಪಾರ್ಟ್‌ಮೆಂಟ್ ಸೈಟುಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.
ಅಭಿಷೇಕ್ ಅಳ್ಳೇರ್, ಏಜೆಂಟ್
ಮೊ.97315 12365

**ಮನೆ ಬಾಡಿಗೆಗೆ ಇದೆ**
ಶಾಮನೂರು ರಸ್ತೆಯ ಎಸ್. ಎಸ್. ಮಾಲ್ ಎದುರು ಮತ್ತು ಬಾಪೂಜಿ ಶಾಲೆ ಹಿಂಭಾಗದಲ್ಲಿ 2 ಬೆಡ್ ರೂಂ, ಕಾರ್ಪೊರೇಷನ್ ಮತ್ತು ಬೋರ್ ನೀರು, ಕಾರ್ ಪಾರ್ಕಿಂಗ್ ಸೌಲಭ್ಯ ಇರುವ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
94811-61164

**ಬೇಕಾಗಿದ್ದಾರೆ**
ಟೈರ್ ಶೋರೂಂನಲ್ಲಿ ಕೆಲಸ ಮಾಡಲು 10th ಪಾಸ್/ಫೇಲ್ ಆಗಿರುವವರು ಬೇಕಾಗಿದ್ದಾರೆ.
ನಂದಿ ಟೈರ್ ಪ್ಲಾನೆಟ್
95381 87385
08192 261003
99161 43003

**ಬೇಕಾಗಿದ್ದಾರೆ**
ಟೈಲರಿಂಗ್ - ಮಹಿಳೆಯರು
ಟೆಲಿಕಾಲರ್ - ಮಹಿಳೆಯರು
ಸೂಪರ್‌ವೈಸರ್ - ಮಹಿಳೆಯರು
ಸಹಾಯಕರು - ಮಹಿಳೆಯರು
ಶಶಿ ಗಾರ್ಮೆಂಟ್ಸ್
74830 88761

**ತಕ್ಷಣ ಬೇಕಾಗಿದ್ದಾರೆ**
ಕ್ಯಾಪ್ಟನ್, ವೇಟರ್ಸ್/ಸಪ್ಲೈಯರ್ಸ್, ಕಂಪ್ಯೂಟರ್ ಆಪರೇಟರ್, ಫ್ರಂಟ್ ಆಫೀಸ್ ರಿಸೆಪ್ಷನಿಸ್ಟ್. ಆಕರ್ಷಕ ಸಂಬಳ ನೀಡಲಾಗುವುದು.
93809 74740

**ಮನೆ ಬಾಡಿಗೆಗೆ ಇದೆ**
ಶಿವಕುಮಾರ ಸ್ವಾಮಿ, ಬಡಾವಣೆ, 1ನೇ ಹಂತ, 1ನೇ ಕ್ರಾಸ್, #1077/10 ರಲ್ಲಿ 3 ಬೆಡ್ ರೂಂ, ಕಾರ್ ಪಾರ್ಕಿಂಗ್ ಇರುವ 1ನೇ ಮಹಡಿ ಮನೆ ಬಾಡಿಗೆಗೆ ಇದೆ.
ಫೋ. : 97425 52737

**ಹೊಸ ಮನೆಗಳು ಬಾಡಿಗೆಗೆ ಇವೆ**
ದಾವಣಗೆರೆ S.S. ಲೇಔಟ್‌ನಲ್ಲಿ 2 BHK, ಸಿದ್ದವೀರಪ್ಪ ಲೇಔಟ್‌ನಲ್ಲಿ 2 BHK, ಶಿವಕುಮಾರಸ್ವಾಮಿ ಬಡಾವಣೆಯಲ್ಲಿ 2BHK, ಆಂಜನೇಯ ಬಡಾವಣೆಯಲ್ಲಿ, 3BHK ಮನೆಗಳು ಬಾಡಿಗೆಗೆ ಇವೆ.
78927 93994

**ಡ್ಯೂಪ್ಲೆಕ್ಸ್ ಮನೆ ಮಾರಾಟಕ್ಕಿದೆ**
6BHK ಮನೆ 60x44 ವಿಸ್ತೀರ್ಣ, ಕಾರ್ ಪಾರ್ಕಿಂಗ್ ವ್ಯವಸ್ಥೆಯುಳ್ಳ, ಡ್ಯೂಪ್ಲೆಕ್ಸ್ ಮನೆ #1935/7, 10ನೇ ಕ್ರಾಸ್, ಸಿದ್ದವೀರಪ್ಪ ಬಡಾವಣೆಯಲ್ಲಿ ಮಾರಾಟಕ್ಕಿದೆ.
99007 00091

**ಶ್ರೀ ಮೃತ್ಯುಂಜಯ ಸ್ಕೂಲ್ ಆಫ್ ನರ್ಸಿಂಗ್ & ಇನ್ಸ್ಟಿಟ್ಯೂಟ್ ಆಫ್ ಪ್ಯಾರಾಮೆಡಿಕಲ್ ಸೈನ್ಸಸ್**
ಪ್ರವೇಶ ಪ್ರಾರಂಭ :
ಜಿ.ಎನ್.ಎಂ. (GNM), ಲ್ಯಾಬ್ (LAB), ಹೆಲ್ತ್ (Health) ಓಟಿ (OT)
ಪಿ.ಜೆ. ಬಡಾವಣೆ, ದಾವಣಗೆರೆ.
97432 10028, 94488 73558

**ಮನೆ ಬಾಡಿಗೆಗೆ ಇದೆ**
ವಿವೇಕಾನಂದ ಬಡಾವಣೆಯ 4ನೇ ಕ್ರಾಸ್‌ನಲ್ಲಿ ಮೊದಲನೇ ಮಹಡಿಯಲ್ಲಿ ಡಬಲ್ ಬೆಡ್‌ರೂಂ ಮನೆ ಲೀಸ್ / ಬಾಡಿಗೆಗೆ ಇದೆ. ಸಂಪರ್ಕಿಸಿ:
99456 13469
72040 20706

**ಬೇಕಾಗಿದ್ದಾರೆ**
Service Advisor, Floor Supervisor, Technician, Helper ಫ್ರೆಷರ್ಸ್ ಮತ್ತು ಅನುಭವವುಳ್ಳ ಪುರುಷರು ಮಾತ್ರ ಬೇಕಾಗಿದ್ದಾರೆ. Salary + Incentive
ಶ್ರೀ ನಿವಾಸ ಹೋಂಡಾ
ಸಂಪರ್ಕಿಸಿ: 88844 45242

**ಬೇಕಾಗಿದ್ದಾರೆ**
ಹೆಸರಾಂತ ಸಲೂನ್‌ಗೆ 2 ವರ್ಷ ನುರಿತ ಅನುಭವ ಇರುವ ಬ್ಯೂಟಿಷಿಯನ್ ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ :
98860 46950,
99724 76950

**ಮನೆ ಮಾರಾಟಕ್ಕಿದೆ**
ಎಸ್.ಎಸ್. ಬಡಾವಣೆ 'ಬಿ' ಬ್ಲಾಕ್‌ನಲ್ಲಿ ಅಪಾರ್ಟ್‌ಮೆಂಟ್‌ನಲ್ಲಿ 2 ಬೆಡ್‌ರೂಂ ಮನೆ ಮಾರಾಟಕ್ಕಿದೆ.
78996 81386
99866 17483

**2BHK ಮನೆ ಬಾಡಿಗೆಗೆ ಇದೆ**
ವಿದ್ಯಾನಗರ 1ನೇ ಬಸ್ ಸ್ಟಾಪ್ ಸಮೀಪ, 3ನೇ ಕ್ರಾಸ್‌ನಲ್ಲಿ ಮೊದಲನೇ ಮಹಡಿಯಲ್ಲಿ ಅಟ್ಯಾಚ್ಡ್ ಬಾತ್ ರೂಂ, ಫರ್ನಿಚರ್ಸ್ ಸೌಲಭ್ಯವಿರುವ ಸುಸಜ್ಜಿತವಾದ 2 ಬೆಡ್ ರೂಂ ಮನೆ ಬಾಡಿಗೆಗೆ ಇದೆ. (ಸಸ್ಯಹಾರಿಗಳಿಗೆ ಮಾತ್ರ) ಆಸಕ್ತರು ಸಂಪರ್ಕಿಸಿ
99865 02306

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ವಿದ್ಯಾನಗರ 2ನೇ ಬಸ್ ಸ್ಟಾಪ್ ಹತ್ತಿರ 2 ಬೆಡ್ ರೂಂ, ಕಾರ್ಪೊರೇಷನ್ & ಬೋರ್‌ವೆಲ್ ನೀರಿನ ವ್ಯವಸ್ಥೆ ಇರುವ ಮನೆ ಬಾಡಿಗೆಗೆ ಇದೆ.
94483 19302

**ಡಾ|| ಸೋಮಶೇಖರ್. ಎಸ್.ಎ.**
Rheumatologist ಇವರು ದಿ. 31.12.2020ರ ಗುರುವಾರ ಮತ್ತು 01.01.2021ರ ಶುಕ್ರವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಮನೆ ಬಾಡಿಗೆಗೆ/ಲೀಸ್ ಗಿದೆ**
ಸರಸ್ವತಿ ಬಡಾವಣೆ, ಜಯನಗರ, ಶಿವಕುಮಾರಸ್ವಾಮಿ ಬಡಾವಣೆ, ಶಕ್ತಿ ನಗರ, ಆಂಜನೇಯ ಬಡಾವಣೆ, ಸಿದ್ದವೀರಪ್ಪ ಬಡಾವಣೆಯಲ್ಲಿ ಮನೆಗಳು ಬಾಡಿಗೆಗೆ/ಲೀಸ್ ಗೆ ಇವೆ. ಶಿವಕುಮಾರಸ್ವಾಮಿ ಬಡಾವಣೆಯಲ್ಲಿ ಮನೆಗಳು ಬಾಡಿಗೆಗಿವೆ.
99726-75759

**ಬಾಡಿಗೆಗೆ ಇದೆ**
8ನೇ ಮೇನ್, 8ನೇ ಕ್ರಾಸ್, ಪಿ.ಜೆ. ಬಡಾವಣೆಯಲ್ಲಿ ಆಫೀಸ್, ಕ್ಲಿನಿಕ್‌ಗೆ 22x26 ಅಳತೆಯ ರೂಂ ಫಸ್ಟ್ ಫ್ಲೋರ್‌ನಲ್ಲಿ (ಬೆಳಗಾವಿ ಆರ್ಕೇಡ್) ಬಾಡಿಗೆಗೆ ಇದೆ.
97399 50780
82177 21635

**ಮನೆ ಬಾಡಿಗೆಗೆ ಇದೆ**
ಸಿಂಗಲ್ ಬೆಡ್‌ರೂಂ ಮನೆ, 2nd Floor ಮನೆ ಮತ್ತು ವಾಸ್ತು ಪ್ರಕಾರ ಇರುವ ಮನೆ ಹಾಗೂ ನೀರಿನ ಸೌಕರ್ಯವಿರುವ ಮನೆ. ನಂ. 1700, 18ನೇ ಕ್ರಾಸ್, 3ನೇ ಮೇನ್, ಕೆಟಿಜೆ ನಗರ, ದಾವಣಗೆರೆ. ವಿಚಾರಿಸಿ :
96322 69657,
81051 24903

**2 ಮಳಿಗೆಗಳು ಬಾಡಿಗೆಗೆ ದೊರೆಯುತ್ತವೆ**
ಹದಡಿ ಮುಖ್ಯರಸ್ತೆಯಲ್ಲಿ Royal Enfield Showroom ಎದುರು
ಸಂಪರ್ಕಿಸಿ:
97397 15020
88841 40164

**ಮನೆ ಬಾಡಿಗೆಗೆ ಇದೆ**
ಮೊದಲನೇ ಮಹಡಿಯಲ್ಲಿ 2 ಬೆಡ್‌ರೂಂ, ಬೋರ್‌ವೆಲ್ ಹಾಗೂ ಕಾರ್ಪೊರೇಷನ್ ನೀರು ಇರುವ ಮನೆ 4ನೇ ಮೇನ್, 7ನೇ ಕ್ರಾಸ್ ವಿದ್ಯಾನಗರ ಪಾರ್ಕ್ ಪಕ್ಕ ಇರುವ ಮನೆ ಖಾಲಿ ಇದೆ.
95917 47333
97416 78794

**Excellent Coaching Center**
for X (SSLC) CBSE & STATE SYLLABUS Mathematics, Science, Social Science & English Grammar. New Branch- Near Thogateveera Kalyana Mantapa, Vinobhanagar. Main Branch -Vidyanagar
STUDY IQ ACADEMY, Davangere
89517 17444
96117 30170, 97402 15992

**WANTED FOR LODGE**
Receptionist - Graduates with experiance.
Salary- upto Rs. 15,000/-
Room Boys - upto Rs. 8000/-
98448 85860, 98440 65235

**New Batches Commenced**
VETA
Experts in Spoken English
93439 44659
98450 40493

**FOR SALE**
15 Computer (Led display)
Contact:
80951 15500

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ,**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**Share Market**
Free Demat A/c, Learing & Earning Trading & Technical, Fundamental Basic Knowledge, Free Training & Education
Way 2 Wealth Brokers Pvt Ltd.
Mr Sathish
87926 73966, 95382 28125

**ಮನೆ ಲೀಸ್‌ಗೆ ಇದೆ**
ಬಾಲಾಜಿ ನಗರ (ಎಸ್.ಎಸ್. ಲೇಔಟ್), 2nd ಸ್ಟೇಜ್, 2 ಬೆಡ್‌ರೂಂ ಗ್ರೌಂಡ್ ಫ್ಲೋರ್ ಹಾಗೂ ಮೊದಲನೆ ಮಹಡಿಯಲ್ಲಿ 2 ಮನೆಗಳು ಲೀಸ್‌ಗೆ ಇವೆ. ಬೋರ್‌ವೆಲ್/ಮುನ್ಸಿಪಲ್ ನೀರು, ಸೋಲಾರ್ ವ್ಯವಸ್ಥೆ ಇದೆ. ಸಂಪರ್ಕಿಸಿ:
80506 21189

**ಮಾರಾಟಕ್ಕೆ**
DCM ಮನೆ- 30×35, ವಿನೋಬನಗರ ಮನೆ- 15×30, MCC B' ಬ್ಲಾಕ್ ಹಳೆಯ ಮನೆ - 28×64, ಭೂಮಿಕ ಲೇಔಟ್ ಮನೆ-30×40, ಭಗೀರಥ ಸರ್ಕಲ್ ಮನೆ-30×40, ಸರಸ್ವತಿ ಬಡಾವಣೆ ಮನೆ- 20×35, SS ಲೇಔಟ್ ಮನೆ- 30×40(35 ಸಾವಿರ ಬಾಡಿಗೆ ಬರುವಂತಹ ಮನೆ)
78996 36597, 99165 25828

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಸಿಂಗಲ್ ಬೆಡ್ ರೂಂ ಮನೆ ಮತ್ತು ಮಳಿಗೆ ಬಾಡಿಗೆಗೆ ಇದೆ**
ಕೆ.ಆರ್. ರೋಡ್, ಬಿಟಿ ಲೇಔಟ್, ಎಲ್‌ಐಸಿ ಆಫೀಸ್ ಹಿಂಭಾಗ, ದಾವಣಗೆರೆ. (ಸಸ್ಯಹಾರಿಗಳಿಗೆ ಮಾತ್ರ)
78921 04349

**ಮನೆ ಮಾರಾಟಕ್ಕಿ ಇದೆ**
14x40 ಅಳತೆಯ ಮಹಡಿ ಮನೆ ಮಾರಾಟಕ್ಕೆ ಇದೆ
63663 27369

**ಇಂಡಸ್ಟ್ರೀಸ್‌ಗೆ ಬಾಡಿಗೆಗೆ ಇದೆ**
10000 ಚದರಡಿಯ ಗೋಡಾನ್, 30 HP ಪವರ್, ಸ್ಟಾಫ್ ಕ್ವಾಟರ್ಸ್ ಮತ್ತು ನೀರಿನ ಸೌಲಭ್ಯವಿದೆ.
ಸಂಪರ್ಕಿಸಿ:
98446 23424

**ಮನೆ ಮಾರಾಟಕ್ಕಿದೆ**
20x60 ಅಳತೆಯಲ್ಲಿ ಎಂಸಿಸಿ ಬಿ ಬ್ಲಾಕ್‌ನಲ್ಲಿ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ :
94496 84768
ಮಧ್ಯವರ್ತಿಗಳಿಗೆ ಅವಕಾಶವಿಲ್ಲ

**ಮನೆ ಬಾಡಿಗೆಗೆ ಇದೆ**
ಟಿ.ವಿ. ಸ್ಟೇಷನ್‌ಗೆ, ಸರ್.ಎಂ.ವಿ. ಕಾಲೇಜ್, ಶಶಿ ಸೋಪ್ ಫ್ಯಾಕ್ಟರಿಗೆ, ಹೈಟೆಕ್ ಆಸ್ಪತ್ರೆಗೆ ತುಂಬಾ ಹತ್ತಿರವಿರುವ ವಿಶಾಲವಾದ ಹಾಲ್, 2 ಬೆಡ್‌ರೂಂ, 2 ಬಾತ್‌ರೂಂ, ಸೋಲಾರ್, ಕಾರ್ ಪಾರ್ಕಿಂಗ್, ಸದಾ ನೀರಿನ ವ್ಯವಸ್ಥೆ, ವಾಸ್ತು ಪ್ರಕಾರವಿರುವ ಮನೆ ಕ್ಲೀನ್ ಆಗಿ ಮನೆ ಇಟ್ಟುಕೊಳ್ಳುವವರಿಗೆ, ಹಿಂದೂ ಜನಕ್ಕೆ, ಆರೋಗ್ಯವಂತರಿಗೆ ಮಾತ್ರ ವಿಚಾರಿಸಿ.
99865 38099, 99806 11110

**ಮಳಿಗೆಗಳು ಬಾಡಿಗೆಗೆ ಇವೆ**
ಹರಿಹರದಲ್ಲಿ ಬಸ್ ಸ್ಟ್ಯಾಂಡ್‌ನ ಹತ್ತಿರ ಭಾರತ್ ಆಯಿಲ್ ಮಿಲ್ ಕಾಂಪೌಂಡ್‌ನಲ್ಲಿ ಎಸ್.ಎಂ. ಲಾಡ್ಜ್ ಹತ್ತಿರ, ಮಳಿಗೆಗಳು (10x12 ಅಡಿ) ಬಾಡಿಗೆಗೆ ಇವೆ.
98444 33504

**ಮನೆ ಲೀಸ್‌ಗೆ ಇದೆ**
ದಾವಣಗೆರೆ ವಿನಾಯಕ ನಗರದ ಹತ್ತಿರದ ಶಾಂತಿನಗರ 3ನೇ ಕ್ರಾಸ್, ರಿಂಗ್ ರೋಡ್ ಮೇನ್, ಗ್ರೌಂಡ್ ಫ್ಲೋರ್‌ನಲ್ಲಿ 2BHK ಮನೆ ಲೀಸ್‌ಗೆ ಇದೆ.
98443 67580
70190 48775

**ನವೋದಯ ಕೋಚಿಂಗ್ ಕ್ಲಾಸಸ್**
5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವವರಿಗೆ ಕ್ಲಾಸಸ್ ಪ್ರಾರಂಭವಾಗಿವೆ.
ವಿಕಾಸ್ ಕರಿಯರ್ ಎಜುಕೇಷನ್ ದಾವಣಗೆರೆ.
97399 22225

**SITE FOR SALE**
40x60 South, Anjaneya layout, 11th cross, Site no - 64
B.Narasimha Rao
Contact no:
98451-51179

**2 BHK House for Rent**
East Face, Ground Floor 2581/5, 4th Main, North Sridhara Aquarium Cross M.C.C. 'A' Block, Davanagere-4
95356 59259
94489 24513

**ಬೇಕಾಗಿದ್ದಾರೆ**
ಲಿಂಗಾಯತರ ಮನೆಯಲ್ಲಿ ಸಸ್ಯಹಾರಿ ಅಡುಗೆ ಮಾಡಲು ಮಹಿಳೆ ಬೇಕಾಗಿದ್ದಾರೆ.
94483 38709

**ತಕ್ಷಣ ಬೇಕಾಗಿದ್ದಾರೆ**
ಸಪ್ಲೈಯರ್ಸ್, ಕ್ಲೀನಿಂಗ್, ಕುಕ್
ಸಂಪರ್ಕಿಸಿ:
93803 84168

**ಸೈಟುಗಳು ಮಾರಾಟಕ್ಕಿವೆ**
ಕಡೆಕೊಪ್ಪ ರೈಸ್ ಮಿಲ್ ಹಿಂಭಾಗದಲ್ಲಿ 30x40 ಮತ್ತು ಭೂಮಿಕಾ ನಗರದಲ್ಲಿ 30x70 ಅಳತೆಯ ಅಲಿನೇಷನ್ ಡೋರ್ ನಂಬರ್ ಹೊಂದಿರುವ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ :
ಮೊ. : 96636-66870

**ತಕ್ಷಣ ಬೇಕಾಗಿದ್ದಾರೆ**
ಶಿವಮೊಗ್ಗ (ಜಿ) ತೀರ್ಥಹಳ್ಳಿ ತಾಲ್ಲೂಕು ಸುತ್ತ-ಮುತ್ತ ಕೆಲಸ ಮಾಡಲು ಎಕ್ಸ್ ಸರ್ವೀಸ್ ಮ್ಯಾನ್ ಬೇಕಾಗಿದ್ದಾರೆ. 8 ತಾಸಿನ ಕೆಲಸ ESI, PF, ಮತ್ತು ವಸತಿ ಸೌಲಭ್ಯ 17 ರಿಂದ 18 ಸಾವಿರ ಸಂಬಳ. ಆಸಕ್ತರು ಸಂಪರ್ಕಿಸಿ:
86601 92877
96117 21068

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಕೆಲಸ ಮಾಡಲು ಪಾರ್ಟ್ ಟೈಮ್ ಭಟ್ಟರು ಬೇಕಾಗಿದ್ದಾರೆ. ಸಮಯ : ಬೆಳಗ್ಗೆ 8 ರಿಂದ 10, ಸಂಜೆ 6 ರಿಂದ 8. ಸ್ಥಳ : ಶಕ್ತಿನಗರ 1ನೇ ಕ್ರಾಸ್ ಜೀನಿಯಸ್ ಶಾಲೆ ಪಕ್ಕ. ಸಂಪರ್ಕಿಸಿ:
94835 32186

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**ROOM FOR RENT**
Room for rent in MCC B. Block, 8th main,
99721 02927

**WANTED**
Female Trainer for Reputed Spoken English centre
Contact with Resume
97313 57714
98450 40493

**WANTED LADY TEACHERS**
B.Sc., B.Ed (PCM) - 01
B.Sc. B.Ed (CBZ) - 01
BA., BEd.,- 02
Clerk B.Com with Computer Knowledge. Aya-01
Immediately Contact to
Dr. Veeresh Biradar, Secretary
Vinayaka Convent, Ganesh Pet, Davangere. Ph. : 95356 10817

**Simple vaastu**
ಸಿಂಪಲ್ ವಾಸ್ತು
98444 88838

**Mayur Consultancy Services**
- Constructions
- Building Plans
- Approval Drawings
- Estimates
- 3D Elevations
- Simple Vaastu
Er. Mayur H N
B.E. (Civil), MBA, M.Tech, MIE
98444 88838

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ
S.S.L.C, PUC, Technical & Non Technical Courses, Pharmacy & BHMS (Goverment & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ರಾಂ ಅಂಡ್ ಕೋ ಸರ್ಕಲ್, ಸೋಮ ಮೆಡಿಕಲ್ಸ್ ಮೇಲೆ ಗಣೇಶ ದೇವಸ್ಥಾನದ ಹಿಂಭಾಗ, ದಾವಣಗೆರೆ.
87490 24789, 94837 64859, 87620 58369
82173 02649, 80507 27467

**ಕೌಶಲ್ಯ ತರಬೇತಿ**
ವೇದಾಂತ ಫೌಂಡೇಷನ್ ವತಿಯಿಂದ S.S.L.C, PUC ಮತ್ತು ಯಾವುದೇ ಡಿಗ್ರಿ ಪಾಸ್ ಆದ ವಿದ್ಯಾರ್ಥಿಗಳಿಗೆ ಅವರ ಶಿಕ್ಷಣಕ್ಕೆ ಅನುಗುಣವಾಗಿ ಸ್ಕಿಲ್ ಟ್ರೈನಿಂಗ್ ನೀಡಿ ಅವರಿಗೆ ಹೆಸರಾಂತ ಕಂಪನಿಗಳಲ್ಲಿ Job Placement (ಉದ್ಯೋಗ ಅವಕಾಶವನ್ನು) ಒದಗಿಸುತ್ತೇವೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
90667 66580, 85532 59527

**Doctor Jobs vacancy**
1) All Specialists Jobs Vacant. Salary negotiable
2) MBBS / BAMS / Ayush Duty doctor Salary negotibale
Whatsapp No 96867 01526
Contact : Praveen Kumar

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ವಾಹ್ ಕಾಫಿ !! ರಿಚ್ ಕಾಫಿ !!**
SRK COFFEE
ಶ್ರೀ ರಾಮಕೃಷ್ಣ ಕಾಫಿ ಕಂಪನಿ
ಮಂಡಿಪೇಟೆ, ದಾವಣಗೆರೆ.
ಮೊಬೈಲ್ : 94487 27084

**ತಕ್ಷಣ ಬೇಕಾಗಿದ್ದಾರೆ**
ಗಾಡಿ ಹೋಟೆಲ್‌ಗೆ ತಿಂಡಿ/ಅಡುಗೆ ಭಟ್ಟರು ಬೇಕಾಗಿದ್ದಾರೆ.
ವೇತನ 8000/-
91640 78078

**ಬೇಕಾಗಿದ್ದಾರೆ**
ವಿನಾಯಕ ಡಿಜಿಟಲ್ ಜೆರಾಕ್ಸ್ ಅಕ್ಕಮಹಾದೇವಿ ಕಾಂಪ್ಲೆಕ್ಸ್, ಪಿ.ಜೆ. ಎಕ್ಸ್‌ಟೆನ್ಷನ್ ರಾಂ & ಕೋಂ. ಸರ್ಕಲ್ ಹತ್ತಿರ, ಕಂಪ್ಯೂಟರ್ ಜ್ಞಾನವುಳ್ಳ ಆಸಕ್ತಿ ಇರುವ ಅಭ್ಯರ್ಥಿಗಳು ಬೇಕಾಗಿದ್ದಾರೆ.
ಫೋ. : 70221 58935


**ಚಾಲ್ತಿಯಲ್ಲಿರುವ ಪ್ರಾವಿಜನ್ ಸ್ಟೋರ್ ಮಾರಾಟಕ್ಕಿದೆ.**
79750-37312

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಕ್ಲೀನಿಂಗ್, ಪಾತ್ರೆ ಕ್ಲೀನಿಂಗ್ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ನೀಡಲಾಗುವುದು.
93809 74740

ಉತ್ತಮ ಗುಣಮಟ್ಟದ ಕಡಿಮೆ ದರದಲ್ಲಿ ಎಂ.ಸ್ಯಾಂಡ್, ಜಲ್ಲಿ, ಗ್ರಾವೆಲ್ ದೊರೆಯುತ್ತದೆ.
ಸಂಪರ್ಕಿಸಿ:
ಪ್ರವೀಣ್‌ಕುಮಾರ್ ಎಸ್.ಕೆ.
90604 55766

## ಪದವಾಣಿ-12

ನಾಗರಾಜು ಗೊಡಬನಹಾಳ್



**ಎಡದಿಂದ ಬಲಕ್ಕೆ :**

1) ಜಿ.ಎಸ್. ಶಿವರುದ್ರಪ್ಪನವರು ಪಡೆದ ದೇಶದ ಅತ್ಯುನ್ನತ ಪ್ರಶಸ್ತಿ 4
3) ನಾಟ್ಯದ ಅಧಿದೇವತೆ 4
7) ಅರಚು, ಅಬ್ಬರಿಸು 3
8) ರೋಧನದ ಪರ್ಯಾಯ ಪದ 3
9) ನಾವೆ, ನೌಕೆ ಎಂಬರ್ಥದ ಮೂರಕ್ಷರದ ಪದ 3
11) ರೇಖಾಗಣಿತದ ಮೂರು ಭುಜದ ಆಕೃತಿ 3
12) ಚಿಕಿತ್ಸೆ ಮಾಡುವ ವೈದ್ಯರು 3
14) ಬುದ್ಧಿಯಿಲ್ಲದ ದಡ್ಡ 3
17) ಸುವಾಸನೆಯುಳ್ಳ ಒಂದು ಬಗೆಯ ಸಾಂಬಾರ ಪದಾರ್ಥ 3
19) ಆಶ್ಚರ್ಯಕರವಾದುದು ಎಂಬರ್ಥದ ಪದ 3
20) ಮೀನುಗಳನ್ನೇ ನುಂಗುವ ಒಂದು ಬಗೆಯ ದೊಡ್ಡ ಮೀನು 4
21) ಭಾವಪ್ರದಾನವಾದ ಹಾಡು 4

**ಮೇಲಿನಿಂದ ಕೆಳಕ್ಕೆ :**

1) ದೇಶದ ಹಿರಿಮೆಯನ್ನು ಕುರಿತು ಹಾಡುವ ಅಧಿಕೃತವಾದ ಹಾಡು 4
2) ಮೂಲ ಪ್ರತಿಯ ಕಚ್ಚಾಪ್ರತಿ 3
4) ಗಂಡುಕುರಿ ಎಂಬರ್ಥದ ಪದ 3
5) ಹಿಂದಿನ ಅಥವಾ ಮುಂದಿನ ಜನ್ಮ 3
6) ತೀಕ್ಷ್ಣದೃಷ್ಟಿಯುಳ್ಳ ಪಕ್ಷಿರಾಜ 4
9) ದೀಪ ಹಚ್ಚುವ ಪ್ರಣತಿ 3
10) ಬಟ್ಟೆಯಿಂದ ತಾತ್ಕಾಲಿಕವಾಗಿ ಕಟ್ಟಿರುವ ಬಿಡಾರ 3
13) ವಿಶ್ವವಿದ್ಯಾಲಯದ ಅಧ್ಯಕ್ಷ 3
15) ಹಸಿ ತರಕಾರಿಯಿಂದ ಮಾಡುವ ಒಂದು ವ್ಯಂಜನ ಪದಾರ್ಥ 3
16) ಕಾವ್ಯ ರಚಿಸಿದ ಕವಿಯ ಸಿನಿಮಾ ಹಾಡು 4
18) ಮಾಂಸಹಾರಿಯಾದ ಈ ಪಕ್ಷಿ ತಲೆಕೆಳಗಾಗಿದೆ 3
19) ಅರವತ್ತು ಸಂವತ್ಸರಗಳಲ್ಲಿ ಇದು ಎರಡನೆಯದು 3

(ಉತ್ತರಗಳು ಮುಂದಿನ ವಾರಕ್ಕೆ)

### ಪದವಾಣಿ – 11ರ ಉತ್ತರಗಳು :

**ಎಡದಿಂದ ಬಲಕ್ಕೆ :**

1) ವಿದ್ಯಾನಗರ 4) ವಿದುರ 6) ಕ್ಷಯ 7) ರಕಂ 9) ನಾಕ 10) ಕಿತಹಂ (ಹಂತಕಿ) 12) ಬರ 13) ಬಯಕೆ 15) ಬಾದಾಮಿ 17) ಕುಬ್ಜ 19) ಗಿರಣಿ 21) ಗಣ 22) ಬೆಸ 24) ಗಿಣಿ 26) ಕಿಂಕರ 27) ತರಳಬಾಳು.

**ಮೇಲಿನಿಂದ ಕೆಳಕ್ಕೆ :**

1) ವಿಧುರ 2) ನಡು 3) ರಕ್ಷಕ 5) ದುರಂತ 8) ಕಂದಾಯ 9) ನಾಯಿ 10) ಕಿರಬಾ 11) ಹಂಗಾಮಿ 13) ಬಡಗಿ 14) ಕೆಕುಣಿ (ಕುಣಿಕೆ) 16) ದಾಳಿಂಬೆ 18) ಪ್ರಾಣ 20 ರಸಿಕ 21) ಗಣಿತ 23) ಸರಳು 25) ಮೊಳ.

## ಹಮಾಲರು ಎಂದಿರುವ ಯಶವಂತ ರಾವ್‌ಗೆ ಧನ್ಯವಾದಗಳು

**ಕಾಂಗ್ರೆಸ್ ಪಕ್ಷಕ್ಕಾಗಿ ಕಸ ಗುಡಿಸಲಿಕ್ಕೂ ಸಿದ್ಧ : ಡಿಬಿ**

ದಾವಣಗೆರೆ, ಡಿ.26- ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಯಶವಂತ ರಾವ್ ಜಾಧವ್ ಕಾಂಗ್ರೆಸ್ ಪಕ್ಷದ ಸಾಮಾನ್ಯ ಕಾರ್ಯಕರ್ತರಾದ ತಮಗೆ ಕಾಂಗ್ರೆಸ್‌ನ ಹಮಾಲರು ಎಂದು ಕರೆದಿದ್ದಾರೆ. ಅದಕ್ಕಾಗಿ ಜಾಧವ್ ಅವರಿಗೆ ಧನ್ಯವಾದ ಅರ್ಪಿಸುತ್ತೇವೆ ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ವಕ್ತಾರ ಡಿ.ಬಸವರಾಜ್ ಪ್ರತಿಕ್ರಿಯೆ ನೀಡಿದ್ದಾರೆ.

ಹಮಾಲರು ಎಂದರೆ ಮೈಮುರಿದು, ಕಷ್ಟಪಟ್ಟು ಪ್ರಾಮಾಣಿಕವಾಗಿ ದುಡಿಯುವ ಶ್ರಮಿಕ ವರ್ಗ. ಈ ವರ್ಗಕ್ಕೆ ನಮ್ಮನ್ನು ಸೇರಿಸಿರುವುದಕ್ಕೆ ಅವರಿಗೆ ಅಭಿನಂದನೆ ಸಲ್ಲಿಸುತ್ತೇವೆ. ಹಮಾಲಿಗಳು ಇಲ್ಲದೆ ದೇಶದ ಅಭಿವೃದ್ಧಿಯ ಚಕ್ರ ಮುಂದೆ ಸಾಗದು ಎಂದಿರುವ ಅವರು, ಕಾಂಗ್ರೆಸ್ ಪಕ್ಷಕ್ಕೆ 135 ವರ್ಷಗಳ ಇತಿಹಾಸವಿದೆ. ಮೇಲಾಗಿ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಹೆಮ್ಮೆ ಪಕ್ಷಕ್ಕಿದೆ. ಇಂತಹ ಐತಿಹಾಸಿಕ ಕಾಂಗ್ರೆಸ್ ಪಕ್ಷದ ಹಮಾಲರಾಗಲಿಕ್ಕೆ ಪುಣ್ಯ ಬೇಕು ಎಂದಿದ್ದಾರೆ.

ಕಾಂಗ್ರೆಸ್ ಪಕ್ಷಕ್ಕಾಗಿ ಹಮಾಲಿ ಕೆಲಸವಷ್ಟೇ ಅಲ್ಲ, ಕಸ ಗುಡಿಸಲಿಕ್ಕೂ ಸಿದ್ಧ ಎಂದು ಬಸವರಾಜ್ ತಿಳಿಸಿದ್ದಾರೆ. ಕಾಂಗ್ರೆಸ್ ಪಕ್ಷವನ್ನು ಹೆತ್ತ ತಾಯಿಯಂತೆ ಪ್ರೀತಿಸುತ್ತೇವೆ. ಅಪಾರವಾದ ಗೌರವ ಇಟ್ಟುಕೊಂಡಿದ್ದೇವೆ. ಇಂತಹ ಚರಿತ್ರಾರ್ಹ ಕಾಂಗ್ರೆಸ್ ಪಕ್ಷದ ಹಮಾಲರಾಗಲು ಯೋಗ ಬೇಕು ಅಂತಹ ಯೋಗವನ್ನು ನಾವು ಪಡೆದಿದ್ದೇವೆ. ಅದಕ್ಕಾಗಿ ಸಂತೋಷಿಸುತ್ತೇವೆ ಎಂದಿದ್ದಾರೆ.

## ಹಿರೋ ಡಿಎಲ್‌ಆರ್ ಕಪ್ ಉದ್ಘಾಟನೆ



ದಾವಣಗೆರೆ, ಡಿ.26- ನಗರದ ಹೈಸ್ಕೂಲ್ ಮೈದಾನದಲ್ಲಿ ನಡೆಯುತ್ತಿರುವ ಹಿರೋ ಡಿಎಲ್‌ಆರ್ ಕಪ್‌ನ ಉದ್ಘಾಟನೆಯನ್ನು ಸಂಸದ ಜಿ.ಎಂ.ಸಿದ್ದೇಶ್ವರ ಅವರು ನೆರವೇರಿಸಿದರು. ಈ ಸಂದರ್ಭದಲ್ಲಿ ನಿಕಟ ಪೂರ್ವ ಜಿಲ್ಲಾಧ್ಯಕ್ಷ ಯಶವಂತರಾವ್ ಜಾದವ್, ಪಾಲಿಕೆಯ ಸದಸ್ಯರು, ಬಿಜೆಪಿ ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಆರ್.ಎಲ್. ಶಿವಪ್ರಕಾಶ್, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸ್ ದಾಸಕರಿಯಪ್ಪ, ಬಿಜೆಪಿ ಯುವ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯಲ್ಲೇಶ್, ಜಿಲ್ಲಾ ಕಾರ್ಯದರ್ಶಿ ಪ್ರಶಾಂತ್, ಯುವ ಮುಖಂಡರಾದ ಅನಿಲ್, ಕಿರಣ್, ಪ್ರದೀಪ್ ಮತ್ತಿತರರು ಉಪಸ್ಥಿತರಿದ್ದರು.

## ಎಲೆಬೇತೂರಿನಲ್ಲಿ ನಾಳೆ ಸವಗದ್ದಿಗೆ ಸಂಗಮೇಶ್ವರ ಕಾರ್ತಿಕ

ದಾವಣಗೆರೆ, ಡಿ.26- ತಾಲ್ಲೂಕಿನ ಎಲೆಬೇತೂರು ಗ್ರಾಮದ ಶ್ರೀ ಸವಗದ್ದಿಗೆ ಸಂಗಮೇಶ್ವರ ಮಹಾಸ್ವಾಮಿಯ ಕಾರ್ತಿಕೋತ್ಸವ ನಾಡಿದ್ದು ದಿನಾಂಕ 28ರ ಸೋಮವಾರ ನಡೆಯಲಿದೆ.

ಅಂದು ಬೆಳಿಗ್ಗೆ ಶ್ರೀ ಸವಗದ್ದಿಗೆ ಸಂಗಮೇಶ್ವರ ಮಹಾಸ್ವಾಮಿಗೆ ಪಂಚಾಮೃತಾಭಿಷೇಕ, ಬಿಲ್ವಾರ್ಚನೆ, ಪುಷ್ಪಾರ್ಚನೆ, ಮಂಗಳಾರತಿ ನಡೆಯಲಿದೆ. ಅಂದು ಸಂಜೆ 7 ಗಂಟೆಗೆ ಕಾರ್ತಿಕ ಹಚ್ಚುವುದು, ಮಹಾಮಂಗಳಾರತಿ, ಫಳಾರ ವಿನಿಯೋಗ ನಡೆಯಲಿದೆ.

# ಕೆ.ಆರ್. ರಸ್ತೆ ಎಂಬ ಅಪಘಾತಗಳ ರಸ್ತೆ

## ಟ್ರಾಫಿಕ್ ನಿಯಂತ್ರಣದ ಬದಲು ಹೆಲ್ಮೆಟ್ ಇಲ್ಲದವರ ಫೋಟೋ ತೆಗೆಯುವ ಪೊಲೀಸರು

**ಬಿ. ಸಿಕಂದರ್**

ದಾವಣಗೆರೆ, ಡಿ.17- ನಗರದ ಕೆ.ಆರ್. ರಸ್ತೆ (ಬೇತೂರು ರಸ್ತೆ) ಇಲ್ಲಿ ಪ್ರತಿದಿನ ಹತ್ತಾರು ಚಿಕ್ಕಪುಟ್ಟ ಅಪಘಾತಗಳು, ಸವಾರರು ಜಗಳವಾಡುವ ದೃಶ್ಯಗಳು ಸಾಮಾನ್ಯವಾಗಿವೆ.

ಪೂರ್ವ ದಿಕ್ಕು ಜಗಳೂರು ಕಡೆಯಿಂದ ಉತ್ತರ ದಿಕ್ಕು ಹರಪನಹಳ್ಳಿಯಿಂದ ಬರುವ ವಾಹನಗಳು ಸಂಗಮಗೊಳ್ಳುವುದು ಅರಳಿಮರ ಸರ್ಕಲ್‌ನಲ್ಲಿ. ಪ್ರಸ್ತುತ ಭಾರೀ ವಾಹನಗಳಿಗೆ ಈ ರಸ್ತೆ ಒಮ್ಮುಖ ರಸ್ತೆಯಾಗಿ ಸಂಚಾರಿ ಪೊಲೀಸ್ ಇಲಾಖೆಯಿಂದ ನಾಮಫಲಕ ಹಾಕಿದರೂ 'ಕ್ಯಾರೇ' ಎನ್ನದೆ ವಾಹನ ಸವಾರರು ಇಲ್ಲಿ ಭಾರೀ ವಾಹನ ಚಲಾಯಿಸುವುದು ಕಂಡರೆ ನಿಜಕ್ಕೂ 'ಅಂಧಾ ಕಾನೂನ್' ಪುಷ್ಠಿ ನೀಡುವಂತಿದೆ.

ಅರಳಿಮರ ಜಗಳೂರು ಇಮಾಂಸಾಬ್ ಸರ್ಕಲ್‌ನಿಂದ ಹಿಡಿದು ಅಶೋಕ ಟಾಕೀಸ್ ರೈಲ್ವೆ ಗೇಟ್‌ವರೆಗೆ ದ್ವಿಚಕ್ರ ವಾಹನ ಚಲಾಯಿಸಬೇಕೆಂದರೆ ಕೈಯಲ್ಲಿ ಜೀವ ಹಿಡಿದುಕೊಂಡು ಸಾಗಬೇಕು.

ಅಷ್ಟೇ ಅಲ್ಲದೆ ಇದೇ ಸಂದರ್ಭದಲ್ಲಿ ವಾಹನ ಅಂಬ್ಯುಲೆನ್ಸ್ ಬಂದರೂ ಸಹ ಟ್ರಾಫಿಕ್ ಜಾಮ್‌ನಿಂದ ದಾರಿ ಸಿಗದ ಕಾರಣ ಎಷ್ಟೋ ಜೀವಗಳು ಅಂಬ್ಯುಲೆನ್ಸ್‌ನಲ್ಲಿಯೇ ಪ್ರಾಣ ಕಳೆದುಕೊಂಡಿರುವ ಘಟನೆಗಳು ಇಲ್ಲಿ ನಡೆದಿವೆ ಎನ್ನುತ್ತಾರೆ ಈ ಪ್ರದೇಶದ ನಾಗರಿಕರು.

ಈಗ ಹಾಲಿ ಸ್ಮಾರ್ಟ್ ಸಿಟಿ ಕಾಮಗಾರಿ ಅಂದರೆ ಜಗಳೂರು ಬಸ್ ನಿಲ್ದಾಣ ಗಣೇಶ್ ದೇವಸ್ಥಾನ ಬಳಿ ಬಸ್‌ಸ್ಟ್ಯಾಂಡ್ ಕಾಮಗಾರಿ, ಶಾಮನೂರು ಶಿವಶಂಕರಪ್ಪ ಸಾರ್ವಜನಿಕ ಆಸ್ಪತ್ರೆ ಎದುರು ಚರಂಡಿ ಕಾಮಗಾರಿ, ಇದರ ಜೊತೆ ಆಟೋ ನಿಲ್ದಾಣ, ಹೂ, ಹಣ್ಣು ವ್ಯಾಪಾರಿಗಳು, ಹಳ್ಳಿಯಿಂದ ನಗರ ಪ್ರದೇಶಕ್ಕೆ ಕಾರ್ಯ ನಿಮಿತ್ತ ಬರುವ ಜನರು. ಇವೆಲ್ಲದರ ಮಧ್ಯೆ ಬಂಬೂ ಬಜಾರ್ ರಸ್ತೆಯಿಂದ ವಾಹನ ಸವಾರರ ಸಂಖ್ಯೆ ಕಿಷ್ಕಿಂಧೆಯಾಗಿರುವ ಈ ರಸ್ತೆಯಲ್ಲಿ ಸಾಗುವುದು ಬಹಳ ಕಷ್ಟವಾಗಿದೆ ಎನ್ನುತ್ತಾರೆ ಫುಟ್‌ಪಾತ್ ವ್ಯಾಪಾರಿಗಳು.

**ಫೋಟೋ ಗ್ರಾಫರ್‌ಗಳಾಗಿರುವ ಸಂಚಾರಿ ಪೊಲೀಸರು :** ಈ ಭಾಗದಲ್ಲಿ ಕೆಲವು ಪ್ರದೇಶಗಳಲ್ಲಿ ಟ್ರಾಫಿಕ್ ಜಾಮ್ ಆಗಿದ್ದರೂ ಇಲ್ಲಿನ ಪೊಲೀಸರು ಮಾಸ್ಕ್ ಧರಿಸದ, ಹೆಲ್ಮೆಟ್ ಧರಿಸದ ವಾಹನ ಸವಾರರ ಫೋಟೋ ಕ್ಲಿಕ್ಕಿಸುವುದರಲ್ಲಿ ಮಗ್ನರಾಗಿರುತ್ತಾರೆ.

ಈ ಮಧ್ಯೆ ಕಬ್ಬಿಣ ಮಾರುಕಟ್ಟೆಯಲ್ಲಿನ ಸರಕು ಸಾಗಣೆ ವಾಹನಗಳು, ವಿಆರ್‌ಎಲ್ ಸಮೂಹಕ್ಕೆ ಸಂಬಂಧಿಸಿದ ವಾಹನಗಳು, ಕೆ.ಆರ್. ಮಾರುಕಟ್ಟೆಗೆ ತರಕಾರಿ ಹೊತ್ತು ತರುವ ವಾಹನಗಳು ಹೀಗಾಗಿ ದಿನಂಪ್ರತಿ ಸುಮಾರು ಸಾವಿರಾರು ದ್ವಿಚಕ್ರ ವಾಹನ, ನೂರಾರು ಲಘುವಾಹನ, ಹತ್ತಾರು ಭಾರೀ ವಾಹನಗಳು ಈ ಭಾಗದಲ್ಲಿ ಸಂಚರಿಸುತ್ತಿದ್ದು, ಟ್ರಾಫಿಕ್ ಜಾಮ್ ಆದಾಗ ರಸ್ತೆ ಸುಗಮಗೊಳಿಸುವುದೇ ದೊಡ್ಡ ಸಮಸ್ಯೆಯಾಗಿದೆ.

ಬೆಳಿಗ್ಗೆ 8 ಗಂಟೆಯಿಂದ ಸಾಯಂಕಾಲ 8 ಗಂಟೆವರೆಗೂ ಸಹ ಪ್ರತಿದಿನ ಸಮಸ್ಯೆಯಾಗಿರುವ ಈ ರಸ್ತೆಯಲ್ಲಿ ಸಂಚಾರಿ ಪೊಲೀಸರು ಸೂಕ್ತ ಕ್ರಮ ಕೈಗೊಳ್ಳುವ ಮೂಲಕ ಸಂಚಾರಿಗಳಿಗೆ, ಪಾದಚಾರಿಗಳಿಗೆ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂದು ಕೋರಿಕೊಳ್ಳುತ್ತಾರೆ ಆಟೋ ಚಾಲಕ ಗಣೇಶಪ್ಪ.

ಹಳೇ ಪ್ರದೇಶದ ನಾಗರಿಕರು ಹೊಸ ಪ್ರದೇಶಕ್ಕೆ ಪ್ರವೇಶಿಸಬೇಕಾದರೆ ಹಲವಾರು ಜಲ್ವಂತ ಸಮಸ್ಯೆಗಳನ್ನು ಎದುರಿಸಿ ಸಾಗಬೇಕಾಗಿದೆ. ಇವೆಲ್ಲದರ ನಡುವೆ ಅಶೋಕ ಟಾಕೀಸ್ ರೈಲ್ವೆ ಗೇಟ್ ಸಮಸ್ಯೆ ಹೇಳತೀರದು.

ಇಷ್ಟು ದಿನ ಕೊರೊನಾ ಭಯದಿಂದ ಜನರು ಕಡಿಮೆ ಸಂಖ್ಯೆ ಯಲ್ಲಿದ್ದರು. ಆದರೆ, ಈಗ ಸಹಜ ಸ್ಥಿತಿಯತ್ತ ಸಾಗಿರುವ ನಮ್ಮ ನಗರದಲ್ಲಿ ಜನಸಂಖ್ಯೆ ಬೆಳೆಯು ತ್ತಿದೆ. ಆದರೆ ಅಭಿವೃದ್ಧಿ ಕುಂಠಿತಗೊಂಡಿವೆ ಎಂದು ಬೇಸರ ವ್ಯಕ್ತಪಡಿಸಿರುವ ಜನರ ಸಂಖ್ಯೆ ಏನೂ ಕಡಿಮೆ ಇಲ್ಲ.

# ಅಪರಾಧಗಳ ತಡೆ, ಅಪರಾಧಿಗಳ ಪತ್ತೆಗೆ ಗಡಿ ಅಪರಾಧ ಸಭೆ ಸಹಕಾರಿ : ಎಸ್ಪಿ ಹನುಮಂತರಾಯ




ದಾವಣಗೆರೆ, ಡಿ.26- ಜಿಲ್ಲಾ ಪೊಲೀಸ್ ದಾವಣಗೆರೆ ಗ್ರಾಮಾಂತರ ಉಪವಿಭಾಗದ ವತಿಯಿಂದ ನಗರದ ಬಾಪೂಜಿ ಎಂಬಿಎ ಕಾಲೇಜಿನ ಸಭಾಂಗಣದಲ್ಲಿ ಗಡಿ ಅಪರಾಧ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಅವರು ಸಭೆಯನ್ನು ಉದ್ಘಾಟಿಸಿ ಮಾತನಾಡುತ್ತಾ, ಗಡಿ ಅಪರಾಧ ಸಭೆ ನಡೆಸುವುದದರಿಂದ ಅಂತರ್ ಜಿಲ್ಲಾ ಅಪರಾಧಗಳ ಬಗ್ಗೆ ಹಾಗೂ ಅಪರಾಧಿಗಳ ಬಗ್ಗೆ, ಅಪರಾಧದ ವಿಧಾನಗಳ ಬಗ್ಗೆ ಮಾಹಿತಿಯನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವುದರಿಂದ ಅಪರಾಧಗಳನ್ನು ತಡೆಯಲು, ಅಪರಾಧಿಗಳನ್ನು ಪತ್ತೆ ಹಚ್ಚಲು ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಸಭೆಯಲ್ಲಿ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಅಪರಾಧಗಳ ಮತ್ತು ಅಪರಾಧಿಗಳ ಬಗ್ಗೆ ಅನುಭವಗಳನ್ನು ಹಂಚಿಕೊಂಡರು.

ಸಭೆಯಲ್ಲಿ ಶಿಕಾರಿಪುರ ಎಎಸ್ಪಿ ಶ್ರೀನಿವಾಸಲು, ಹರಪನಹಳ್ಳಿ ಡಿವೈಎಸ್ಪಿ ಹಾಲಮೂರ್ತಿ ರಾವ್, ಡಿವೈಎಸ್ಪಿಗಳಾದ ನಾಗೇಶ್ ಐತಾಳ್, ನರಸಿಂಹ ವಿ. ತಾಮ್ರಧ್ವಜ, ಪ್ರಶಾಂತ್ ಮುನ್ನೋಳಿ, ಬಸವರಾಜ್ ಹಾಗೂ ಪೊಲೀಸ್ ನಿರೀಕ್ಷಕರು, ಪಿಎಸ್ ಐಗಳು, ಅಪರಾಧ ಸಿಬ್ಬಂದಿಗಳು ಇದ್ದರು.

## ವಾಜಪೇಯಿ ಜನ್ಮದಿನ : ಜಿಲ್ಲಾ ಯುವ ಮೋರ್ಚಾದಿಂದ ಸ್ವಚ್ಛತಾ ಅಭಿಯಾನ




ದಾವಣಗೆರೆ, ಡಿ.25- ಮಾಜಿ ಪ್ರಧಾನ ಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಅವರ ಹುಟ್ಟು ಹಬ್ಬದ ಪ್ರಯುಕ್ತ ಆವರಗೆರೆಯ ಭಗವಾನ್ ಮಹಾವೀರ ಗೋಶಾಲೆಯಲ್ಲಿ ಜಿಲ್ಲಾ ಬಿಜೆಪಿ ಯುವ ಮೋರ್ಚಾ ವತಿಯಿಂದ ಸೇವಾ ಸಪ್ತಾಹದ ಅಂಗವಾಗಿ ಸ್ವಚ್ಛತಾ ಅಭಿಯಾನ ಹಾಗೂ ಗೋ ಪೂಜೆಯನ್ನು ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯರೂ, ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಆರ್.ಎಲ್.ಶಿವಪ್ರಕಾಶ್, ಯುವ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯಲ್ಲೇಶ್, ಬಿಜೆಪಿ ದಕ್ಷಿಣ ಕ್ಷೇತ್ರದ ಅಧ್ಯಕ್ಷ ಆನಂದ್ ರಾವ್, ಬ್ರಾಹ್ಮಣರ ಅಭಿವೃದ್ಧಿ ನಿಗಮದ ರಾಜ್ಯ ನಿರ್ದೇಶಕ ಶ್ರೀನಿವಾಸ್, ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ರಾಜ್ಯ ನಿರ್ದೇಶಕ ಗೌತಮ್ ಜೈನ್, ಉತ್ತರ ಯುವ ಮೋರ್ಚಾ ಅಧ್ಯಕ್ಷ ಸಚಿನ್, ದಕ್ಷಿಣ ಯುವ ಮೋರ್ಚಾ ಅಧ್ಯಕ್ಷ ರಾಕೇಶ್, ಜಿಲ್ಲಾ ಯುವ ಮೋರ್ಚಾ ಉಪಾಧ್ಯಕ್ಷ ಕಿರಣ್, ವಿನಯ್ ಮತ್ತಿತರರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ನೃತ್ಯ ನಮನ

ವನಿತಾ ಸಮಾಜದ ಆಶ್ರಯದಲ್ಲಿ 'ಶೃತಿ ಮತ್ತು ಲಯ' ವೇದಿಕೆ ವತಿಯಿಂದ ನೃತ್ಯ ನಮನ ಕಾರ್ಯಕ್ರಮ ಇಂದು ಸಂಜೆ 6 ಕ್ಕೆ ಶ್ರೀ ಸತ್ಯಸಾಯಿ ರಂಗಮಂದಿರದಲ್ಲಿ ಏರ್ಪಡಿಸಲಾಗಿದೆ. ಮುಖ್ಯ ಅತಿಥಿಗಳಾಗಿ ಶ್ರೀಮತಿ ಹೇಮಾ ಶ್ರೀನಿವಾಸ ಆಗಮಿಸುವರು. ಅಧ್ಯಕ್ಷತೆಯನ್ನು ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ ವಹಿಸುವರು.

# ಬಡ ವರ್ಗಕ್ಕೆ ವರದಾನ ಜನೌಷಧಿ ಕೇಂದ್ರ



ದಾವಣಗೆರೆ, ಡಿ.26- ದುಬಾರಿ ಬೆಲೆಯ ಔಷಧಿಗಳನ್ನು ಖರೀದಿಸಿ ಆರ್ಥಿಕವಾಗಿ ಸಂಕಷ್ಟ ಎದುರಿಸುತ್ತಿದ್ದ ಜನತೆಗೆ ಜನೌಷಧಿ ಕೇಂದ್ರಗಳು ವರದಾನವಾಗಿವೆ. ಇತ್ತೀಚೆಗೆ ಬಹುತೇಕ ಜನರನ್ನು ಕ್ಯಾನ್ಸರ್, ಸಕ್ಕರೆ ಕಾಯಿಲೆ, ಹೃದಯ ಸಂಬಂಧಿ ಕಾಯಿಲೆ, ಕಿಡ್ನಿ ಸಮಸ್ಯೆಗಳು ಕಾಡುತ್ತಿವೆ. ಇಂತಹ ಕಾಯಿಲೆಗಳಿಗೆ ದುಬಾರಿ ಔಷಧಿ ಕೊಳ್ಳುವುದು ಸಾಮಾನ್ಯ ಜನರಿಗೆ ಕಷ್ಟಸಾಧ್ಯ.

ಔಷಧಿಗೆ ಹಣ ಹೊಂದಿಸಲಾಗದೆಯೇ ಬಡ ಜನತೆ ಪ್ರಾಣವನ್ನೂ ಕಳೆದುಕೊಳ್ಳುತ್ತಿದ್ದುದು ಹೊಸ ವಿಷಯವಿಲ್ಲ. ಆದರೆ ಇದೀಗ ಅತಿ ಕಡಿಮೆ ಬೆಲೆಯಲ್ಲಿ ಔಷಧಿ ನೀಡುವ ಜನೌಷಧಿ ಕೇಂದ್ರಗಳು ಸಾರ್ವಜನಿಕ ವಲಯದಲ್ಲಿ ಮೆಚ್ಚುಗೆಗೆ ಪಾತ್ರವಾಗಿವೆ.

ಜಿಲ್ಲಾ ಚಿಗಟೇರಿ ಆಸ್ಪತ್ರೆ ಆವರಣದಲ್ಲಿ ಪ್ರಥಮವಾಗಿ ಜನೌಷಧಿ ಕೇಂದ್ರ ಆರಂಭವಾದಾಗ ಔಷಧಿಗೆ ಅತಿ ಹೆಚ್ಚು ಬೇಡಿಕೆ ಉಂಟಾಯಿತು. ಈ ಹಿನ್ನೆಲೆಯಲ್ಲಿ ಇದೀಗ ನಗರದಲ್ಲಿ ಎಂಟು ಸ್ಥಳಗಳಲ್ಲಿ ಜನೌಷಧಿ ಕೇಂದ್ರ ಆರಂಭಿಸಲಾಗಿದೆ.

ಪ್ರಧಾನ ಮಂತ್ರಿ ಜನ ಔಷಧ ಕೇಂದ್ರವು ಭಾರತ ಸರ್ಕಾರದ ಔಷಧಿ ಇಲಾಖೆಯಿಂದ ಪ್ರಾಯೋಜಿಸಲ್ಪಟ್ಟಿರುವ ಜೆನರಿಕ್ ಔಷಧಿಗಳ ಮೆಡಿಕಲ್ ಸ್ಟೋರ್ ಆಗಿದ್ದು, ಅತ್ಯುತ್ತಮ ಗುಣಮಟ್ಟದ ಜೆನರಿಕ್ ಔಷಧಿಗಳು ಖಾಸಗಿ ಔಷಧಿಗಳ ಬೆಲೆಗಿಂತ ಶೇ.30 ರಿಂದ 80ರವರೆಗೆ ರಿಯಾಯಿತಿ ದರದಲ್ಲಿ ದೊರೆಯುತ್ತಿವೆ.

ಈ ಜನರಿಕ್ ಔಷಧಿಯು ಭಾರತ ಸರ್ಕಾರದ ಪ್ರಯೋಗ ಶಾಲೆಯಲ್ಲಿ ತಯಾರಾಗಿ ನೇರವಾಗಿ ಜನ ಔಷಧಿ ಬಳಿಗೆಗೆ ಬರುತ್ತವೆ. ಇದರಿಂದ ಔಷಧಿಗಳಂತೆ ಅಧಿಕ ತಯಾರಿಕಾ ವೆಚ್ಚ, ಜಾಹೀರಾತು ವೆಚ್ಚ, ಮಾರುಕಟ್ಟೆ ವೆಚ್ಚ, ತೆರಿಗೆ ಇರುವುದಿಲ್ಲ.

ಆದ್ದರಿಂದ ಅತಿ ಕಡಿಮೆ ಬೆಲೆಯಲ್ಲಿ ದೊರೆಯುವುದರಿಂದ ಬಡ ಜನತೆಗೆ ಅನುಕೂಲವಾಗಿದೆ. ಜನತೆ ಮತ್ತಷ್ಟು ಸದುಪಯೋಗ ಪಡೆದುಕೊಳ್ಳಬೇಕು ಎನ್ನುತ್ತಾರೆ ಬಿಜೆಪಿ ಮುಖಂಡ ಎನ್.ಜಿ. ಪುಟ್ಟಸ್ವಾಮಿ.

## ನಗರದಲ್ಲಿ ನಾಳೆ ಯುವ ಜನೋತ್ಸವ ಆಯ್ಕೆ ಸ್ಪರ್ಧೆ

ದಾವಣಗೆರೆ, ಡಿ.26- ಜಿಲ್ಲಾ ಮಟ್ಟದ ಯುವಜನೋತ್ಸವ ಆಯ್ಕೆ ಸ್ಪರ್ಧೆಗಳನ್ನು ನಗರದ ಚಿಂದೋಡಿ ಲೀಲಾ ಕಲಾಕ್ಷೇತ್ರದಲ್ಲಿ ನಾಡಿದ್ದು ದಿನಾಂಕ ದಿನಾಂಕ 28 ರಂದು ಬೆಳಿಗ್ಗೆ 10 ಗಂಟೆಗೆ ನಡೆಸಲಾಗುವುದು.

ಯುವಜನೋತ್ಸವ ಕಾರ್ಯ ಕ್ರಮದಲ್ಲಿ ಗುಂಪು ಸ್ಪರ್ಧೆಗಳ ವಿಭಾ ಗದಲ್ಲಿ ಜಾನಪದ ನೃತ್ಯ, ಜಾನಪದ ಗೀತೆ, ವೈಯಕ್ತಿಕ ಸ್ಪರ್ಧೆಗಳ ವಿಭಾಗ ದಲ್ಲಿ ಇಂಗ್ಲಿಷ್ ಅಥವಾ ಹಿಂದಿಯಲ್ಲಿ ಏಕಾಂಕ ನಾಟಕ, ಕರ್ನಾಟಕ ಸಂಗೀತ, ಹಿಂದೂಸ್ಥಾನಿ ಸಂಗೀತ, ಭರತನಾಟ್ಯ, ಓಡಿಸ್ಸಿ, ಮಣಿಪುರಿ, ಕೂಚುಪುಡಿ, ಕಥಕ್, ಸಿತಾರ್, ಕೊಳಲು, ತಬಲಾ, ವೀಣಾ, ಮೃದಂಗ, ಹಾರ್ಮೋನಿಯಂ, ಗಿಟಾರ್, ಇಂಗ್ಲಿಷ್ ಅಥವಾ ಹಿಂದಿ ಯಲ್ಲಿ ಆಶುಭಾಷಣ ಸ್ಪರ್ಧೆಗಳನ್ನು ನಡೆಸಲಾಗುವುದು.

ವಿವರಗಳಿಗೆ ಸಹಾಯಕ ನಿರ್ದೇಶಕರು, ಯುವ ಸಬಲೀಕ ರಣ ಮತ್ತು ಕ್ರೀಡಾ ಇಲಾಖೆ (ಮೊ.96207-96970) ಯನ್ನು ಸಂಪರ್ಕಿಸಬಹುದು.

## ನಗರದ ನಾಳೆ ಲಿಂಗೇಶ್ವರ ಸ್ವಾಮಿಯ ಕಡೇ ಕಾರ್ತಿಕ

ದಾವಣಗೆರೆ, ಡಿ.26- ನಗರದ ಅಶೋಕ ಟಾಕೀಸ್ ಬಳಿಯ ಶ್ರೀ ಲಿಂಗೇಶ್ವರ ದೇವಸ್ಥಾನ ರಸ್ತೆಯಲ್ಲಿರುವ ಶ್ರೀ ಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಕಡೇ ಕಾರ್ತಿಕೋತ್ಸವವು ನಾಡಿದ್ದು ದಿನಾಂಕ 28 ರ ಸೋಮವಾರ ಸಂಜೆ 7 ಗಂಟೆಗೆ ಏರ್ಪಡಿಸಲಾಗಿದೆ ಎಂದು ಶ್ರೀ ಲಿಂಗೇಶ್ವರ ದೇವಸ್ಥಾನ ಸಂಘ ತಿಳಿಸಿದೆ.

## ಬ್ರಾಹ್ಮಣ ಸಂಘದಿಂದ ವಿದ್ಯಾರ್ಥಿ ವೇತನ

ದಾವಣಗೆರೆ, ಡಿ.26- ಬ್ರಾಹ್ಮಣ ಸಮಾಜ ಸೇವಾ ಸಂಘದಲ್ಲಿ ದಾನಿಗಳಿಂದ ಸ್ಥಾಪಿಸಿರುವ ದತ್ತಿ ನಿಧಿಯಿಂದ ಆರ್ಥಿಕವಾಗಿ ಹಿಂದುಳಿದ ಹಾಗೂ ಶೈಕ್ಷಣಿಕವಾಗಿ ಉತ್ತಮ ಸಾಧನೆ ಮಾಡಿರುವ ತ್ರಿಮತಸ್ಥ ಬ್ರಾಹ್ಮಣ ಸಮಾಜದ ಸದಸ್ಯರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿದ್ಯಾರ್ಥಿ ವೇತನ ನೀಡಲಾಗುವುದು.

ಅರ್ಜಿದಾರರು ಪಿಯುಸಿ ಹಾಗೂ ಡಿಗ್ರಿ ಮಟ್ಟದ ವ್ಯಾಸಂಗ ಮಾಡುತ್ತಿರುವವರಾಗಿದ್ದು, ಅವರ ಆರ್ಥಿಕ ಪರಿಸ್ಥಿತಿ ಹಾಗೂ ಶೈಕ್ಷಣಿಕ ಪ್ರಗತಿಯ ಕುರಿತು ಸೂಕ್ತ ದಾಖಲೆಗಳನ್ನು ಒದಗಿಸಬೇಕು. ಸಂಘದ ಕಾರ್ಯಾಲಯದಲ್ಲಿ ಅರ್ಜಿಗಳು ಲಭ್ಯವಿದ್ದು, ಜನವರಿ 5 ರೊಳಗೆ ಭರ್ತಿ ಮಾಡಿದ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ಮೊ: 9620900275, 9448013144 ಸಂಪರ್ಕಿಸಲು ಸಂಘದ ಕಾರ್ಯದರ್ಶಿ ಯು. ಬಾಲಕೃಷ್ಣ ವೈದ್ಯ ತಿಳಿಸಿದ್ದಾರೆ.

ಕನ್ಸಲ್ಟೆನ್ಸಿ ಸರ್ವೀಸಸ್
ನಮ್ಮ ಕಛೇರಿಯಲ್ಲಿ ಬಿಲ್ಡಿಂಗ್ ಪ್ಲ್ಯಾನ್ಸ್, ಎಸ್ಟಿಮೇಷನ್, ಲೇಔಟ್ ಪ್ಲ್ಯಾನ್ಸ್, ಆನ್‌ಲೈನ್ ಅಪ್‌ಲೋಡ್, ಬ್ಲೂ ಪ್ರಿಂಟ್ಸ್ ಮತ್ತು ಪ್ಲಾಟರ್ ಪ್ರಿಂಟ್ಸ್ (A4-A0 ಸೈಜ್) ಮಾಡಿಕೊಡಲಾಗುತ್ತದೆ. ಸಂಪರ್ಕಿಸಿ:
Civil
ಶ್ರೀ ವೀರಭದ್ರೇಶ್ವರ ಕನ್ಸಲ್ಟೆನ್ಸಿ ಸರ್ವೀಸಸ್ VCS
ಪಿ.ಜೆ. ಲಾಡ್ಜ್ ಎದುರು, ಎ.ವಿ.ಕೆ. ಕಾಲೇಜ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
ಮೊ. 99168 73399, 93432 77422, 99161 73399

ಶ್ರೀ ವಾಲ್ಮೀಕಿ ಸಾಂಸ್ಕೃತಿಕ ಸಭಾ ಭವನ
ನಾಯಕ ವಿದ್ಯಾರ್ಥಿ ನಿಲಯದ ಆವರಣದ 1ನೇ ಮಹಡಿ, ಕೆಇಬಿ ಸರ್ಕಲ್ ಹತ್ತಿರ, ಪಿ.ಜೆ. ಬಡಾವಣೆ, ದಾವಣಗೆರೆ.
ಮದುವೆ - ಶುಭ ಕಾರ್ಯಗಳಿಗೆ ಹಾಲ್ ಬಾಡಿಗೆಗೆ ಇದೆ
500 ಕುರ್ಚಿಗಳನ್ನೊಂದಿರುವ ಸಭಾ ಭವನ, 250 ಕುರ್ಚಿಗಳಿರುವ ಊಟದ ಹಾಲ್, ಉಳಿದುಕೊಳ್ಳಲು 9 ರೂಂಗಳು, ಅಡುಗೆ ಪಾತ್ರೆ ಸಾಮಾನುಗಳು ಎಲ್ಲಾ ಸೇರಿ ಕೇವಲ ರೂ. 15,000 ಗಳಿಗೆ ಮದುವೆ ಮತ್ತು ಶುಭ ಕಾರ್ಯಗಳಿಗೆ ಹಾಲ್ ಬಾಡಿಗೆಗೆ ದೊರೆಯುತ್ತದೆ. ಸಂಪರ್ಕಿಸಿ :
ಬಿ. ವೀರಣ್ಣ, ಅಧ್ಯಕ್ಷರು, ನಾಯಕ ವಿದ್ಯಾರ್ಥಿ ನಿಲಯ, ಪಿ.ಜೆ. ಬಡಾವಣೆ, ದಾವಣಗೆರೆ. 80951 71787

## ರಾಮ ಜನ್ಮ ಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನಿಂದ ನಿಧಿ ಸಮರ್ಪಣಾ ಅಭಿಯಾನ






ದಾವಣಗೆರೆ, ಡಿ.26- ಶ್ರೀ ರಾಮ ಜನ್ಮ ಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ವತಿಯಿಂದ ಶ್ರೀ ರಾಮ ಮಂದಿರ ನಿರ್ಮಾಣ ನಿಧಿ ಸಮರ್ಪಣಾ ಅಭಿಯಾನದ ಪೂರ್ವ ಸಿದ್ಧತೆಯ ಅಂಗವಾಗಿ ಉಪ ವಸತಿ (ಬೂತ್ ಮಟ್ಟದ) ಕಾರ್ಯಕರ್ತರ ಸಮಾವೇಶವನ್ನು ಇಂದು ನಗರದಲ್ಲಿ ನಡೆಸಲಾಯಿತು.

ಉತ್ತರ ವಿಧಾನಸಭಾ ಕ್ಷೇತ್ರದ ರಾಷ್ಟ್ರೋತ್ಥಾನ ಶಾಲೆಯಲ್ಲಿ ಏರ್ಪಾಡಾಗಿದ್ದ ಈ ಸಮಾವೇಶದಲ್ಲಿ ಆರ್‌ಎಸ್‌ಎಸ್‌ನ ದಕ್ಷಿಣ ಪ್ರಾಂತ ಸಹ ಸಂಪರ್ಕ ಪ್ರಮುಖ ಯಾದವ್ ಕೃಷ್ಣ ಅವರು ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು. ಆರ್‌ಎಸ್‌ಎಸ್‌ನ ಜಿಲ್ಲಾ ಕಾರ್ಯವಾಹಕ ಕೃಷ್ಣಪ್ರಸಾದ್ ಉಪಸ್ಥಿತರಿದ್ದರು.

ಮತ್ತೊಂದೆಡೆ ಶ್ರೀ ವಿಠ್ಠಲ ದೇವಸ್ಥಾನದಲ್ಲಿ ಆಯೋಜನೆಗೊಂ ಡಿದ್ದ ದಕ್ಷಿಣ ವಿಧಾನಸಬಾ ಕ್ಷೇತ್ರದ ಸಮಾವೇಶದಲ್ಲಿ ಆರ್‌ಎಸ್‌ಎಸ್‌ನ ಶಿವಮೊಗ್ಗದ ವಿಭಾಗ ಪ್ರಚಾರ ಪ್ರಮುಖ ಮಧುಕರ ಮತ್ತೂರು ಅವರು ಕಾರ್ಯಕರ್ತರಿಗೆ ಮಾರ್ಗದರ್ಶನ ನೀಡಿದರು. ಜಿಲ್ಲಾ ಪ್ರಚಾರಕ ಮಧು ಉಪಸ್ಥಿತರಿದ್ದರು.

ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣದ ನಿಧಿ ಸಂಗ್ರಹಕ್ಕಾಗಿ ಕರ್ನಾಟಕ ರಾಜ್ಯದ 27,500 ಹಳ್ಳಿಗಳನ್ನು, 90 ಲಕ್ಷ ಕುಟುಂಬಗಳನ್ನು ತಲುಪುವ ಮಹತ್ವಾಕಾಂಕ್ಷೆಯ ಬೃಹತ್ ಅಭಿಯಾನ ರಾಜ್ಯಾದ್ಯಂತ ಜನವರಿ 15 ರಿಂದ ಫೆಬ್ರವರಿ 5 ರ ವರೆಗೆ ನಡೆಯಲಿದೆ.

ನೂತನ ಪ್ರಾರಂಭ
ಗ್ಲೋಬಲ್ ಹೆಲ್ಪ್‌ಲೈನ್ ನಿರುದ್ಯೋಗ ನಿವಾರಣ ಸಂಘ (ರಿ.)
Global Helpline Nirudyoga Nivarana Sangha (R.)
#1948/21, 13ನೇ ಕ್ರಾಸ್, ತರಳಬಾಳು ಬಡಾವಣೆ, ದಾವಣಗೆರೆ-577 005.
E.mail : globalhelplinejbj@gmail.com.
ಉದ್ಯೋಗ ಮಾಹಿತಿ ಕೇಂದ್ರ
ಯುವಕ/ಯುವತಿಯರೇ, ಕೆಲಸವಿಲ್ಲ ಎಂದು ಕೊರಗಬೇಡಿ... ನಿಮ್ಮ ವಿದ್ಯಾರ್ಹತೆಗೆ ತಕ್ಕ ಕೆಲಸಗಳನ್ನು ನಮ್ಮ ಸಂಘದ ವತಿಯಿಂದ ಕೊಡಿಸುತ್ತೇವೆ. S.S.L.C., P.U.C., B.A., B.Com., B.Sc., B.B.M., MA, M.Sc, M.Com, MBA, MCA ಆದ ಅಭ್ಯರ್ಥಿಗಳು ನಮ್ಮ ಸಂಘಕ್ಕೆ ಬಂದು ಹೆಸರು, ವಿಳಾಸಗಳನ್ನು ನೋಂದಾಯಿಸಿಕೊಳ್ಳಿ ಹಾಗೂ ಅಂಗವೈಕಲ್ಯವಿರುವವರಿಗೂ ಅವಕಾಶವಿದೆ. "ಕೆಲಸಕ್ಕೆ ಹೋಗಲು ಸಿದ್ಧರಾಗಿ".
ಸಂಪರ್ಕಿಸಿ : 81470 12999, 89512 72999


ಹುಟ್ಟುಹಬ್ಬದ ಶುಭಾಶಯಗಳು

ಆತ್ಮೀಯ ಸ್ನೇಹಿತ, ಬಿ.ಜೆ.ಪಿ. ಕಾನೂನು ಪ್ರಕೋಷ್ಠದ ರಾಜ್ಯ ಸಮಿತಿಯ ಸದಸ್ಯರಾದ
ಶ್ರೀ ಎ.ಸಿ. ರಾಘವೇಂದ್ರ ವಕೀಲರು
ಇವರಿಗೆ ಹುಟ್ಟುಹಬ್ಬದ ಶುಭಾಶಯಗಳು.
ಹೆಚ್. ದಿವಾಕರ್, ವಕೀಲರು
ಉಪಾಧ್ಯಕ್ಷರು, ವಕೀಲರ ಸಂಘ ದಾವಣಗೆರೆ ಮತ್ತು ಮುಖಂಡರು ಬಿ.ಜೆ.ಪಿ ಕಾನೂನು ಪ್ರಕೋಷ್ಠ,
ಎಲ್. ದಯಾನಂದ
ಜಿಲ್ಲಾಧ್ಯಕ್ಷರು ಅಧಿವಕ್ತ ಪರಿಷತ್, ದಾವಣಗೆರೆ.
ಕಿರಣ್‌ಕುಮಾರ್ ಸುರ್ವೆ, ಎಂ.ಎಸ್. ಮಂಜುನಾಥ್, ಅಜೀರ್ ಪಠಾಣ್, ಎಸ್.ಎಸ್. ಎಸ್. ಎಂಟರ್ ಪ್ರೈಸಸ್, ಆಲೂರು ಪ್ರಕಾಶ್, ತಿರುಮಲ್ಲೇಶ್, ಶಂಕರ್‌ರಾವ್, ಡಿ.ಎಸ್. ಶಿವಶಂಕರಪ್ಪ, ಪ್ರಶಾಂತ್ ಬಿ., ಕಿರಣ್ ಟಿ.ಎನ್ ಮತ್ತು ಪ್ರಕೋಷ್ಠದ ಸದಸ್ಯರುಗಳು.

# ಕೇಸುಗಳನ್ನು ಅಭ್ಯಸಿಸಿದಾಗ ಮಾತ್ರ ನ್ಯಾಯ ಒದಗಿಸಲು ಸಾಧ್ಯ

## ಮುಂಬಡ್ತಿ - ಬೀಳ್ಕೊಡುಗೆ ಸಮಾರಂಭದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರಾದ ಸಾಬಪ್ಪ ಪ್ರತಿಪಾದನೆ



ದಾವಣಗೆರೆ, ಡಿ.26- ಬದ್ಧತೆಯಿಂದ ಕೆಲಸ ಮಾಡುವುದು, ಶೀಘ್ರ ನ್ಯಾಯದಾನ ಮಾಡುವುದು, ನ್ಯಾಯಾಧೀಶರು ಮಾಡಬೇಕಾದ ಪ್ರಮುಖ ಕರ್ತವ್ಯವಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರೂ, ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯೂ ಆದ ಸಾಬಪ್ಪ ತಿಳಿಸಿದರು.

ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾಗಿ ಮುಂಬಡ್ತಿ ಪಡೆದು ಬೆಂಗಳೂರಿಗೆ ವರ್ಗಾವಣೆಗೊಂಡಿರುವ ಅವರನ್ನು ಜಿಲ್ಲಾ ಸೇವಾ ಪ್ರಾಧಿಕಾರದಿಂದ ಪ್ಯಾನಲ್ ವಕೀಲರು ನೀಡಿದ ಬೀಳ್ಕೊಡುಗೆಯನ್ನು ಸ್ವೀಕರಿಸಿ ಅವರು ಮಾತನಾಡಿದರು.

ವಕೀಲರು ಮತ್ತು ನ್ಯಾಯಾಧೀಶರು ನ್ಯಾಯ ದಾನ ಒದಗಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಬೇಕಾಗಿದೆ. ನ್ಯಾಯಾಧೀಶರು ಪೂರ್ವಭಾವಿಯಾಗಿ ತಮ್ಮ ಕೇಸುಗಳನ್ನು ಓದಿಕೊಂಡು ಬಂದಾಗ ಮಾತ್ರ ನ್ಯಾಯ ಒದಗಿಸಲು ಸಾಧ್ಯವಾಗುತ್ತದೆ ಎಂದು ಸಲಹೆ ನೀಡಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಎಲ್.ಹೆಚ್. ಅರುಣ್‌ಕುಮಾರ್ ಮಾತನಾಡಿ, ಮಾನವೀಯ ಮೌಲ್ಯಗಳನ್ನು ಇಟ್ಟುಕೊಂಡು ಕರ್ತವ್ಯ ನಿರ್ವಹಿಸುವ ನ್ಯಾಯಾಧೀಶರು ಅತೀ ವಿರಳ. ಅಂಥವರಲ್ಲಿ ನ್ಯಾಯಾಧೀಶರಾದ ಸಾಬಪ್ಪ ಅವರು ಕಲ್ಯಾಣ ಸಮಾಜದ ಆದರ್ಶವನ್ನು ಇಟ್ಟುಕೊಂಡು ದುರ್ಬಲರ, ಬಡವರ ಬಗ್ಗೆ ತುಂಬಾ ಕಾಳಜಿ ಇಟ್ಟುಕೊಂಡು ನ್ಯಾಯಾಧೀಶರಾಗಿ ಮತ್ತು ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದರು ಎಂದು ಸಾಬಪ್ಪ ಅವರ ಸೇವೆ ಮತ್ತು ವ್ಯಕ್ತಿತ್ವವನ್ನು ಮೆಲುಕು ಹಾಕಿದರು.

ಪ್ಯಾನಲ್ ವಕೀಲರುಗಳಾದ ಆಂಜನೇಯ ಗುರೂಜಿ, ಮಂಜುಳ, ಪ್ರದೀಪ್, ಭಾಗ್ಯಮ್ಮ, ರೇಖಾ, ನ್ಯಾಯವಾದಿ ನಜೀರ್ ಅಹ್ಮದ್ ಮುಂತಾದವರು ಮಾತನಾಡಿ, ಸಾಬಪ್ಪನವರ ಕಾರ್ಯವೈಖರಿಯನ್ನು ಪ್ರಶಂಸಿಸಿದರು.

# ನಿವೃತ್ತಿ ನಂತರ ವೈದ್ಯಕೀಯ ವಿದ್ಯಾರ್ಥಿ!

**70ರ ಹರೆಯದಲ್ಲಿ ವೈದ್ಯರಾಗಲಿರುವ ಪ್ರಧಾನ್**

ಭುವನೇಶ್ವರ, ಡಿ. 26 – ಒಡಿಶಾದ ಜಯ್ ಕಿಶೋರ್ ಪ್ರಧಾನ್ ಅವರು ಈ ವರ್ಷ ನಡೆದ ನೀಟ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ಸಾವಿರಾರು ವಿದ್ಯಾರ್ಥಿಗಳ ರೀತಿಯಲ್ಲೇ ಎಂ.ಬಿ.ಬಿ.ಎಸ್. ಪ್ರಥಮ ವರ್ಷಕ್ಕೆ ಸೇರ್ಪಡೆಯಾಗಿದ್ದಾರೆ. ವಿಶೇಷ ಎಂದರೆ ಪ್ರಧಾನ್ ಅವರು ನಿವೃತ್ತ ಬ್ಯಾಂಕ್ ಉದ್ಯೋಗಿಯಾಗಿದ್ದಾರೆ.

ಭಾರತೀಯ ವೈದ್ಯಕೀಯ ಶಿಕ್ಷಣ ಇತಿಹಾಸದಲ್ಲೇ ಇದು ಮಹತ್ತರ ಸಾಧನೆಯಾಗಿದೆ. ಜೀವ ಇರುವವರೆಗೂ ಜನರ ಸೇವೆ ಮಾಡಬೇಕು ಎಂಬ ಅಪೇಕ್ಷೆಯೇ ನಿವೃತ್ತಿ ನಂತರ ಪ್ರಧಾನ್ ವೈದ್ಯರಾಗುವತ್ತ ಕಾಲಿಡಲು ಕಾರಣವಾಗಿದೆ.

ಎಸ್.ಬಿ.ಐ.ನ ನಿವೃತ್ತ ಅಧಿಕಾರಿಯಾಗಿರುವ ಅವರು, ಸರ್ಕಾರಿ ವೀರ್ ಸುರೇಂದ್ರ ಸಾಯಿ ವಿಶ್ವವಿದ್ಯಾನಿಲಯದಲ್ಲಿ ಅಂಗವೈಕಲ್ಯ ಮೀಸಲಾತಿ ಕೋಟಾದಡಿ ಪ್ರವೇಶ ಪಡೆದಿದ್ದಾರೆ. ಇದು ವೈದ್ಯಕೀಯ ಶಿಕ್ಷಣದಲ್ಲಿ ಐತಿಹಾಸಿಕ ಘಟನೆಯಾಗಿದೆ.

ಪ್ರಧಾನ್ ಈ ವಯಸ್ಸಿನಲ್ಲಿ ವೈದ್ಯಕೀಯ ವಿದ್ಯಾರ್ಥಿ ಯಾಗಿ ಪ್ರವೇಶ ಪಡೆಯುವ ಮೂಲಕ ಇತರರಿಗೆ ಉದಾಹರಣೆಯಾಗಿದ್ದಾರೆ ಎಂದು ವಿಮ್ಸಾರ್ ನಿರ್ದೇಶಕ ಲಲಿತ್ ಮೆಹೆರ್ ತಿಳಿಸಿದ್ದಾರೆ.

ನೀಟ್ ಪರೀಕ್ಷೆಗೆ ಯಾವುದೇ ವಯೋಮಿತಿ ಇಲ್ಲ. ಹೀಗಾಗಿ ಪ್ರಧಾನ್ ಅವರು ಸೆಪ್ಟೆಂಬರ್‌ನಲ್ಲಿ ಪರೀಕ್ಷೆಗೆ ಹಾಜರಾಗಿ ಉತ್ತಮ ರ್‍ಯಾಂಕ್ ಪಡೆದು ವೈದ್ಯರಾಗುವ ಅರ್ಹತೆ ಪಡೆದುಕೊಂಡಿದ್ದಾರೆ. ಇತ್ತೀಚೆಗೆ ಪ್ರಧಾನ್ ಅವರ ಅವಳಿ ಹೆಣ್ಣು ಮಕ್ಕಳ ಪೈಕಿ ಒಬ್ಬರು ಮೃತಪಟ್ಟಿದ್ದರು. ಇದು ಅವರು ನೀಟ್ ಪರೀಕ್ಷೆಗೆ ಮುಂದಾಗಿ ವೈದ್ಯರಾಗಲು ಪ್ರೇರಣೆಯಾಯಿತು. ಎಂಬಿಬಿಎಸ್ ಪೂರ್ಣಗೊಳಿಸುವ ವೇಳೆಗೆ ಅವರಿಗೆ 70 ವರ್ಷವಾಗಲಿದೆ.

ವಯಸ್ಸು ಕೇವಲ ಸಂಖ್ಯೆ ಎಂದಿರುವ ಪ್ರಧಾನ್, ವೈದ್ಯನಾಗುವುದರ ಹಿಂದೆ ನನಗೆ ಯಾವುದೇ ಹಣಕಾಸಿನ ಉದ್ದೇಶವಿಲ್ಲ. ಜೀವ ಇರುವವರೆಗೂ ಜನರ ಸೇವೆ ಮಾಡುತ್ತೇನೆ ಎಂದು ತಿಳಿಸಿದ್ದಾರೆ.

# ಆವರಗೆರೆಯ ಶ್ರೀನಿವಾಸ ಮಂದಿರದಲ್ಲಿ ಏಕಾದಶಿ








ದಾವಣಗೆರೆ, ಡಿ.26- ಇಲ್ಲಿಗೆ ಸಮೀಪದ ಆವರಗೆರೆ ಗ್ರಾಮದ ಆರ್.ಜಿ.ಎಸ್. ನಗರದ ಶ್ರೀನಿವಾಸ ಮಂದಿರದಲ್ಲಿ ವೈಕುಂಠ ಏಕಾದಶಿ ಪ್ರಯುಕ್ತ ನಿನ್ನೆ ವಿಶೇಷ ಪೂಜಾ ಕೈಂಕರ್ಯಗಳು ನಡೆದವು. ಶ್ರೀ ವೆಂಕಟೇಶ್ವರ ಸ್ವಾಮಿಗೆ ಅಭಿಷೇಕ, ಅರ್ಚನೆ, ಮಹಾಮಂಗಳಾರತಿ ಮೊದಲಾದ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಪೂಜಾ ಕೈಂಕರ್ಯಗಳು ಶ್ರದ್ಧಾ - ಭಕ್ತಿಯಿಂದ ನೆರವೇರಿದವು.

ವಿವಿಧ ರೀತಿಯ ಹೂವುಗಳಿಂದ ಆಕರ್ಷಕವಾಗಿ ಅಲಂಕೃತಗೊಂಡಿದ್ದ ಶ್ರೀ ಸ್ವಾಮಿಯ ದರ್ಶನ ಪಡೆದ ಭಕ್ತರು ದಿವ್ಯ ಮೂರ್ತಿಯನ್ನು ಕಣ್ತುಂಬಿಕೊಂಡರು. ಸುಮಾರು 3 ಸಾವಿರಕ್ಕೂ ಅಧಿಕ ಭಕ್ತರು ದೇವಾಲಯಕ್ಕೆ ಆಗಮಿಸಿ, ದರ್ಶನ ಭಾಗ್ಯ ಪಡೆದಿದ್ದಾರೆ ಎಂದು ಆರ್.ಜಿ.ಎಸ್. ಗ್ರೂಪ್ ಆಫ್ ಫರ್ಮ್ ಛೇರ್ಮನ್ ಆರ್.ಜಿ. ಶ್ರೀನಿವಾಸಮೂರ್ತಿ ತಿಳಿಸಿದ್ದಾರೆ.

# ನಗರದಲ್ಲಿ ಇಂದು ರಾಘವೇಂದ್ರ ಸ್ವಾಮಿ ಮಠದಲ್ಲಿ ಕಾರ್ತಿಕ ದೀಪೋತ್ಸವ



ಕೆ.ಬಿ. ಬಡಾವಣೆ ದೀಕ್ಷಿತ್ ರಸ್ತೆಯ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಕಡೇ ಕಾರ್ತಿಕ ದೀಪೋತ್ಸವವು ಇಂದು ನಡೆಯಲಿದೆ. ಸಂಜೆ 5.30 ಕ್ಕೆ ದೀವಟಿಗಿ ಸೇವಾ, 5.45 ಕ್ಕೆ ಸೇವಾ ಸಂಕಲ್ಪ, 6 ಗಂಟೆಗೆ ರಾಜಬೀದಿಗಳಲ್ಲಿ ವೇದ, ವಾದ್ಯ, ಭಜನೆ ಹಾಗೂ ಸಾಲು ದೀಪದೊಂದಿಗೆ ಪಾಲಕಿ ಉತ್ಸವ, 7 ಗಂಟೆಗೆ ಶ್ರೀ ಮಠದ ಪ್ರಾಕಾರದಲ್ಲಿ ರಥೋತ್ಸವ, ಅಷ್ಟಾವಧಾನ, ಮಹಾ ಮಂಗಳಾರತಿ ನಡೆಯಲಿದೆ. ರಾತ್ರಿ 8 ಗಂಟೆಗೆ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ಶ್ರೀ ಗುರುರಾಜ ಸೇವಾ ಸಂಘದ ಕಾರ್ಯಕಾರಿ ಸಮಿತಿ ತಿಳಿಸಿದೆ.

# ಕಾಶ್ಮೀರದ ಎಲ್ಲರಿಗೂ ಆಯುಷ್ಮಾನ್ ಭಾರತ್

ನವದೆಹಲಿ, ಡಿ. 26 - ಪ್ರಧಾನ ಮಂತ್ರಿ ನರೇಂದ್ರ ಮೋದಿ ಶನಿವಾರ ವಿಡಿಯೋ ಕಾನ್ಫರೆನ್ಸ್ ಮೂಲಕ ಆಯುಷ್ಮಾನ್ ಭಾರತ್ ಯೋಜನೆಯನ್ನು ಜಮ್ಮು ಮತ್ತು ಕಾಶ್ಮೀರದ ನಿವಾಸಿಗಳಿಗೆ ವಿಸ್ತರಿಸಿದ್ದಾರೆ. ಈ ಯೋಜನೆ ಸಾರ್ವತ್ರಿಕವಾಗಿದೆ. ಇದರಿಂದಾಗಿ ಜಮ್ಮು ಮತ್ತು ಕಾಶ್ಮೀರದ ಎಲ್ಲ ನಿವಾಸಿಗಳಿಗೆ ಹಾಗೂ ಸಮುದಾಯದವರಿಗೆ ಗುಣಮಟ್ಟದ ಹಾಗೂ ಕೈಗೆಟಕುವ ದರದ ಆರೋಗ್ಯ ಸೇವೆ ಲಭ್ಯವಾಗಲಿದೆ ಎಂದು ಪ್ರಧಾನ ಮಂತ್ರಿ ಕಚೇರಿ ತಿಳಿಸಿದೆ.

ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ ಮೂಲಕ ಕೇಂದ್ರಾಡಳಿತ ಪ್ರದೇಶದ ಎಲ್ಲರಿಗೂ ಐದು ಲಕ್ಷ ರೂ.ಗಳವರೆಗಿನ ಆರೋಗ್ಯ ರಕ್ಷಣೆ ಸಿಗಲಿದೆ. ಈ ಯೋಜನೆ ವಿಮೆ ಸ್ವರೂಪದಲ್ಲಿ ಕಾರ್ಯ ನಿರ್ವಹಿಸಲಿದೆ.

# ಹಿಂಡಸಘಟ್ಟದಲ್ಲಿ ತೆಪ್ಪೋತ್ಸವ



ಮಲೇಬೆನ್ನೂರು, ಡಿ.26- ಹಿಂಡಸಘಟ್ಟ ಗ್ರಾಮದ ಕಲ್ಯಾಣಿಯಲ್ಲಿ ಕಡೆ ಕಾರ್ತಿಕೋತ್ಸವದ ಅಂಗವಾಗಿ ನಂದಿಗುಡಿ ಬೃಹನ್ಮಠದ ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯದಲ್ಲಿ ಗ್ರಾಮದ ಸಿದ್ದೇಶ್ವರ ಸ್ವಾಮಿ ಹಾಗೂ ಕೊಕ್ಕನೂರು ಆಂಜನೇಯ ಸ್ವಾಮಿಯ ತೆಪ್ಪೋತ್ಸವ ವೈಭವದೊಂದಿಗೆ ಜರುಗಿತು. ವಿದ್ಯುತ್ ದೀಪಗಳ ಅಲಂಕಾರ ಮತ್ತು ಪಟಾಕಿ ಸಿಡಿತ ಎಲ್ಲರ ಕಣ್ಮನ ಸೆಳೆಯಿತು.

# ಬಸಾಪುರದಲ್ಲಿ ಶ್ರೀ ಮಹೇಶ್ವರ ಸ್ವಾಮಿ ಜಾತ್ರೋತ್ಸವ ರದ್ದು

ದಾವಣಗೆರೆ, ಡಿ.26- ನಗರ ಪಾಲಿಕೆ ವ್ಯಾಪ್ತಿಯ 21ನೇ ವಾರ್ಡ್ ಬಸಾಪುರದಲ್ಲಿ ಶ್ರೀ ಮಹೇಶ್ವರ ಸ್ವಾಮಿ ಜಾತ್ರೆಯನ್ನು ಕೋವಿಡ್-19ರ ಪ್ರಯುಕ್ತ ಸರ್ಕಾರದ ಆದೇಶ ಮತ್ತು ಸಾರ್ವಜನಿಕರ ಹಿತಾಸಕ್ತಿಯಿಂದ ರದ್ದು ಮಾಡಲಾಗಿದೆ ಎಂದು ಶ್ರೀ ಮಹೇಶ್ವರ ಸ್ವಾಮಿ ಸೇವಾ ಟ್ರಸ್ಟ್‌ನ ಟ್ರಸ್ಟಿಗಳಾದ ಯು.ಎಂ. ಸ್ವರೂಪಾನಂದ, ಸಿದ್ಧರಾಮೇಶ್ವರ ಆಲದಹಳ್ಳಿ ತಿಳಿಸಿದ್ದಾರೆ.

# ಬಿ. ವೀರಣ್ಣ ಅವರಿಗೆ ಸಹೋದರಿ ವಿಯೋಗ



ದಾವಣಗೆರೆ ಜಿಲ್ಲಾ ನಾಯಕ ಸಮಾಜದ ಅಧ್ಯಕ್ಷರೂ, ದಾವಣಗೆರೆ ನಾಯಕ ವಿದ್ಯಾರ್ಥಿ ನಿಲಯದ ಅಧ್ಯಕ್ಷರೂ ಆದ ಶ್ರೀ ಬಿ. ವೀರಣ್ಣ ಅವರ ಸಹೋದರಿ

**ಶ್ರೀಮತಿ ಬಿ.ಸಿದ್ದಮ್ಮ**

ಅವರು ದಿನಾಂಕ 26.12.2020ರ ಶನಿವಾರ ಸಂಜೆ 5.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 50 ವರ್ಷ ವಯಸ್ಸಾಗಿತ್ತು. ಪತಿ, ತಾಯಿ, ಸಹೋದರರು - ಸಹೋದರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಪಾರ್ಥಿವ ಶರೀರವನ್ನು ದಾವಣಗೆರೆಯ ವೀರ ಮದಕರಿ ನಾಯಕ (ಹೊಂಡದ ಸರ್ಕಲ್) ವೃತ್ತದ ಬಳಿ ಇರುವ ಅವರ ಸ್ವಗೃಹದಲ್ಲಿ ದಿನಾಂಕ 27.12.2020ರ ಭಾನುವಾರ ಬೆಳಿಗ್ಗೆ 11ರವರೆಗೆ ಇಡಲಾಗುವುದು. ನಂತರ ಬೆಳಿಗ್ಗೆ 11.30 ಗಂಟೆಗೆ ಸಾರ್ವಜನಿಕ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ

ಮೊಬೈಲ್ : 80951-71787

# 100 ಕೋಟಿ ರೂ. ಲೆಕ್ಕವಿರದ ಆದಾಯ ಪತ್ತೆ

ನವದೆಹಲಿ, ಡಿ. 26 - ಅಸ್ಸಾಂನಲ್ಲಿರುವ ಈಶಾನ್ಯ ಭಾರತದ ಪ್ರಮುಖ ಮೂವರು ಗುತ್ತಿಗೆದಾರರ ತಾಣಗಳ ಮೇಲೆ ದಾಳಿ ನಡೆಸಿರುವ ಆದಾಯ ತೆರಿಗೆ ಇಲಾಖೆ 100 ಕೋಟಿ ರೂ.ಗಳ ಲೆಕ್ಕವಿರದ ಆದಾಯ ಪತ್ತೆ ಮಾಡಿದೆ ಎಂದು ಸಿ.ಬಿ.ಡಿ.ಟಿ. ತಿಳಿಸಿದೆ.

ಇದೇ ದಿನಾಂಕ 22ರಂದು ಅಸ್ಸಾಂನಲ್ಲಿರುವ ಗುವಾಹತಿ, ಸಿಲಾಪತ್ತರ್ ಹಾಗೂ ಪಾಠಶಾಲಾ ಹಾಗೂ ದೆಹಲಿಗಳ 14 ತಾಣಗಳ ಮೇಲೆ ದಾಳಿ ನಡೆಸಲಾಗಿತ್ತು.

ಈ ಸಂದರ್ಭದಲ್ಲಿ 2.95 ಕೋಟಿ ರೂ. ನಗದು ವಶಪಡಿಸಿಕೊಳ್ಳಲಾಗಿದೆ. ಒಟ್ಟಾರೆ 100 ಕೋಟಿ ರೂ.ಗಳ ಲೆಕ್ಕ ನೀಡದ ಆದಾಯ ಪತ್ತೆಯಾಗಿದೆ ಎಂದು ಮಂಡಳಿ ತಿಳಿಸಿದೆ. ಆದರೆ, ದಾಳಿಗೆ ಗುರಿಯಾದ ವ್ಯಕ್ತಿಗಳ ವಿವರ ಬಹಿರಂಗ ಪಡಿಸಿಲ್ಲ.

ದಾಳಿಯ ವೇಳೆ 9.79 ಲಕ್ಷ ರೂ. ಮೌಲ್ಯದ ಆಭರಣಗಳು ಪತ್ತೆಯಾಗಿವೆ. ಇನ್ನೂ 2 ಕೋಟಿ ರೂ. ಮೌಲ್ಯದ ಆಭರಣಗಳ ಪರಿಶೀಲನೆ ನಡೆದಿದೆ. ಸಿಬಿಡಿಟಿಯು ಆದಾಯ ತೆರಿಗೆ ಇಲಾಖೆಯ ನೀತಿಗಳನ್ನು ರೂಪಿಸುತ್ತದೆ.

# ಶ್ರೀ ಗಾಯತ್ರಿ ಪೂಜೆ

ದಾವಣಗೆರೆ, ಡಿ.26- ಹೊಸ್ತಿಲ ಹುಣ್ಣಿಮೆ ಅಂಗವಾಗಿ ಸಾಮೂಹಿಕ ಶ್ರೀ ಗಾಯತ್ರಿ ಪೂಜೆ, ಉಪಾಸನೆಯು ಇದೇ ದಿನಾಂಕ 30 ರಂದು ಬೆಳಿಗ್ಗೆ 7 ಗಂಟೆಗೆ ನಗರದ ಜಯದೇವ ವೃತ್ತದಲ್ಲಿರುವ ಶ್ರೀ ಶಂಕರ ಮಠದಲ್ಲಿ ನಡೆಯಲಿದೆ.

ಬೇಕಾಗಿದ್ದಾರೆ

ಕಂಪನಿಯೊಂದರಲ್ಲಿ ರಾಜ್ಯಾದ್ಯಂತ ಈ ಕೆಳಕಂಡ ಹುದ್ದೆಗಳಿಗೆ ಅನುಭವವುಳ್ಳ ಯುವಕ - ಯುವತಿಯರು ಬೇಕಾಗಿದ್ದಾರೆ.
ಮಾರ್ಕೆಟಿಂಗ್ ಬಾಯ್ಸ್ ಸಂಬಳ - 10000/-
ಟೆಲಿಕಾಲರ್ಸ್ -(ಯುವತಿಯರು) ಸಂಬಳ -15000/-
ಬ್ರ್ಯಾಂಚ್ ಮ್ಯಾನೇಜರ್ ಸಂಬಳ-20000/-
ಆಸಕ್ತರು ಸಂಪರ್ಕಿಸಿ:
88617 34147
63641 48804

॥ ಶ್ರೀ ವೀರಭದ್ರೇಶ್ವರ ಪ್ರಸನ್ನ ॥ ॥ ಶ್ರೀ ಸಿದ್ಧರಾಮೇಶ್ವರ ಪ್ರಸನ್ನ ॥ ॥ ಶ್ರೀ ಶಿವ ನಾರಾದಮುನಿ ಪ್ರಸನ್ನ ॥
ಶಿವ
ಮದುವೆಯ ಮಮತೆಯ ಕರೆಯೋಲೆ
ಶ್ರೀ ಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ತರಳಬಾಳು ಜಗದ್ಗುರು 1108
ಶ್ರೀ ಶ್ರೀ ಶ್ರೀ ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಶ್ರೀ ತರಳಬಾಳು ಬೃಹನ್ಮಠ, ಸಿರಿಗೆರೆ, ಇವರ ಕೃಪಾಶೀರ್ವಾದದೊಂದಿಗೆ
ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕು, ಅರಳೀಕಟ್ಟೆ ಗ್ರಾಮದ ವಾಸಿ
ಲಿಂ॥ ಶ್ರೀ ಎ.ಚಂದಪ್ಪನವರ ಧರ್ಮಪತ್ನಿ ಶ್ರೀಮತಿ ಶಾಂತಮ್ಮ
ಶ್ರೀಮತಿ ಅನುಸೂಯ ಶ್ರೀ ಸಿ. ಗುರುಶಾಂತಪ್ಪ ಹಾಗೂ
ದಾವಣಗೆರೆ ಸಿಟಿ ವಾಸಿ
ಶ್ರೀಮತಿ ಗಾಯಿತ್ರಿ ಪಟೇಲ್,
ಶ್ರೀ ಅಜಿತ್ ಪಟೇಲ್
ಇವರು ಮಾಡುವ ವಿಜ್ಞಾಪನೆಗಳು
ಶ್ರೀಮತಿ ಅನುಸೂಯ ಮತ್ತು ಶ್ರೀ ಸಿ.ಗುರುಶಾಂತಪ್ಪ ಇವರ ತೃತೀಯ ಪುತ್ರಿ
ಚಿ॥ ಕುಂ॥ ಸೌ॥ ಶೈಲಜ ಎ.ಜಿ. B.E., M.B.A.
ಶ್ರೀಮತಿ ಗಾಯಿತ್ರಿ ಪಟೇಲ್ ಮತ್ತು ಶ್ರೀ ಅಜಿತ್ ಪಟೇಲ್, ದಾವಣಗೆರೆ ಇವರ ಸುಪುತ್ರ
ಚಿ॥ ರಾ॥ ಚಿಂತನ್ ಪಟೇಲ್ B.E., M.Tech
ಆರತಕ್ಷತೆ : 27-12-2020 ನೇ ಭಾನುವಾರ ಸಂಜೆ 7.30 ಕ್ಕೆ
ವಿವಾಹ ದಿನಾಂಕ: 28-12-2020ರ ಸೋಮವಾರ
ಮುಹೂರ್ತ: ಬೆಳಿಗ್ಗೆ 9.00 ರಿಂದ 9.50ರ ವರೆಗೆ
ಸ್ಥಳ: ತ್ರಿಶೂಲ್ ಕಲಾ ಭವನ
(ತ್ರಿಶೂಲ್ ಟಾಕೀಸ್ ಹತ್ತಿರ, ಪಿ.ಬಿ.ರಸ್ತೆ) ಕೆ.ಬಿ.ಬಡಾವಣೆ, ದಾವಣಗೆರೆ.
ತಮ್ಮ ಆಗಮನಾಭಿಲಾಷಿಗಳು
ಶ್ರೀಮತಿ ಅನಸೂಯ ಮತ್ತು ಶ್ರೀ ಸಿ. ಗುರುಶಾಂತಪ್ಪ, ಅರಳೀಕಟ್ಟೆ.
ಶ್ರೀಮತಿ ಗಾಯಿತ್ರಿ ಪಟೇಲ್, B.E. ಶ್ರೀ ಅಜಿತ್ ಪಟೇಲ್,
B.E., M.Tech. AEE (KPWD) ದಾವಣಗೆರೆ.
ಡಾ॥ ಸುಮನ್ ಎ.ಜಿ. ಪಟೇಲ್, M.B.B.S.
ಶ್ರೀ ಎ.ಸಿ. ಬಸವರಾಜ್ ದಾವಣಗೆರೆ
ಶ್ರೀ ಸಿ. ಗುರುಶಾಂತಪ್ಪ ಮಾಜಿ ಗ್ರಾ.ಪಂ.ಸದಸ್ಯರು, ಅರಳೀಕಟ್ಟೆ.
ಶ್ರೀಮತಿ ಅಂಬುಜ ಮತ್ತು ಶ್ರೀ ಎ.ಸಿ.ಬಸವರಾಜ್, ದಾವಣಗೆರೆ.
ಶ್ರೀಮತಿ ಎ.ಜಿ.ಶಿಲ್ಪ M.Sc.(Ag) ಶ್ರೀ ಡಾ॥ ಎಸ್.ಬಿ.ಯೋಗೀಶ್, K.A.S., P.H.D.
(ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಮಂಗಳೂರು)
ಶ್ರೀಮತಿ ಡಾ॥ ಎ.ಜಿ.ಶೀಲಾ, M.B.B.S.(MD) (Dermatology)
ಶ್ರೀ ಡಾ॥ ಸಂತೋಷ್ ವಿ.ಜಿ, M.B.B.S. M.D., (Pulmonary Medicine)
ಚಿ॥ ಎ.ಬಿ.ಶಿವರಾಜ್, B.E., M.B.A. (London). ಚಿ॥ ಎ.ಬಿ. ಭರತ್, B.B.A., M.B.A. (London).
ಪುಟಾಣಿಗಳಾದ ಎಸ್.ವೈ. ರಿಧಿ, ಎಸ್.ವೈ. ರಿಯಾನ್ಸ




JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte